ಹೇಳಿದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ : ನನಗೆ ಪ್ರಾರಂಭ ಮಾಡಿ ಎಂದು ಹೇಳಿದ್ದಾರೆ. I am sorry (ಗೊಂದಲ) ಯರಿಗಾದರೂ ಒಬ್ಬರಿಗೆ ಹೇಳಿ ಸರ್.

ಶ್ರೀ ವಾಟಾಳ ನಾಗರಾಜ್ : ಸರ್ ನಾನೇನು ಮಾಡಬೇಕು ಈಗ ?

ಅಧ್ಯಕ್ಷರು : ಮಾಧುಸ್ವಾಮಿಯವರೆ, ಅವರೇನೋ ಶೂನ್ಯ ವೇಳೆಯಲ್ಲಿ ಯಾವುದೋ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅದು ದಿವಸವೂ ಇದ್ದದ್ದೇ ಅಲ್ಲವೇ ಸರ್. ಹೊಸದೇನಾದರೂ ಇದ್ದರೆ ಹೇಳಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಕೇಳಿದರೆ question hour ಅದಮೇಲೆ zero hour ಎಂದು ಹೇಳುತ್ತೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ: zero hour ಅನ್ನು ಮೊದಲೇ ಹೇಗೆ ತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು : ಹೌದು. ಎಲ್ಲರಿಗೂ ಅದೇ ತರಹ ಹೇಳಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ: ಇರಲಿ, question hour ಆಗುವವರೆಗಾದರೂ ಇರಿ.

ಅಧ್ಯಕ್ಷರು : One should fall in line. ವಾಟಾಳ್ ನಾಗರಾಜ್‌ರವರೇ, ನೀವು ಆಮೇಲೆ ಮಾತನಾಡಿ. ಅವರು ಮೊದಲು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ನಾನು ಒಂದೇ ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು : ಒಬ್ಬರಿಗೆ ಅವಕಾಶ ಕೊಟ್ಟರೆ ಎಲ್ಲರೂ ಅವಕಾಶ ಕೇಳುತ್ತಾರೆ. ಬೇರೆಯವರು ಸಹ ಶೂನ್ಯ ವೇಳೆಯಲ್ಲಿ ಮಾತನಾಡುವುದಕ್ಕೇ ಕೇಳಿಕೊಂಡಿದ್ದಾರೆ. ತಾವು ಕುಳಿತುಕೊಳ್ಳಿ. ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ.

2. ವಿತ್ತೀಯ ಕಾರ್ಯಕಲಾಪ
2007–2008ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ

ಶ್ರೀ ಜೆ.ಸಿ. ಮಾಧುಸ್ವಾಮಿ : (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು 2007–08 ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದರು. ಇದರಲ್ಲಿ ಅವರು ಸುಮಾರು ಮೂರು ತಿಂಗಳುಗಳ ಕಾಲ vote an account ತೆಗೆದುಕೊಂಡು ಸರ್ಕಾರ ನಡೆಸಿ ಈ ಸಭೆಯಲ್ಲಿ ಅಭಿಯಾಚನೆಗಳನ್ನು ಮಂಡಿಸಿ ಬೇಡಿಕೆಗಳನ್ನು ಇಲಾಖಾವಾರು ಇಡುತ್ತಿದ್ದಾರೆ. ಇದರಲ್ಲಿ ಭಾಗವಹಿಸಿ

ಮಾತನಾಡುತ್ತಾ, ಬಹುಶಃ ಪ್ರಾರಂಭದಲ್ಲಿ ನಾನು ಒಂದೆರಡು ಮೂರು ಮಾತುಗಳನ್ನು ಹೇಳುತ್ತೇನೆ. ಅವರು ನಿನ್ನೆ ಇಲ್ಲಿ ಮಾತನಾಡುತ್ತಾ ಕೇಳಿದರು. ನಾವೆಲ್ಲ ಸೇರಿ ಏನಾದರೊಂದು ಮಾಡಬೇಕು, ರೈತರನ್ನು ಉಳಿಸಬೇಕು, ಹಳ್ಳಿಗಾಡುಗಳಿಗೆ ಸಹಾಯ ಮಾಡಬೇಕೆಂದು ಹೇಳಿದರು. ಯಾವುದೇ ಕಾರ್ಯಕ್ರಮ ಬಜೆಟ್‌ನಲ್ಲಿ ಪ್ರತಿಬಿಂಬ ಆಗಿದ್ದು ಅಷ್ಟೊಂದು ಸಮರ್ಪಕವಾಗಿದೆ ಎಂದು ನಾವೆಲ್ಲ ಆ ದಿವಸ ಮಾತನಾಡಿದ್ದೆವು. ಇವತ್ತು ಅದನ್ನೇ ಪುನರುಚ್ಚರಿಸಿ, ನಾನು ಆರಂಭವಾಗಿ ಲೋಕೋಪಯೋಗಿ ಇಲಾಖೆಯ ಮೇಲೆ ಸ್ವಲ್ಪ ಮಾತನಾಡಿ ಆ ನಂತರ ತಾವು ಕಾಲಾವಕಾಶ ಕೊಟ್ಟರೆ ಬೇರೆ ಇಲಾಖೆಯ ಬಗ್ಗೆ ಮಾತನಾಡುತ್ತೇನೆ. " Roads are the Lifeline for our State. Where the other modes of transportation are not very well developed, properly laid and well maintained roads have the potential to the spur the economic acitvity and achieve the object of economic growth with equity. Maintenance of already laid roads is importatnt to safeguard the public assets and to deserve..." ಕನ್ನಡ ಪ್ರತಿ ಸಿಕ್ಕಲಿಲ್ಲವೆಂದು ನಾನು ಇಂಗ್ಲೀಷ್‌ನಲ್ಲಿ ಓದುತ್ತಿದ್ದೇನೆ. ನಾನು ನಿನ್ನೆ ಕನ್ನಡದ ಒಂದು ಪ್ರತಿ ಕೊಡಿ ಎಂದು ಕೇಳಿದ್ದೆ, " In this direction, I propose to increase the allocation for maintenance of major district roads from Rs. 132 crore to 300 crore... ನಮ್ಮ ರಾಜ್ಯದಲ್ಲಿ ಅತ್ಯುತ್ತಮವಾಗಿ ಅಭಿವೃದ್ಧಿ ಹೊಂದಿರುವ ಜಲಮಾರ್ಗ ಮತ್ತು ವಾಯುಮಾರ್ಗ ವ್ಯವಸ್ಥೆ ಇಲ್ಲದೇ ಇರುವುದರಿಂದ ಭೂ ಮಾರ್ಗದ ರಸ್ತೆಗಳೇ ನಮ್ಮ ರಾಜ್ಯದ ಜೀವನಾಡಿಗಳಾಗಿವೆ. ಅತ್ಯುತ್ತಮವಾಗಿ ನಿರ್ಮಿಸಿರುವ ಮತ್ತು ಉತ್ತಮವಾಗಿ ನಿರ್ವಹಿಸಿರುವ ರಸ್ತೆಗಳು, ಆರ್ಥಿಕ ಚಟುವಟಿಕೆಯನ್ನು ಉತ್ತೇಜಿಸುತ್ತವೆ. ನಾನು ಅಲ್ಲಿಗೆ ನಿಲ್ಲಿಸುತ್ತೇನೆ. ಅತ್ಯತ್ತುಮವಾಗಿ ನಿರ್ಮಿಸಿರುವ ರಸ್ತೆಗಳು ನಮ್ಮ ಆರ್ಥಿಕ ಚಟುವಟಿಕೆಯನ್ನು ನಿರ್ವಹಿಸುತ್ತವೆ. For any development, ಯಾವುದೇ ಆರ್ಥಿಕ ಅಭಿವೃದ್ಧಿಗೆ the mode of transport ನಾವೇನು ಸಾಮಾನು ಸರಂಜಾಮನ್ನು ಸಾಗಾಣಿಕೆ ಮಾಡುತ್ತೇವೆ ಅದು ಬಹಳ ಮುಖ್ಯ. ಕರ್ನಾಟಕಕ್ಕೆ ರೈಲು ಮಾರ್ಗ ತೀರ ಕಡಿಮೆಯಿದ್ದು ನಮ್ಮ ಜಲಮಾರ್ಗ ಕೂಡ ಒಂದೇ ಕಡೆ ಕೇಂದ್ರೀಕೃತವಾಗಿರುವುದರಿಂದ ನಾವು ರಸ್ತೆಗಳ ಮೇಲೆ ಆಧಾರವಾಗಿರುವಂಥ ರಾಜ್ಯ. ನೀವೇನಾದರೂ ಆ ಕಡೆಯಿಂದ ತುಮಕೂರು, ಹೊಸಕೋಟೆ, ಮೈಸೂರು, ಕಡೆಯಿಂದ ಬಂದರೆ ಎಷ್ಟೊಂದು ಸುಭಿಕ್ಷವಾದ ರಸ್ತೆ ಮಾರ್ಗ ನಮ್ಮದು ಇದೆ ಎಂದು ನಮಗೆ ಗೊತ್ತಾಗಿ ಬಿಡುತ್ತದೆ. NH4, NH7, ಕಡೆಯಿಂದ ಬಂದರೆ, ಎಷ್ಟು ಒಳ್ಳೆಯ ಸುಭಿಕ್ಷವಾದ mode of transport ಹೊಂದಿದ್ದೇವೆ. ಇನ್ನು ಸ್ವಲ್ಪ ಆಚೆಗೆ ಬಂದರೆ, ಬಳ್ಳಾರಿ, ಚಿತ್ರದುರ್ಗ, ಹೊಸಪೇಟೆ, ಚಿಕ್ಕನಾಯಕನಹಳ್ಳಿ, ಆ ಕಡೆಯಿಂದ ಬಂದರೆ ಎಷ್ಟು ಅಭಿವೃದ್ಧಿಯಾಗಿದ್ದೇವೆ, ರಸ್ತೆ ಆ ಕಡೆಯಿಂದ ಈ ಕಡೆಗೆ ಪಟ್ಟಣಗಳಲ್ಲಿ ಬೇಡ, ಹಳ್ಳಿಗಳಲ್ಲೂ ಕೂಡ ದಾಟಲಿಕ್ಕೆ ಎಷ್ಟೊಂದು ಬಿಜಿಯಾಗಿದ್ದೇವೆಂದು ನಮಗೆ ಅರ್ಥವಾಗುತ್ತದೆ. ಇಂಥ ಒಂದು ಸುಭಿಕ್ಷವಾದ ಟ್ರಾಫಿಕ್ ಇಟ್ಟುಕೊಂಡು ರಾಜ್ಯದಲ್ಲಿ ರಸ್ತೆಗಳ ಸ್ಥಿತಿ ಏನಾಗಿದೆ ಎಂದು ನಾವು ಚರ್ಚಿಸಬೇಕಾಗುತ್ತದೆ. ನಾನು ಪ್ರಮುಖವಾಗಿ ರಾಜ್ಯ ಹೆದ್ದಾರಿಗಳ ಬಗ್ಗೆ ಮೊದಲನೆಯದಾಗಿ ಮಾತನಾಡುತ್ತೇನೆ.

ಈ ರಾಜ್ಯ ಹೆದ್ದಾರಿಗಳು ಏನಾಗಿವೆ ? ಬಹಳ ನೋವಿನಿಂದ ಹೇಳಬೇಕಾಗುತ್ತದೆ. ಇದರ ಮೇಂಟೆನೆನ್ಸ್ ಮತ್ತು ಪುನರ್ ನಿರ್ಮಾಣಕ್ಕೆ KRDCL ಎನ್ನುವ ಒಂದು ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ನಾನು ಹಳ್ಳಿಯಿಂದ ಬಂದಿರುವವನು KRDCL ಎಂದರೆ ಏನೆಂದು ಸ್ವಲ್ಪ ಹೀಗೆ ಚರ್ಚೆ ಮಾಡುತ್ತಿದ್ದೆವು. ಯಾರೋ ಒಬ್ಬರು, Karnataka Ravenna Development Corporation Limited ಎಂದಿರಬಹುದು ಎಂದರು. ಇನ್ನೊಬ್ಬರು ಇಲ್ಲಾ ಸಾರ್, ಕುಮಾರಸ್ವಾಮಿ, ದೇವೇಗೌಡರು, ರೇವಣ್ಣ, ಚೆನ್ನಮ್ಮನವರ ಲಿಮಿಟೆಡ್ ಇರಬಹುದು ಎಂದರು ಏನು ಹೀಗೆಲ್ಲಾ ಮಾತನಾಡುತ್ತಿದ್ದೀರಿ ಎಂದು KRDCL ನಲ್ಲಿ work allot ಮಾಡಿರುವುದನ್ನು ನೋಡಬೇಕೆಂದು ಬಹಳ ಆಸೆಯಾಯಿತು. ಸನ್ಮಾನ್ಯ ಯಡಿಯೂರಪ್ಪನವರೇ, ನಾನು ಇವತ್ತು ಇಲ್ಲಿ ಕೇಳುತ್ತಿದ್ದೇನೆ. ಇಲಾಖೆಯ ಬೇಡಿಕೆಯನ್ನು ನಾವು ಮಂಜೂರು ಮಾಡಬೇಕೇ ? ಅಥವಾ ಸನ್ಮಾನ್ಯ ರೇವಣ್ಣನವರ ಬೇಡಿಕೆಯನ್ನು ನಾವು ಇಲ್ಲಿ ಮಂಜೂರು ಮಾಡಬೇಕೆ ? ಈ ಶಾಸನ ಸಭೆಗೆ ಸ್ಪಷ್ಟವಾಗಬೇಕು. ಈ ಬೇಡಿಕೆ ಇಲಾಖೆಯದೋ ? ನಿಮ್ಮ ಮಂತ್ರಿಗಳದ್ದೋ ? ಇದು ಸ್ಪಷ್ಟವಾಗಬೇಕು. ಇಲಾಖೆಯ ಬೇಡಿಕೆ ಎಂದರೆ ವೆಚ್ಚ ಮಾಡಲಿಕ್ಕೆ ಒಂದು ನೀತಿ, ನಿಯಮ, ಶಿಸ್ತು, ಸಮಗ್ರವಾದ ರಾಜ್ಯದ ಅಭಿವೃದ್ಧಿ, ಇಡೀ ಐದೂವರೆ ಕೋಟಿ ಜನಗಳ ವ್ಯವಸ್ಥೆ ಇದು involve ಆಗಬೇಕಾಗುತ್ತದೆ. ನಾನು ಕೂಡ ಮೂರನೇ ಸಲ ಈ ಶಾಸನ ಸಭೆಯಲ್ಲಿ ನಿಂತು ಮಾತನಾಡುತ್ತಿದ್ದೇನೆ. ಏನಾದರೊಂದು ಮಾನದಂಡ ಇಟ್ಟುಕೊಂಡು ರಸ್ತೆಗಳ ಮೇಂಟೆನೆನ್ಸ್, ರಸ್ತೆಗಳನ್ನು ಮಾಡುವುದು, ಹೊಸ ರಸ್ತೆಗಳನ್ನು ಅಭಿವೃದ್ಧಿ ಮಾಡುವುದು, ಈ ಕಾರ್ಯಕ್ರಮವಾಗುತ್ತಿತ್ತು. ನಾನು ಮನಸ್ಸು ನೊಂದು ಹೇಳಬೇಕಾಗಿದೆ, ಈ ಮೂರು ವರ್ಷ ಆ ರೀತಿ ಕಾರ್ಯಕ್ರಮ ಎಲ್ಲೂ ಈ ರಾಜ್ಯದಲ್ಲಿ ಆಗಲಿಲ್ಲ. ಯಾರ್ಯಾರಿಗೆ ಮರ್ಜಿ ಇದೆ, ಯಾರ್ಯಾರಿಗೆ ಓಲೈಸಲಿಕ್ಕೆ ಶಕ್ತಿ ಇದೆ, ಯಾರ್ಯಾರಿಗೆ ನಿಮ್ಮ ಪಕ್ಷದ ಅಥವಾ ನಿಮಗೆ ಬೇಕಾದವರ ಸಾಂಗತ್ಯವಿದೆ, ಆ ಭಾಗದಲ್ಲಿ ಮಾತ್ರ ರಸ್ತೆಗಳಾಗಿವೆ. ಆ ಭಾಗದಲ್ಲಿ ಮಾತ್ರ ರಸ್ತೆ ಅಭಿವೃದ್ಧಿಯಾಗುತ್ತಿವೆ. ಅದು National Highway ಯಿಂದ ಹಿಡಿದು, State Highway ಯಿಂದ ಹಿಡಿದು CRF Fund ನಿಂದ ಹಿಡಿದು, ನಬಾರ್ಡ್‌ನಿಂದ ಹಿಡಿದು, 11th, 12th, 13th Finance Commission ನಿಂದ ಹಿಡಿದು, ನಿಮ್ಮ 11,12,13 RIDF ನಿಂದ ಹಿಡಿದು, ನಾನು ಇಲ್ಲಿ ಪಟ್ಟಿಗಳನ್ನು ತಂದು ಇಟ್ಟುಕೊಂಡಿದ್ದೇನೆ, ಎಷ್ಟರ ಮಟ್ಟಿಗೆ ಈ ರಸ್ತೆಗಳ ಆಯ್ಕೆ ಕೆಲಸ ನಡೆಯುತ್ತಿದೆ ? I demand, ಯಾವ ಆಧಾರದ ಮೇಲೆ ಈ ರಾಜ್ಯದಲ್ಲಿ ಇವತ್ತು ರೋಡ್ ಅಭಿವೃದ್ಧಿ ಕೆಲಸ ಮಾಡುತ್ತಿದ್ದೀರಿ ? ನಾನು ಈ ಮನೆಯ ಸದಸ್ಯ. ನಾನು ನಿಮ್ಮ ಈ ಬೇಡಿಕೆಯನ್ನು ಪಾಸ್ ಮಾಡಲಿಕ್ಕೆ ಕೈ ಎತ್ತಬೇಕಾಗಿರುವವನು. ಏಕೆ ನಿಮಗೆ ಕೈ ಎತ್ತಬೇಕು ? ಸರ್ಕಾರದ ಬೇಡಿಕೆ ಅಲ್ಲವೆ ಅಲ್ಲವಲ್ಲ. ನಾನು ಬಹಳ ನೊಂದು ಹೇಳುತ್ತಿದ್ದೇನೆ. ಇವರು ಕೊಟ್ಟಿರುವ ದುಡ್ಡು ಎಲ್ಲೆಲ್ಲಿ ಖರ್ಚಾಗುತ್ತದೆಂದು ಯಾರಾದರೂ ಕುಳಿತು ನೋಡುವುದಕ್ಕಾಗಿದೆಯೆ ? 2 ರಿಂದ 3 ಬಹಳ ಎಂದರೆ, 4-5 ಕ್ಷೇತ್ರಗಳನ್ನು ಅಭಿವೃದ್ಧಿ ಮಾಡುವುದು, ನಾಳೆ ಅವರು ಚುನಾವಣೆಗೆ ಖರ್ಚು ಮಾಡುವ ಅಗತ್ಯವಿಲ್ಲದೆ ಇದೇ ಹಣದಲ್ಲಿ ಕಾಮಗಾರಿ ಮಾಡಿ ಇವರು ಮಾತ್ರ ಈ

ಶಾಸನ ಸಭೆಗೆ ಬರುವುದಕ್ಕೆ ಸಮರ್ಥರು ಎಂದು ಎನ್ನಿಸಿಕೊಳ್ಳುವುದು, ಇವರು ಮಾತ್ರ ಅಭಿವೃದ್ಧಿ ಮಾಡಲಿಕ್ಕೆ ಶ್ರೇಷ್ಠರು, ಧನ್ಯರು, ಎನಿಸಿಕೊಂಡು ಸರ್ಕಾರಿ R eÁ £ÀAÀÄ£ÉAiÀÄ ¸ÀgÀPÁgÀ ½Ä ¨É ½ÃVgÀÄ Ãj J AzÀÄ £Á £ÁÄ Charge ಮಾಡುತ್ತಿದ್ದೇನೆ. ಪ್ಯಾಕೇಜ್ ಇರಬಹುದು, ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಯಾರಿಗೆ ಇವತ್ತು ಅಧಿಕಾರವನ್ನು ಕೊಟ್ಟು ಈ ಶಾಸನ ಸಭೆ ನಿಮಗೆ ಮಂತ್ರಿಗಳಾಗಿ, ಮುಖ್ಯಮಂತ್ರಿಗಳಾಗಿ, ಉಪ ಮುಖ್ಯಮಂತ್ರಿಗಳಾಗಿ ಎಂದು ಅಧಿಕಾರ ಕೊಟ್ಟಿದೆ. ನೀವು ರಾಜ್ಯಕ್ಕೆ ಈ ಮುಖ್ಯಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ, ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದೀರಿ ಎಂದು ಭಾವಿಸಲಿಕ್ಕೆ ಯಾವುದೇ ಆಧಾರವಿಲ್ಲ. ಯಾವುದೇ ಮಾಹಿತಿಯಿಲ್ಲ. ಶಿವಮೊಗ್ಗದಲ್ಲಿ ನಡೆಯುತ್ತಿರುವ ಕೆಲಸಕ್ಕೆ, ರಾಮನಗರದಲ್ಲಿ ನಡೆಯುತ್ತಿರುವ ಕೆಲಸಕ್ಕೆ ಹಾಸನದಲ್ಲಿ ನಡೆಯುತ್ತಿರುವ ಕೆಲಸಕ್ಕೆ ನಮ್ಮ ಕ್ಷೇತ್ರಗಳನ್ನು ಹೋಲಿಸಿದರೆ, ಹತ್ತನೇ ಒಂದು ಭಾಗ, ಬೇಡ ನೂರನೇ ಒಂದು ಭಾಗಕ್ಕೂ ಕೂಡ ನಾವು ಇವತ್ತು ಹೋಲಿಕೆ ಮಾಡುವ ಸ್ಥಿತಿಯಲ್ಲಿಲ್ಲ, ಇದರಲ್ಲಿ ಏನು ನೀವು ಸ್ವಂತ ದುಡ್ಡು ಹಾಕಿದ್ದೀರಾ ? ನಿಮ್ಮ ಪಕ್ಷದ ದುಡ್ಡು ಹಾಕಿದ್ದೀರಾ ? ನಿಮ್ಮ ಜಾತಿ ದುಡ್ಡು ಹಾಕಿದ್ದೀರಾ ? ನಿಮ್ಮ ಮಠಗಳ ದುಡ್ಡು ಹಾಕಿದ್ದೀರಾ ? ನಮ್ಮ ಹತ್ತಿರ ಇರುವ ಜನ ಕಂದಾಯ ಕಟ್ಟುವುದಿಲ್ಲವೇ ? ನಾವು ಈ ದೇಶಕ್ಕೆ ಪ್ರಜೆಗಳಲ್ಲವೆ ? ನಮಗೆ ಇಲ್ಲಿ ಬಾಳುವ ಹಕ್ಕು ಇಲ್ಲವೇ ? ಇದನ್ನು ಯಾರಾದರೂ ಬೇಡಿಕೆ ಎಂದು ಕರೆಯುತ್ತಾರೆಯೇ ? ಇದು ಬೇಡಿಕೆಯಲ್ಲ, ಇದು ಸ್ವಜನಪಕ್ಷಪಾತ ಸ್ವಜನಪಕ್ಷಪಾತ ಮಾಡಿ ಈ ಇಲಾಖೆಗಳನ್ನು ನಡೆಸುತ್ತಿದ್ದೀರೆಂದು ನಾನು ನೇರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ಉದ್ದುದ್ದ ಭಾಷಣವನ್ನು ಮಾಡುತ್ತೀರಿ. ಮತ್ತೆ ಕಾರ್ಯಕ್ರಮಗಳ ಬಗ್ಗೆ ಪುಸ್ತಕದಲ್ಲಿ ಓದುತ್ತೀರಿ. Karnataka State Highway Improvement Project with external aid NABARD with external aid. RIDF with external aid. ತಾವೇ ಹೇಳಿರುವಂತೆಯೇ ಕೋಟ್ಯಾಂತರ ರೂಪಾಯಿಗಳನ್ನು ಅಂದರೆ, 2253 ಕೋಟಿ ರೂಪಾಯಿಗಳನ್ನು PWD ಒಂದಕ್ಕೆ ಈ ರಾಜ್ಯದ ರಾಜಸ್ವದಿಂದ ಖರ್ಚು ಮಾಡುತ್ತಿದ್ದೀರಿ. ಇದರ ಜೊತೆಗೆ ಕೇಂದ್ರ ಸರ್ಕಾರ ನಿಮಗೆ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣದಲ್ಲಿ ಹಣ ಕೊಡುತ್ತಿದೆ. ಮತ್ತೆ economic importance ಎಂದು ರಸ್ತೆಗಳ ಹೆಡ್‌ನಲ್ಲಿ ಮತ್ತೆ CRF ಕೆಳಗಡೆ ಹಣವನ್ನು ನಿಮಗೆ ಕೇಂದ್ರ ಸರ್ಕಾರ ಕೊಡುತ್ತಿದೆ. ಹಾಗೆಯೇ, ಕೇಂದ್ರ ಸರ್ಕಾರ NCCF ಕೆಳಗಡೆ ಹಣ ಕೊಡುತ್ತಿದೆ. ಇದು ಅಲ್ಲದೆ ಇವತ್ತಿನ ದಿವಸ ರೂರಲ್ ಡೆವಲಪ್‌ಮೆಂಟ್ ಪಂಚಾಯತ್ ರಾಜ್ ಇಲಾಖೆಯಿಂದ ರಸ್ತೆಗಳಿಗೆ ಖರ್ಚು ಮಾಡುತ್ತಿದ್ದೀರಿ. ಮತ್ತೆ ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನೆ ಮತ್ತು ಸಡಕ್ ಕಾರ್ಯಕ್ರಮದಲ್ಲಿ ಕೂಡ ನೀವು ಖರ್ಚು ಮಾಡುತ್ತಿದ್ದೀರಿ. ಆದ್ದರಿಂದ, ಇದಕ್ಕೆಲ್ಲಾ ಸಂಬಂಧಪಟ್ಟಂಥ ಪೂರ್ಣ ಮಾಹಿತಿಯ White paper ಅನ್ನು ಈ ಸಭೆಯ ಮುಂದೆ ತಾವು ಮಂಡಿಸಬೇಕು. ಇವತ್ತಿನ ದಿವಸ ಈ ರಾಜ್ಯದ ರಸ್ತೆಗಳು, ಕಟ್ಟಡಗಳು, ಸೇತುವೆಗಳು ಪಂಚಾಯತ್‌ನಿಂದಿಡಿದು ಇಲ್ಲಿಯವರೆಗೆ ಯಾವ್ಯಾವ ಯೋಜನೆಗಳ ಕೆಳಗಡೆ ಎಷ್ಟು ಪ್ರಮಾಣದಲ್ಲಿ ಆಗುತ್ತದೆಂಬುದರ ಬಗ್ಗೆ

ತಾವು White paper ಅನ್ನು ಮಂಡಿಸಬೇಕು. ಮಾನ್ಯ ಸಭಾಧ್ಯಕ್ಷರು ಇದರ ಬಗ್ಗೆ ಗಮನಹರಿಸಿದ್ದಾರೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ನಾನು ಇವತ್ತು ಬೆಳಿಗ್ಗೆ ಕುಳಿತುಕೊಂಡು ನೋಡೋಣವೆಂದು ಈ ರಸ್ತೆಗಳ ಬಗ್ಗೆ ಒಂದು ಲಿಸ್ಟ್ ಮಾಡಿದೆ List of RIDF-10 ಮಾಡಿದ್ದೇನೆ. ಮತ್ತೆ RIDF-11 ಇವರು ಮತ್ತು ಅವರು ಜೊತೆಯಲ್ಲಿದ್ದಂಥ ಸಂದರ್ಭದಲ್ಲಿ ಇದನ್ನು ಮಾಡಲಾಗಿದೆ. ಇದರಲ್ಲಿ ಏನಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರಲ್ಲಿ ಇವರು ಹೇಗೆ ಕೊಡುತ್ತಾರೆಂದರೆ, ಉತ್ತರಹಳ್ಳಿ ಕ್ಷೇತ್ರದ ಬಗ್ಗೆ ಹೇಳುವುದಾದರೆ represented by Honorable Minister, ಇಲ್ಲಿಗೆ 31 ಲಕ್ಷ, ಚನ್ನಪಟ್ಟಣ75 ಲಕ್ಷ ದೊಡ್ಡಬಳ್ಳಾಪುರ 103 ಲಕ್ಷ, ನೆಲಮಂಗಲ 97 ಲಕ್ಷ, ದೇವನಹಳ್ಳಿ 131 ಲಕ್ಷ, ರಾಮನಗರ 304 ಲಕ್ಷ, ಕನಕಪುರ 319 ಲಕ್ಷ, ಮಾಗಡಿ 204 ಲಕ್ಷ ಸಾತನೂರು 146 ಲಕ್ಷ, ಹೊಸಕೋಟೆ 120 ಲಕ್ಷ, ಯಲಹಂಕ 110 ಲಕ್ಷ ರೂಪಾಯಿಗಳು. RIDF–11 ರಲ್ಲಿ ಬೆಂಗಳೂರು ಗ್ರಾಮಾಂತರ ಪ್ರದೇಶಗಳಿಗೆ ಕೊಟ್ಟಿರತಕ್ಕಂಥದು. ಮತ್ತೆ ಕೋಲಾರ ಜಿಲ್ಲೆಗಳಾದ ಬಾಗೇಪಲ್ಲಿಗೆ 102 ಲಕ್ಷ, ಸಿ.ಬಿ. ಪುರ 106 ಲಕ್ಷ, ಚಿಂತಾಮಣಿ 83 ಲಕ್ಷ, ವೇಮಗಲ್ 113 ಲಕ್ಷ, ಗೌರಿಬಿದನೂರು 112 ಲಕ್ಷ, ಮಾಲೂರು160 ಲಕ್ಷ, ಮುಳಬಾಗಿಲು 156 ಲಕ್ಷ, ಶಿಡ್ಲಘಟ್ಟ 164 ಲಕ್ಷ, ಶ್ರೀನಿವಾಸಪುರ 100 ಲಕ್ಷ, ಮತ್ತು ಕೋಲಾರ 206 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಕೋಲಾರಕ್ಕೆ ಹೆಚ್ಚು ಏಕೆಂದರೆ, ಸನ್ಮಾನ್ಯ ಶ್ರೀನಿವಾಸ ಗೌಡರು ಆ ಸಂದರ್ಭದಲ್ಲಿ ಮಿನಿಸ್ಟರ್ ಆಗಿದ್ದರೆಂದು ನಾನು ತಿಳಿದುಕೊಳ್ಳುತ್ತೇನೆ. ಕೋಲಾರ ಸಿಟಿ ಏರಿಯಾ ಮತ್ತು ಕೋಲಾರ ರೂರಲ್ ಏರಿಯಾ ಎಷ್ಟು ಬರುತ್ತದೆಂಬುದನ್ನು ತಾವು ಚಿಂತಾಮಣಿಗೆ ಹೋಲಿಸಬೇಕು. ಏಕೆಂದರೆ ಚಿಂತಾಮಣಿಗೆ ಕೇವಲ 83 ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಮತ್ತೆ ಶ್ರೀನಿವಾಸಪುರಕ್ಕೂ ಸಹ ಹೋಲಿಸಿ ನೋಡಬೇಕು. ರಸ್ತೆಗಳು ಯಾವ ಕ್ಷೇತ್ರದಲ್ಲಿ ಹೆಚ್ಚಿರಬಹುದು ಮತ್ತೆ ರಸ್ತೆಗಳ ಉದ್ದ ಯಾವ ಕ್ಷೇತ್ರದಲ್ಲಿ ಜಾಸ್ತಿಯಿರಬಹುದೆಂದು ಲೆಕ್ಕ ಮಾಡಬೇಕಾಗುತ್ತದೆ. ಕೇವಲ ಕ್ಷೇತ್ರವಾರು ಮಾಡುವುದಕ್ಕೆ ಆಗುವುದಿಲ್ಲ. ಇನ್ನು ತುಮಕೂರು ಜಿಲ್ಲೆಯ ಬಗ್ಗೆ ಹೇಳುವುದಾದರೆ, ಚಿಕ್ಕನಾಯಕನ ಹಳ್ಳಿಗೆ 132 ಲಕ್ಷ ಕಳ್ಳಂಬೆಳ್ಳ 80 ಲಕ್ಷ, ಗುಬ್ಬಿಗೆ 116 ಲಕ್ಷ ತಿಪಟೂರಿಗೆ 152 ಲಕ್ಷ, ಶಿರಾಕ್ಕೆ 130 ಲಕ್ಷ, ಬೆಳ್ಳಾವಿಗೆ 34.5 ಲಕ್ಷ, ಪಾವಗಡಕ್ಕೆ 162 ಲಕ್ಷ ಮಧುಗಿರಿಗೆ 126 ಲಕ್ಷ, ಕುಣಿಗಲ್‌ಗೆ 130 ಲಕ್ಷ, ಹುಲಿಯೂರುದುರ್ಗಕ್ಕೆ 233 ಲಕ್ಷ, ತುಮಕೂರಿಗೆ 81 ಲಕ್ಷ ತುರುವೇಕೆರೆಗೆ 145 ಲಕ್ಷ, ಕೊರಟಗೆರೆಗೆ 191 ಲಕ್ಷ ರೂಪಾಯಿ ಕೊಟ್ಟಿದ್ದೀರಿ, ತುಮಕೂರು ಮತ್ತು ಕಳ್ಳಬೆಂಳ್ಳ ಕ್ಷೇತ್ರದಲ್ಲಿ ನಿಮ್ಮ ಪಾರ್ಟಿಯ ಶಾಸಕರಿದ್ದರು. ಅನಂತರ RIDF-12 ನಲ್ಲಿ ಕೊಟ್ಟಿರತಕ್ಕಂಥದರ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :– RIDF-12 ರಲ್ಲಿ ಉತ್ತರ ಕರ್ನಾಟಕದ ಕಡೆ ನೀಡಿರತಕ್ಕಂಥದ್ದರ ಬಗ್ಗೆ ಕೂಡ ಸ್ವಲ್ಪ ಹೇಳಿ, ನೀವು ದಕ್ಷಿಣದ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಹೇಳುತ್ತಿದ್ದೀರಿ. ಉತ್ತರ ಕರ್ನಾಟಕ ಜಿಲ್ಲೆಗಳ ಕಡೆ ಇರತಕ್ಕಂಥ ಪರಿಸ್ಥಿತಿ ಬಗ್ಗೆ ಕೂಡ ಸ್ವಲ್ಪ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : – RIDF-12 ರಲ್ಲಿ ಪಾವಗಡ 136 ಲಕ್ಷ ಮತ್ತು ಶಿರಾ 228 ಲಕ್ಷ ತಿಪಟೂರು 180 ಲಕ್ಷ, ತುರುವೇಕೆರೆಗೆ 243 ಲಕ್ಷ, ಕೊರಟಗೆರೆಗೆ 90 ಲಕ್ಷ, ಮಧುಗಿರಿಗೆ 50 ಲಕ್ಷ, ಬೆಳ್ಳಾವಿಗೆ 63 ಲಕ್ಷ, ಹುಲಿಯೂರುದುರ್ಗ 49.5 ಲಕ್ಷ, ಕುಣಿಗಲ್‌ಗೆ 50 ಲಕ್ಷ, ರೂಪಾಯಿ ಕೊಟ್ಟಿದ್ದಾರೆ. we have no place here. ಚಿಕ್ಕನಾಯಕನಹಳ್ಳಿ, ಕಳ್ಳಂಬೆಳ್ಳ ಕ್ಷೇತ್ರಗಳನ್ನು ಈ ಪಟ್ಟಿಯಲ್ಲಿ ಸೇರಿಸುವುದಕ್ಕೆ ಜಾಗವೇ ಇಲ್ಲ. ನಮ್ಮ ಕ್ಷೇತ್ರಗಳ ಹೆಸರುಗಳೇ ಇದರಲ್ಲಿ ಇಲ್ಲ. ಆದ್ದರಿಂದ, ಈ ಬಜೆಟ್‌ನ್ನು ನಾವೇಕೆ ಪಾಸ್ ಮಾಡಬೇಕು. ಪಕ್ಕದ ಕ್ಷೇತ್ರಗಳಲ್ಲಿ 2 ರಿಂದ 2.5 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುತ್ತೇವೆ. ಚಿಕ್ಕನಾಯಕನ ಹಳ್ಳಿ, ಮತ್ತು ಕಳ್ಳಂಬೆಳ್ಳ ಈ ಎರಡು ಕ್ಷೇತ್ರಗಳಿಗೆ ಕೇವಲ ಒಂದು ರೂಪಾಯಿಯನ್ನು RIDF-12 ರಲ್ಲಿ ಇಟ್ಟಿಲ್ಲ. RIDF-13 ರಲ್ಲಿ ಸಾರಾಸಗಟಾಗಿ 180 ಲಕ್ಷಕೊಟ್ಟಿದ್ದೇವೆಂದು ನಿಮಗೆ ಹೇಳಿರಬಹುದು. ಆದರೆ, ನಮಗೆ ಇಷ್ಟು ಕೊಟ್ಟಿಲ್ಲ. ನಮಗೆ ಮತ್ತೆ ಅರ್ಧದಷ್ಟು ಅಂದರೆ 90 ಲಕ್ಷ ಅಷ್ಟೇ. ಮಾನ್ಯ ಯಡಿಯೂರಪ್ಪನವರಲ್ಲಿ ನಾನು ಈಗ ಕೇಳುವುದೇನೆಂದರೆ, ಈ ರಾಜ್ಯದ್ದೆಲ್ಲಾ ಇಲ್ಲಿ ಓದಿದರೆ ಬಹಳ ಸಮಯ ತೆಗೆದುಕೊಳ್ಳುತ್ತದೆ. ವಿಶೇಷವಾಗಿ ತಾವು ಪ್ಯಾಕೇಜ್ ಮಾಡಿ ಹಾಸನ ಬೈಪಾಸ್‌ಗೆ 50 ಕೋಟಿ ರೂಪಾಯಿ ಕೊಟ್ಟಿದ್ದೀರಿ, ಹಾಸನದಲ್ಲಿ ರಿಂಗ್ ರೋಡ್, ಪೆರಿಫೆರಲ್ ರೋಡ್ ಮಾಡುವುದಕ್ಕಾಗಿ 50 ಕೋಟಿ ರೂಪಾಯಿ ಕೊಡುವ ಬಗ್ಗೆ ತಾವೇ announce ಮಾಡಿದ್ದೀರಿ. ಇದರ ಜೊತೆಗೆ ಅಲ್ಲಿ ಎಷ್ಟು ಹಣ ಖರ್ಚಾಗುತ್ತಿದೆ ಎಂಬುದರ ಬಗ್ಗೆ ಮಾಹಿತಿ ಕೊಡಿ. ಹಾಗಾದರೆ, ಈ ರಾಜ್ಯಕ್ಕೆ ಹೇಳುವವರು, ಕೇಳುವವರು ಯಾರು ಬೇಡವೆಂದು ಹೇಳುತ್ತೀರಾ ? ಯಾರಿಗಾದರು ಒಂದು ಖಾತೆ ಕೊಟ್ಟರೆ ಅದು ಅವರ ಸ್ವಂತದ್ದೆಂದು ನಾವು ಭಾವಿಸಿಕೊಳ್ಳೋಣವೆ ? ನಾವೆಲ್ಲಾ ಹೋಗಿ ಒಂದು ದೊಡ್ಡ ಸಲಾಂ ಹೊಡೆದುಬಿಟ್ಟು ಅವರ ಮುಂದೆ ಹುಜೂರ್, ಅದು ಇದು ಮಾಡಿ ಎಂದು ಬೇಡಿಕೊಳ್ಳುವ ಸ್ಥಿತಿಗೋಸ್ಕರ ನಾವು ಇಲ್ಲಿಗೆ ಶಾಸಕರಾಗಿ ಬಂದಿದ್ದೇವೆಯೇ? ಇದೇ ರೀತಿಯಾಗಿ ಮಾಡಬೇಕೆಂದರೆ ದಯಮಾಡಿ ಹೇಳಿಬಿಡಿ. ಪ್ರಮಾಣ ವಚನ ತೆಗೆದುಕೊಳ್ಳುವಾಗ ಸತ್ಯದ ಹೆಸರಿನಲ್ಲಿ ಮತ್ತು ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ನಿಷ್ಠೆಯ ಹೆಸರಿನಲ್ಲಿ ಬದುಕಬೇಡಿ, ಯಾರಿಂದ ಈ ರಾಜ್ಯ ನಡೆಯುತ್ತದೆಯೋ ಅವರ ಗುಲಾಮರಾಗಿ ಬದುಕಿ ಎಂದು ಹೇಳಿಬಿಡಿ. ಆಗ ನಾವು ಗುಲಾಮರಾಗಿಯೇ ಇದ್ದುಕೊಂಡು ಹೋಗುತ್ತೇವೆ. ನಮ್ಮಿಂದಾಗಿ ನಮ್ಮ ಕ್ಷೇತ್ರಕ್ಕೆ ಏಕೆ ಅನ್ಯಾಯವಾಗಬೇಕು ? ನಮ್ಮ ಕ್ಷೇತ್ರದಲ್ಲಿರುವಂತಹ ಜನರು ನಿಮಗೆ ಮತ್ತು ಇನ್ನೊಬ್ಬರಿಗೂ ಸಹ ವೋಟ್ ಹಾಕುತ್ತಾರೆ. ನಾಳೆ ದಿವಸ ಯಾರಿಗೆ ವೋಟ್ ಹಾಕುತ್ತಾರೆಂದು ನಮಗೆ ಗೊತ್ತಿಲ್ಲ. ಆದರೆ, ಸ್ಟೇಟ್ ಹೈವೇ ಒಂದು ಕ್ಷೇತ್ರ ಮುಗಿಯುತ್ತಾ ಬರುತ್ತಿದ್ದರೆ ಜಂಪ್ ಆಗುತ್ತಾ ಬರುತ್ತದೆ. ಅಂದರೆ, ಒಂದು ಕ್ಷೇತ್ರದ ರಸ್ತೆ ಮುಗಿಯುವ ಹೊತ್ತಿಗೆ ಇನ್ನೊಂದು ಕ್ಷೇತ್ರದ ರಸ್ತೆ ಪ್ರಾರಂಭವಾಗುತ್ತದೆ. ಆದರೆ, ಅದು ಸಂಪೂರ್ಣವಾಗಿ ಸರ್ವನಾಶವಾಗಿರುತ್ತದೆ. ಮತ್ತೆ ಮುಂದೆ ಹೋಗುತ್ತಾ ಜಂಪ್ ಆಗುತ್ತದೆ. ಇದನ್ನು ಸ್ಟೇಟ್ ಹೈವೇ ಎಂದು

ಕರೆಯುತ್ತೀರಾ ? You say that you are going to complete the works of State Highway in 2008. 2008 ನೇ ಇಸವಿಯೊಳಗೆ ತಾವು ಸ್ಟೇಟ್ ಹೈವೇ ಕೆಲಸವನ್ನು ಮುಗಿಸುತ್ತೀರಾ ? ಇದಕ್ಕೆ ಪ್ರಯಾರಿಟಿ ಏನು ? ನಾನು ಬಹಳ ನೋವಿನಿಂದ ಹೇಳುವುದೇನೆಂದರೆ, ಎಲ್ಲದಕ್ಕಿಂಥ worst affected ಎಂದರೆ, ಸೌತ್ ಕೆನರಾ ಮತ್ತು ಉಡುಪಿ ಈ ರೀತಿ ಏಕೆ ಮಾಡಿದ್ದೀರಿ ? ಶಿವಮೊಗ್ಗ ಜಿಲ್ಲೆಯಲ್ಲಿ ಮಳೆ ಬರುವುದರಿಂದ ರಸ್ತೆಗಳು ಹಾಳಾಗುತ್ತವೆಂದು ಮಾನ್ಯ ಉಪ ಮುಖ್ಯ ಮಂತ್ರಿಗಳಿಗೆ ಗೊತ್ತಿರುತ್ತದೆ. ಸೌತ್ ಕೆನರಾ, ಸಕಲೇಶಪುರ, ನಾರ್ಥ್ ಕೆನರಾ ಮತ್ತು ಉಡುಪಿ ಜಿಲ್ಲೆಗಳಲ್ಲಿನ ರಸ್ತೆಗಳ ಸ್ಥಿತಿ ಯಾವ ರೀತಿಯಾಗಿದೆ ಎಂಬುದು ತಮಗೆ ಗೊತ್ತಿದೆಯೇ ? ಇವತ್ತಿನ ದಿವಸ ಯಾರಾದರು ಮಂಗಳೂರಿನಿಂದ ಹಾಸನಕ್ಕೆ ಬರುವುದಕ್ಕೆ ಸಾಧ್ಯವಾಗುತ್ತಿದೆಯೇ ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಇಲ್ಲಿಯೇ ಕುಳಿತುಕೊಂಡಿದ್ದಾರೆ. ಆದ್ದರಿಂದ, ಒಂದು ವಿಷಯವನ್ನು ಕೇಳುವುದಕ್ಕೆ ಬಯಸುತ್ತೇನೆ ಅದೇನೆಂದರೆ ತಾವು ಈಗಾಗಲೇ ಎರಡು ಸಭೆಗಳನ್ನು ಮಾಡಿದ್ದೀರಿ. ಏತಕ್ಕಾಗಿ ಸಭೆ ಮಾಡಿದಿರಿ ಎನ್ನತಕ್ಕಂಥದ್ದು ನಮಗೆ ಅರ್ಥವಾಗಲಿಲ್ಲ. ಸಭೆ ಮಾಡಿದ ನಂತರ ಕೆಲಸ ಪ್ರಾರಂಭ ಮಾಡಿದ್ದರೆ ನಮಗೆ ಸಂತೋಷವಾಗುತ್ತಿತ್ತು. ಸಭೆ ಮಾಡಿದ್ದೇವೆಂದು ಕೇವಲ ಪತ್ರಿಕೆಗಳಲ್ಲಿ ಬರುವುದಕ್ಕೋಸ್ಕರ ಸಭೆಯನ್ನು ಮಾಡಲಾಯಿತೇ ? ಅಥವಾ ಇಲಾಖೆಯಿಂದ ಏನಾದರೂ ಹಣ ತಂದು ಅಭಿವೃದ್ಧಿ ಮಾಡುವಂತಹ ಕೆಲಸ ಮಾಡಲಾಗಿದೆಯೇ ? ಈ ಮಳೆಗಾಲ ಮುಗಿಯುವುದರೊಳಗೆ ಶಿರಾಡಿ ಘಾಟ್ ರಸ್ತೆಯಲ್ಲಿ ಬರುವುದಕ್ಕೆ ಆಗುವುದಿಲ್ಲ. ಚಾರ್ಮಾಡಿ ಘಾಟ್ ಮತ್ತು ನಿಮ್ಮ ಬಾಳೆಬರೆ ಘಾಟ್ ರಸ್ತೆ ಕೂಡ ಹಾಳಾಗುತ್ತಿದೆ. ವಿಮಾನದ ಟಿಕೆಟ್ ಕೊಡಿ ಎಂದು ನೀವು ಗಲಾಟೆ ಮಾಡಿದಾಗ ನಮಗೆ ಅಧ್ಯಕ್ಷರು ಕೊಡಬಹುದಷ್ಟೆ. ಆದರೆ, ಜನ ಏನು ಮಾಡಬೇಕು ? ಪ್ರತಿ ದಿವಸ 200 ಬಸ್ ಹೋಗುತ್ತದೆ 200 ಬಸ್ ಬರುತ್ತದೆಂದು ನಾನು ಮೊನ್ನೆ ದಿವಸ ಹೇಳಿದ್ದೇನೆ. ಆದ್ದರಿಂದ, ಅಲ್ಲಿನ ರಸ್ತೆಗಳ ಬಗ್ಗೆ ಏನು ಮಾಡಲಾಗುತ್ತದೆಂಬುದರ ಬಗ್ಗೆ ತೀರ್ಮಾನವಾಗಬೇಕು.

ಶ್ರೀ ಎಂ. ಕೆ. ಸೋಮಶೇಖರ್ :- ಮಾನ್ಯ ಅಧ್ಯಕ್ಷರೆ, ಆ ರಸ್ತೆಯಲ್ಲಿ ಗ್ಯಾಸ್ ತುಂಬಿಕೊಂಡು ಬರುವ ಲಾರಿಗಳು ಈಗ ಬಾರದೇ ಇರುವುದರಿಂದ ಗ್ಯಾಸ್ ಸರಬರಾಜು ಇಲ್ಲದೇ ಜನಸಾಮಾನ್ಯರಿಗೆ ತೊಂದರೆಯಾಗಿದೆ.

ಶ್ರೀ ಯು. ಟಿ. ಖಾದರ್ :- ಈ ವರ್ಷದಲ್ಲಿ ಆಗಿರತಕ್ಕಂಥದಲ್ಲ. ಕಳೆದ 2 ವರ್ಷದಿಂದಲೂ ಇದೇ ರೀತಿಯಾಗಿ ನಡೆಯುತ್ತಿದೆ. ಅಲ್ಲಿ ಯಾವುದೇ ರೀತಿಯಾದ ಒಂದು ಕೆಲಸವೂ ಕೂಡ ಆಗಿಲ್ಲ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ :- ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಎರಡು ತಿಂಗಳ ಹಿಂದೆ ನಮ್ಮ ಹೈ ಕೋರ್ಟ್‌ನ

ಮುಖ್ಯ ನ್ಯಾಯಾಧೀಶರು ಒಂದು ಕಾರ್ಯಕ್ರಮಕ್ಕೆ ಗೌರಿಬಿದನೂರಿಗೆ ಬರಬೇಕಾಗಿತ್ತು. ಮಾನ್ಯ ಶಿವಶಂಕರ್ ರೆಡ್ಡಿಯವರಿಗೆ ಗೊತ್ತಿದೆ. ಅವರೂ ಸಹ ಇಲ್ಲಿರಬಹುದು. ಗೌರಿಬಿದನೂರಿಗೆ ಹೋಗುವ ದಾರಿ ಯಾವುದೆಂದರೆ, ದೊಡ್ಡಬಳ್ಳಾಪುರದ ಮೇಲೆ ಗೌರಿಬಿದನೂರಿಗೆ ಹೋಗಬೇಕಾಗುತ್ತದೆ. His security men advised not to go via Doddaballapur. ಅದರ ಬದಲು ಚಿಕ್ಕಬಳ್ಳಾಪುರಕ್ಕೆ ಬಂದು ಆಮೇಲೆ ಈ ಕಡೆ ಬಂದರು. ಅದು 60 ಕಿ.ಮೀ. ರೌಂಡ್ ಹಾಕಿಕೊಂಡು ಬಂದರು ಏನು ಕಾರಣವೆಂದರೆ, ಬೆಂಗಳೂರು–ಗೌರಿಬಿದನೂರು ರೋಡಿನಲ್ಲಿ ಯಾವುದೇ ವಾಹನ ಇವತ್ತು ಓಡಾಡುವ ಸ್ಥಿತಿಯಲ್ಲಿ ಇಲ್ಲ. ಅದೇ ರೋಡಿನಲ್ಲಿ ಹಠ ಹಿಡಿದು ಇವತ್ತು ಯಾರಾದರೂ ಬಂದರೆ 75 ಕಿ.ಮೀ. ಕ್ರಮಿಸಲು ನಾಲ್ಕುವರೆ ಗಂಟೆಯಾಗುತ್ತದೆ. Absolutely there is no road. ಅದು ಲೆಕ್ಕದಲ್ಲಿ State Highway ಬೆಂಗಳೂರು – ಗೌರಿಬಿದನೂರು via ದೊಡ್ಡಬಳ್ಳಾಪುರ ರಸ್ತೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಎರಡು ವರ್ಷದಿಂದ ನಾವು ಗಲಾಟೆಯನ್ನು ಮಾಡಿದರೂ ನಮಗೆ ಇನ್ನೂವರೆಗೆ ಮೈನ್ಸ್ ಲಾರಿಯನ್ನು ನಿಲ್ಲಿಸುವುದಕ್ಕಾಗಿರುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ :– ಆಗ High Court Judge ಕೇಳಿದರು. ಏಕೆ ಈ ರೋಡಿನಲ್ಲಿ ಕರೆದುಕೊಂಡು ಬರುತ್ತಿದ್ದೀರಿ ಎಂದು ಕೇಳಿದರೆ, ಅದು Motorable ರೋಡ್ ಅಗಿ ಉಳಿದಿಲ್ಲ, ಅದಕ್ಕೋಸ್ಕರ ನಾವು ಹೋಗುವುದಕ್ಕೆ ಅಡ್ವೈಸ್ ಮಾಡುವುದಿಲ್ಲವೆಂದು N.H. 7 ರಲ್ಲಿ ಚಿಕ್ಕಬಳ್ಳಾಪುರಕ್ಕೆ ಬಂದು 45 ಕಿ.ಮಿ. ಡೈವರ್ಸನ್ ತೆಗೆದುಕೊಂಡು ಗೌರಿಬಿದನೂರಿಗೆ ಬಂದು ವಾಪಸ್ಸು ಬಂದ ಮೇಲೆ ನ್ಯಾಯಾಧೀಶರು ಸರ್ಕಾರಕ್ಕೆ ಹೇಳಿದ್ದಾರೆ. ಬಹುಶ: ಇದು ಗೃಹ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಮುಖ್ಯ ನ್ಯಾಯಾಧೀಶರು ಸರ್ಕಾರಕ್ಕೆ ಆ ರಸ್ತೆಯನ್ನು ತಕ್ಷಣ ಮಾಡಬೇಕೆದು ಹೇಳಿದ್ದಾರೆ. ಅವರು ಹೇಳಿ 6 ತಿಂಗಳಾಯಿತು. ಇನ್ನುವರೆಗೆ ಅದರ ತಂಟೆಗೆ ಹೋಗಿಲ್ಲ, ಆ ರಸ್ತೆಯಲ್ಲಿ ಓಡಾಡುವ ಸ್ಥಿತಿಯಲ್ಲಿಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಯಾರೂ ಇಲ್ಲ. ಇವರು ಹೇಳಿದ್ದನ್ನು ಯಾರು ಬರೆದುಕೊಳ್ಳುತ್ತಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಾವು ಮಂತ್ರಿಗಳಾಗಿ ಅಧಿಕಾರದಲ್ಲಿ ಕೆಲಸವನ್ನು ಮಾಡಿದ್ದೇವೆ. ನಾನು ಒಪ್ಪಿಕೊಳ್ಳುತ್ತೇನೆ, ಒಂದು ಜಿಲ್ಲೆಗೆ ಹಣವನ್ನು ಕೊಡುವಾಗ ಬಹಳ balance ಆಗಿ ಹಣವನ್ನು ಕೊಡುವುದು ಕಷ್ಟ. ಆದರೆ balance maintain ಮಾಡುವುದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನವಾಗಬೇಕಲ್ಲವೆ ?

ನಮ್ಮ ಜಿಲ್ಲೆಯಿಂದ 4 ಜನ ಬಿಜೆಪಿ ಸದಸ್ಯರು ಆರಿಸಿ ಬಂದಿದ್ದಾರೆ. ಈಗ ನಿಮ್ಮ ಜವಾಬ್ದಾರಿ ಹೆಚ್ಚಾಗಿದೆಯಲ್ಲವೆ ? ಆದರೆ ಪರಿಸ್ಥಿತಿ ಏನಾಗಿದೆ ? ನಾನು 25 ವರ್ಷದಿಂದ ಆ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದೇನೆ. ಇಷ್ಟು worst condition of roads ನಾನು life ನಲ್ಲಿ ನೋಡಿಲ್ಲ. ಎಷ್ಟು ಪತ್ರವನ್ನು ಬರೆಯಬೇಕು, ಎಷ್ಟು ಸಲ ಮಾತನಾಡಬೇಕು. Main Highway ಬಿಟ್ಟರೆ National Highway, World Bank Roads ಬಿಟ್ಟರೆ ಯಾವ ರಸ್ತೆಗಳು ಚೆನ್ನಾಗಿವೆ? ಧಾರವಾಡ - ಹಳಿಯಾಳ ನೋಡಿ, ಮರಗೋಡು ನೋಡಿ, ಶಿರಸಿ ನೋಡಿ, ಎಲ್ಲ ರಸ್ತೆಗಳೂ ಕೆಟ್ಟಿವೆ. ಇದಕ್ಕೆ ಯಾರು ಜವಾಬ್ದಾರರು ?

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ, ಕೇಳಿ. ನಿಮ್ಮ ಸರದಿ ಬಂದಾಗ ನೀವು ಹೇಳಬಹುದು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : Central Road Fund ನ್ನು ಇವರು ಹೇಗೆ spend ಮಾಡುತ್ತಾರೆಂದು ಒಂದು ಜಿಸ್ಟ್ ಕೊಡುತ್ತೇನೆ. CRF ನಲ್ಲಿ 2004-05 only to Kolar 475 ಲಕ್ಷ ರೂಗಳು 2005-06 ಕ್ಕೆ 380 ಲಕ್ಷ ರೂ. ಗಳು 2006-07 ಕ್ಕೆ 900 ಲಕ್ಷ ರೂ. ಗಳು, Total Rs.1755 ಲಕ್ಷ ರೂ. ಗಳು, ಬೆಂಗಳೂರಿಗೆ 970 ಲಕ್ಷ ರೂಗಳು, ಇದೇ ಸರ್ಕಲ್‌ನಲ್ಲಿ ತುಮಕೂರಿಗೆ 290 ಲಕ್ಷ ರೂ. ಗಳೂ. ಇದಕ್ಕೆ ಈ ಮಂತ್ರಿಗಳೂ ಒಬ್ಬರೇ ಕಾರಣರು ಎಂದು ನಾನು ಹೇಳುವುದಿಲ್ಲ. ನಮ್ಮನ್ನು ಪ್ರತಿನಿಧಿಸುವಂಥ ಕೇಂದ್ರ ಒಬ್ಬ ಮಂತ್ರಿ ಇದ್ದಾರೆ. ಅವರಿಗೆ ಕೋಲಾರ ಬಿಟ್ಟರೆ ಬೇರೆ ಏನು ಕಾಣುತ್ತಿಲ್ಲ. 1330.15 ಕೋಟಿ ರೂ. ಗಳ Funds ಇದ್ದರೆ 17 ಕೋಟಿ 55 ಲಕ್ಷ ರೂಗಳನ್ನು ಒಬ್ಬರೆ/ಇಟ್ಟು ಕೊಳ್ಳುತ್ತಾರೆ. ಕೋಲಾರ ಜಿಲ್ಲೆಗೂ ಆಗಿದೆ. ಎಂದು ನನಗೆ ಗೊತ್ತಿಲ್ಲ/ ಅದು ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರಲ್ಲಿ ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರಿಗೆ ಒಂದು ರೂ. ಇಲ್ಲ. ಅದು ಅವರ ಲೋಕಸಭಾ ಕ್ಷೇತ್ರದಲ್ಲಿ ಮಾತ್ರ ಆಗಿರುವುದು ತಾಲ್ಲೂಕುವೈಸ್ ನೋಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬಹಳ ದೊಡ್ಡ ಲೀಡರ್‌ಗಳು ಇರುವುದು ಕಾಂಗ್ರೆಸ್‌ನಲ್ಲಿ Central Road Fund ನಲ್ಲಿ ದಕ್ಷಿಣ ಕನ್ನಡ 288 ಲಕ್ಷ ರೂ. ಗಳು, ಉಡುಪಿ ಏನೂ ಇಲ್ಲ. ಕೊಡಗು 488 ಲಕ್ಷ ರೂ ಗಳು.

ಒಬ್ಬ ಮಾನ್ಯ ಸದಸ್ಯ : ಉಳ್ಳಾಲ ಮತ್ತು ಮೂಡಬಿದರೆಗೆ ಎರಡು ವರ್ಷದಿಂದ ಒಂದೇ ಒಂದು ರಸ್ತೆಯನ್ನು ಕೊಟ್ಟಿರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಮೇಲೆ Head of account on 5054 ರಲ್ಲಿ 2005-06 ಕ್ಕೆ 785 ಲಕ್ಷ ರೂ. ಗಳು, ಒಟ್ಟು 830 ಲಕ್ಷ ರೂ. ಗಳು. Special Division 138.02 ಕೋಟಿ ರೂ. ಗಳು 5054 ರ ಹೆಡ್‌ನಲ್ಲಿ 138.02 ಕೋಟಿ ರೂ. ಗಳು ನಾನು ಫಿಗರ್ಸ್‌ನ್ನು ಬಹಳ ಚೆನ್ನಾಗಿ ನೋಡಿ ಹೇಳುತ್ತಿದ್ದೇನೆ. Special Division in Bangalore whichcreated in Ramanagara 138 ಕೋಟಿ 5054 State Head of account ನಲ್ಲಿ ತುಮಕೂರು 89 ಲಕ್ಷ ರೂ. ಗಳು. ನಾವು ಈ ಮನೆಯ ಸದಸ್ಯರಾಗಿ ಇರಬೇಕೆ ? ನಮಗೆ ಮಾನ ಮರ್ಯಾದೆ ಏನಾದರೂ ಇದೆಯಾ ? ನಮ್ಮ ಜನ ನಮ್ಮನ್ನು ಕೇಳುತ್ತಾರೆ, ನೀವು ಏನು ಮಾಡುತ್ತಿದ್ದೀರಿ, ಬಜೆಟ್ ಅಸೆಂಬ್ಲಿಯಲ್ಲಿ ಪಾಸ್ ಆಗುತ್ತದೋ ಆಫೀಸಿನಲ್ಲಿ ಪಾಸ್ ಆಗುತ್ತದೋ ಎಂದು ಕೇಳಿದರೆ ನಾವು ಏನು ಹೇಳಬೇಕು. ಹಾಸನಸರ್ಕಲ್, ಹಾಸನ್ 2575 ಲಕ್ಷ ರೂ. ಗಳು, ಚಿಕ್ಕಮಗಳೂರು 240 ಲಕ್ಷ ರೂ. ಗಳು total for three years 2.40 ಕೋಟಿ ರೂ. ಗಳು. ಚಿಕ್ಕಮಗಳೂರಿಗೆ ನಿಮಗೆ ಏನಾದರೂ ಅನ್ನಿಸಬೇಕಲ್ಲಾ ಮಾನ್ಯ ಯಡಿಯೂರಪ್ಪನವರೆ. ನಿಮ್ಮ ಶಾಸಕರು ಇರುವ ಕ್ಷೇತ್ರವೆಂದು ಇದು ಹಾಳಾಗಿರುವುದು. ಸ್ವಾಭಿಮಾನಕ್ಕಿಂತ ಅಧಿಕಾರ ದೊಡ್ಡದೆ ? 25.72 ಕೋಟಿ ರೂ. ಗಳು, ನಾನು ಕಂಪ್ಲೀಟ್ ಮಾಡುತ್ತೇನೆ. 3054 ರಲ್ಲಿ ಗ್ರಾಂಟ್‌ನಲ್ಲಿ ರಸ್ತೆಗಳ ಉದ್ದದ ಆಧಾರದ ಮೇಲೆ ಗ್ರಾಂಟ್ ಕೊಡುವುದು. Bangalore Rural is entitled for 1421 ಲಕ್ಷ ರೂ. ಗಳಿಗೆ, 393 ವರ್ಕ್‌ಗಳಿಗೆ Bangalore Special Division 470 ಲಕ್ಷ ರೂ. ಗಳಿಗೆ, ಕೋಲಾರ 1754 ಲಕ್ಷ ರೂ. ಗಳಿಗೆ. ತುಮಕೂರು 3030 ನಷ್ಟ ರೂ. ಗಳಿಗೆ we are entitled ಏಕೆ ? ತುಮಕೂರು, ಬೆಳಗಾಂ, ಗುಲ್ಬರ್ಗಾ ಇವತ್ತು ಪ್ರಮುಖವಾಗಿ ಕರ್ನಾಟಕ ರಾಜ್ಯದಲ್ಲಿ ಉಳಿದುಕೊಂಡಿರುವ ದೊಡ್ಡ ಜಿಲ್ಲೆಗಳು. ನಾವು ರಸ್ತೆಯ ಉದ್ದದ ವಿಸ್ತೀರ್ಣದಲ್ಲಿ ಜಿಯಾಗ್ರಫಿಕಲ್ ಏರಿಯಾದಲ್ಲಿ ಇರುವಂಥ ಜನ ಅಷ್ಟನ್ನು ಕೊಡಬೇಕಾಗಿತ್ತು. 2004-05 ರಲ್ಲಿ ತಾವು ಬರುವುದಕ್ಕೆ ಮುಂಚೆ ಇದು ಇತ್ತು. ನೀವು ಬಂದ ಮೇಲೆ ಏನು ಮಾಡಿದಿರಿ, 1067, 533, 1967 ಕ್ಕೆ ತುಮಕೂರನ್ನು ಇಳಿಸಿದಿರಿ. ಶಿವಮೊಗ್ಗ ಸರ್ಕಲ್ 3054 ರಲ್ಲಿ 34 ಕೋಟಿ 58 ಲಕ್ಷ ರೂ.ಗಳು ಅದ next year 22 ಕೋಟಿ 58 ಲಕ್ಷ ರೂ. ಗಳು corresponding ಆಗಿ ಅದೇ ಸರ್ಕಲ್‌ನಲ್ಲಿರುವ ಚಿಕ್ಕಮಗಳೂರಿಗೆ 18.70 ಕೋಟಿ ರೂ. ಗಳು. 10.93 ಕೋಟಿ ರೂ. ಗ over all 57.17 ಕೋಟಿ ರೂ. ಗಳು. ಇವರು ಹಾಸನಕ್ಕೆ ಕೊಡುತ್ತಿದ್ದಾರೆ. 3054 12ನೇ ಹಣಕಾಸಿನಲ್ಲಿ ನಾವು 2004-05 ರಲ್ಲಿ ಏನೂ ಇಲ್ಲ. 2005-06 ನಲ್ಲಿ ಇಲ್ಲ. 2006-07 ರಲ್ಲಿ ತುಮಕೂರು 12ನೇ ಹಣಕಾಸಿನಲ್ಲಿ ನಮಗೆ ಒಂದಿಷ್ಟು ಹಣವನ್ನು ಕೊಟ್ಟಿದ್ದೀರಿ. ಚಮರಾಜನಗರ ಕ್ಕೆ ನಮ್ಮ ಸ್ನೇಹಿತರಾದ ವಾಟಾಳ್ ನಾಗರಾಜ್‌ರವರು ಹೊರಗಡೆ ಹೋಗಿದ್ದರೆ. ಅಲ್ಲಿಗೆ 172 ಲಕ್ಷ ರೂ. ಗಳನ್ನು ಕೊಟ್ಟಿದ್ದಾರೆ. ಹಾಸನ ಕ್ಕೆ 12 ಕೋಟಿ 46 ಲಕ್ಷಗಳು, ಅದೇ ಸರ್ಕಲ್‌ನಲ್ಲಿರುವಂತಹ ಚಿಕ್ಕಮಗಳೂರಿಗೆ 296 ಲಕ್ಷ ರೂಪಾಯಿಗಳು. ಹಾಸನ ಸರ್ಕಲ್‌ಗೆ 15 ಕೋಟಿ 43 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಅದರಲ್ಲಿ ಚಿಕ್ಕಮಗಳೂರಿಗೆ

2 ಕೋಟಿ ರೂಪಾಯಿಗಳು ಹೋಗುತ್ತದೆ, ಮಿಕ್ಕ ಎಲ್ಲಾ ಹಣವು ಹಾಸನದಲ್ಲಿ ಖರ್ಚಾಗುತ್ತದೆ. ಕೆಆರ್‌ಡಿಸಿಎಲ್ ಇದನ್ನು ನೋಡಿದರೆ ಏನಾದರೂ ಬಜೆಟ್ ಪಾಸು ಮಾಡುವಂತಹ ಬಜೆಟ್ ಎಂದು ತಮಗೆ ಅನಿಸುತ್ತದೆಯೇ ? KRDCL Bridge Works ತುಮಕೂರಿಗೆ 117 ಲಕ್ಷ ರೂಪಾಯಿಗಳು, ಹಾಸನ 142 ಲಕ್ಷ ರೂಪಾಯಿಗಳು, entire Mangalore Circle ಅಲ್ಲಿ ಬ್ರಿಡ್ಜ್‌ಗಳು ಹಾಳಾಗಿ ಹಾಹಾಕಾರವಾಗುತ್ತದೆ. Just 35 lakhs ಮಾನ್ಯ ಯಡಿಯೂರಪ್ಪನವರೆ, ಈ ರಾಜ್ಯದಲ್ಲಿ ಏನು ನಡೆಯುತ್ತಿದೆ ? ಏನು ನಡೆಯುತ್ತಿದೆ ಎಂದು ತಾವು ಹೇಳಬೇಕು ನಮಗೆ.

ಶ್ರೀ ಹೆಚ್. ಎಂ. ವಿಶ್ವನಾಥ್ : ಹಾಸನದಲ್ಲಿ ಕೆಲಸ ಆಗದೆ ಇರುವಂತಹ ಮಲೆನಾಡು ಭಾಗದಲ್ಲಿ ರಸ್ತೆಗಳಿಗಾಗಿ ಸ್ವಲ್ಪ ಹಣವನ್ನು ಕೊಡುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ಮಾತನಾಡುವುದನ್ನು ಮಾತನಾಡುತ್ತಿರುತ್ತೇವೆ. ಉತ್ತರವನ್ನು ಹೇಳುವುದಕ್ಕೆ ಮಂತ್ರಿಗಳು ಇದ್ದಾರೆ. ನಮ್ಮ ಹತ್ತಿರ ಮಾಹಿತಿ ಇದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಸಕಲೇಶಪುರ ಒಂದೇ ಮಲೆನಾಡೆ, ಚಿಕ್ಕಮಗಳೂರು ಮಲೆನಾಡು ಅಲ್ಲವೇ ?

ಶ್ರೀ ಹೆಚ್.ಎಂ. ವಿಶ್ವನಾಥ್ : ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾಗ ಏನು ಕೊಡಲಿಲ್ಲವಲ್ಲಾ ?

ಶ್ರೀ ಜೆ.ಸಿ. ಮಾಧುಸ್ವಾಮಿ : ರಸ್ತೆಗಳನ್ನು ಮೇಲ್ದರ್ಜೆಗೇರಿಸುವಂತಹ ಕಾರ್ಯಕ್ರಮ, ಇದನ್ನು ಮಾಡುವ ಬಗ್ಗೆ ಏನು ಅರ್ಹತೆ ಆಧಾರ ಎಂದು ಹೇಳಿ, ಈ ಸಭೆಯಲ್ಲಿ ಯರಾದರೂ ಹೇಳಬೇಕು. ಈ ಬಗ್ಗೆ ನಾವು ತಿಳಿದುಕೊಂಡಿದ್ದೆವು Traffic survey, Length of the Road, surface level connectivity, Surface ಏನಿದೆ, ಅದು asphalted ಇದೆಯೇ ? Macadam ಇದೆಯಾ, ಎಷ್ಟು population ಗೆಂದು ಅದು ಕವರ್ ಆಗುತ್ತದೆ ? ಇವತ್ತು ಇಲ್ಲಿ ತೆಗೆದುಕೊಂಡಿರುವಂತಹ ರಸ್ತೆಗಳನ್ನು ತಾವು ನೋಡಬೇಕು. ಇಡೀ ಬೆಂಗಳೂರು 32 ಕಿ.ಮಿ. ಬೆಂಗಳೂರು ಗ್ರಾಮಾಂತರ 134ಕಿ.ಮಿ. when it comes to Hassan 439 Kms. Nowhere in Karnataka 300 Km. ಮೈಸೂರು 375 ಕಿ.ಮಿ. ಒಂದನ್ನು ಬಿಟ್ಟರೆ ಇನ್ನು ಯಾವುದನ್ನು ಸಹ ತೆಗೆದುಕೊಳ್ಳಲಿಲ್ಲ. ಇವರು ಯಾವುದನ್ನು ತೆಗೆದುಕೊಂಡಿರುವುದು, ಅವರಿಗೆ ಇಷ್ಟಬಂದ ಹಾಗೆ ತೆಗೆದುಕೊಂಡಿದ್ದಾರೆ. ಇಡೀ ತುಮಕೂರು ಜಿಲ್ಲೆಗೆ ಮಾನ್ಯ ಯಡಿಯೂರಪ್ಪನವರೆ, ನನ್ನ ಕ್ಷೇತ್ರದಲ್ಲಿ ಒಂದೇ ಒಂದು ಕಿ.ಮಿ. ರಸ್ತೆ ಯನ್ನು upgrade ಮಾಡುವ ಬಗ್ಗೆ ಯೋಜನೆಯನ್ನು ತೆಗೆದುಕೊಳ್ಳಲಿಲ್ಲ. ಏನು ನಾವು ಅವರ ಹತ್ತಿರ ಹೋಗಿ ಪಾದವನ್ನು ಮುಟ್ಟಲಿಲ್ಲ ಅಂತಲಾ ? ಹಾಕಿಸಿ ಕಾವಿನಾ, ಅವರನ್ನು ಕೂರಿಸಿ ಮಠಕ್ಕೆ ಹಾಳಾಗಿ ಹೋಗಲಿ, ಹೋಗಿ ಅಡ್ಡ ಬೀಳುತ್ತೇವೆ. ನಾವು ಅವರ ಪಾದವನ್ನು ನೆಕ್ಕುವುದಕ್ಕಾ

ಇಲ್ಲಿ ಎಂಎಲ್ ಎ ಆಗಿ ಬಂದಿರುವುದು ? ನೀವು ನಮ್ಮ ಕೈಯಿಂದ ಅವರ ಪಾದವನ್ನು ನೆಕ್ಕಿಸಬೇಕೆ ? ಏತಕ್ಕಾಗಿ ಇಲ್ಲಿ ಚಿಕ್ಕನಾಯಕನಹಳ್ಳಿ ರಸ್ತೆಗಾಗಿ 1 ಕಿ.ಮಿ. ಕೊಟ್ಟಿಲ್ಲ. ಹಾಗಾದರೆ ನಮ್ಮ ಹೋಬಳಿ ಬಿಟ್ಟು ಬಿಡಿ ನಿಮ್ಮ ಎಂಎಲ್ಎ ಕ್ಷೇತ್ರದ ಬಗ್ಗೆ ಏನು ಮಾಡಿದ್ದೀರಿ ? ನಾಳೆ ದಿವಸ ಜನರ ಎದುರಿಗೆ ಹೋಗಿ ಏನು ಮಾಡಬೇಕು ? ಇವತ್ತು ತಿಪಟೂರು ತಾಲ್ಲೂಕಿನಲ್ಲಿ 2 ಕಿ.ಮಿ. ನನ್ನ ಕ್ಷೇತದ ಒಂದು ರೋಡ್ upgrade ಆಗುತ್ತದೆ, ಅದು ನರಸಿಂಹಸ್ವಾಮಿ ಬೆಟ್ಟಕ್ಕೆ ಹೋಗುತ್ತದೆ. ಅಲ್ಲಿ ಬಸ್ಸುಗಳು ಹೋಗುತ್ತದೆಯೇ? ಲಾರಿಗಳು ಹೋಗುತ್ತದೆಯೇ ? ಭೂಮಿಯ ಮೇಲೆ ಜನರು ನಿಮ್ಮನ್ನು ಆಡಿಕೊಂಡು ನಗುವುದಿಲ್ಲವೇ ? 2 ಕಿ.ಮಿ.ಇರುವಂತಹ ಒಂದು ದೇವಸ್ಥಾನದ ರೋಡ್‌ನ್ನು ನೀವು ಪಿಡಬ್ಲ್ಯೂಡಿಗೆ ತೆಗೆದುಕೊಳ್ಳುತ್ತೀರಿ, 65–66 ಕಿ.ಮಿ. ನಾವು ನಬಾರ್ಡ್‌ನಿಂದ ಮಾಡಿರುವುದು, Surface ಹಾಳಾಗಿ ಹೋಗುತ್ತದೆ. ಅಲ್ಲಿ ಸರಿಯಾಗಿ maintainance ಇಲ್ಲ. ಟಾರು ರೋಡ್‌ಗಳನ್ನು ZP ಯವರು maintainance ಮಾಡುವುದಕ್ಕಾಗುತ್ತಿಲ್ಲ. ಇದನ್ನು ಏನಾದರು upgrade ಮಾಡಿ ಎಂದು ಬೊಂಬಡ ಬಡಿದುಕೊಳ್ಳುತ್ತಿದ್ದೇವೆ. ಇದು ಅವರಿಗೆ ಬೇಕಿಲ್ಲ, ಈ ಬಗ್ಗೆ ಮಾನ್ಯ ಯಡಿಯೂರಪ್ಪನವರೆ, ತಮ್ಮ ಹತ್ತಿರ ಒಂದು ಪಟ್ಟಿ ಇರಬೇಕಲ್ಲಾ ಸಾರ್. ಯಾವ ಯಾವ ರೋಡ್‌ನ್ನು ನಬಾರ್ಡ್‌ನಲ್ಲಿ ತೆಗೆದುಕೊಂಡು Asphalt ಮಾಡಿದ್ದೀರಿ? ಆ ರೀಚ್ ಇವತ್ತು ರಿಪೇರಿಗೆ ಬಂದಿದ್ದರೆ ಏನು ಮಾಡಬೇಕು ? ಯಾವ ಯಾವ ರೋಡ್‌ನ್ನು KSHIP ನೊಳಗಡೆ agreement ಮುಗಿದಿದೆ, ಆ ರೋಡನ್ನು maintainance ಮಾಡುತ್ತಿರುವ ಬಗ್ಗೆ ಒಂದು ಪಟ್ಟಿ ನಿಮ್ಮ ಹತ್ತಿರ ಇರಬೇಕು ಯಾವ ಯಾವ ರೋಡ್ National Highway ನಲ್ಲಿದೆ, ಹೊಸದಾಗಿ Notify ಆಗಿರುವಂತಹ ರೋಡ್‌ಗಳು ಯಾವುದು ? ಅದರಲ್ಲಿ Curves ಎಷ್ಟು ? Bends, ಎಷ್ಟು ? ಹಾಳಾಗಿರುವಂತ Bridge ಗಳು ಎಷ್ಟು? tonnage ನ vehicle ಗಳು move ಆಗುತ್ತಿವೆ. ಈ ಬಗ್ಗೆ ಈ ರಾಜ್ಯದಲ್ಲಿ ಈ ಕಾರ್ಯಕ್ರಮದ ಬಗ್ಗೆ ಒಂದು ಆಧಾರವಿದೆಯೇ ? ಇಡೀ Mines Lorry ಗಳು ಓಡಾಡುವಂತಹ ಜಾಗ ಒಂದೇ ಒಂದು ರೋಡ್‌ಗಳು ಆಗಲಿಲ್ಲ. Economic importance ಎಂದು ಹೇಳಿ ಕೇಂದ್ರ ಸರ್ಕಾರದವರು ರಸ್ತೆಗಾಗಿ ಹಣವನ್ನು ಕೊಡುತ್ತಾರೆ. Railway Link ಎಂದು ಹೇಳಿ ಕೇಂದ್ರ ಸರ್ಕಾದವರು ಹಣವನ್ನು ಕೊಡುತ್ತಾರೆ. Railway wagon ಗಳಿಗೆ transportation ಮತ್ತೊಂದಕ್ಕೆ ಆ ಹಣವೂ ಕೂಡಿ ರಾಜ್ಯಕ್ಕೆ ಬರುತ್ತದೆ. Mining Area, ಒಳ್ಳೆಯ economic Importance ಇರುವಂತಹ ಜಾಗ ಕರ್ನಾಟಕದಲ್ಲಿ ಇದೆ. ಎಂದು ನಾನು ಕೇಳಿತ್ತಿದ್ದೇನೆ. Economic importance ನಲ್ಲಿ ನಿಮ್ಮ Industrial Area ಬರಬಹುದು, Mining Area ಬರಬಹುದು, densely populated area ಬರಬಹುದು. Any number of Roads can be granted Sir, ಕೊರತೆ ಇಲ್ಲದಂತಹ grant ನಮ್ಮ ಕೇಂದ್ರ ಸರ್ಕಾರದಲ್ಲಿ ಇದೆ. ಮಾನ್ಯ ಯಡಿಯೂರಪ್ಪನವರೆ, ಎಷ್ಟು grant ನ್ನು ತಂದಿದ್ದೀರಿ ? ನಾನು 17 ಚಿಲ್ಲರೆ ಕೋಟಿಗೆ ಒಂದು ರೋಡ್‌ನ್ನು Mines Road ಗೆ estimate ಮಾಡಿ ಕಳುಹಿಸಿದರೆ,

State Government ನವರು follow up ಮಾಡಲಿಲ್ಲವೆಂದು ಅವರು ನನಗೆ ಹೇಳುತ್ತಾರೆ. ಅವರು ಕಳುಹಿಸುವುದಿಲ್ಲ, ಅದು ಅವರಿಗೆ ಬೇಕಿಲ್ಲ. ನಾವ್ಯಾರು ಕೂಡ ಅಚ್ಚುಕಟ್ಟಾಗಿ ಓಡಾಡಬಾರದು, ಇದನ್ನು ನಾನು ಆರಂಭದಲ್ಲೆ ಹೇಳಿದ ಹಾಗೆ ಮುಂದಿನ ಚುನಾವಣೆಯನ್ನು ನೀವು ಸರ್ಕಾರಿ ಖಜಾನೆಯಿಂದ ಮಾಡುತ್ತಿದ್ದೀರಿ ? They are going to organise your election. Sir, Selection of work ಹೇಗೆ ಆಗುತ್ತಿದೆ ಎಂದರೆ, ಈ ರಾಜ್ಯದಲ್ಲಿ ತಾವು ಇಲ್ಲಿ ಒಂದು ಬಿಳಿ ಪತ್ರ ಅಂದರೆ ಶ್ವೇತಪತ್ರವನ್ನು ಮಂಡಿಸಬೇಕು. ಯಾವ ಆಧಾರದ ಮೇಲೆ ಇವತ್ತು ನಬಾರ್ಡ್ ರೋಡ್‌ಗಳು ಅಯ್ಕೆ ಆಗುತ್ತಿದೆ. ? ಯಾವ ಆಧಾರದ ಮೇಲೆ CRF ನಲ್ಲಿರುವಂತಹ ರೋಡ್‌ಗಳನ್ನು ಆಯ್ಕೆ ಮಾಡುತ್ತಿದ್ದೀರಿ ? ಯಾವ ಆಧಾರದ ಮೇಲೆ 12th Finance Commission ನಲ್ಲಿ ಹಣವನ್ನು ಕೊಡುತ್ತಿದ್ದೀರಿ ? ridf ಗೆ ಎಷ್ಟು ಕೊಡುತ್ತಿದ್ದೀರಿ ? ಅವುಗಳಿಗೆಲ್ಲಾ ಸ್ಪಷ್ಟವಾದ ಮಾನಗೋಲು ಇದೆ. ನಿಯಮಗಳು ಇದೆ, ಒಂದೇ ಒಂದು ನಿಯಮ ಈ ರಾಜ್ಯದಲ್ಲಿ ಅನುಷ್ಠಾನವಾಗಲಿಲ್ಲ. ಇವರು ಕಾರ್ಯಕರ್ತರುಗಳನ್ನು phone ಮಾಡಿಕೇಳುತ್ತಾರೆ ಇಲ್ಲಿ ಯಾವ ರೋಡ್‌ನ್ನು ಸೇರಿಸೋಣ ಎಂದು ಅವರು ನಮ್ಮನ್ನು ಕೇಳುವುದಿಲ್ಲ. ಅವರು ನಮ್ಮನ್ನು ಕೇಳಕೂಡದು, ನಾನು ಅದನ್ನು ಕೂಡ endorse ಮಾಡುತ್ತೇನೆ. we are not there to say. ಯಾವ ರೋಡ್‌ನ್ನು ಸೇರಿಸಬೇಕು, ಯಾವ ರೋಡ್‌ನ್ನು ಸೇರಿಸಬಾರದು ಇದನ್ನು ಹೇಳುವುದು ಎಂಎಲ್‌ಎಗಳಲ್ಲ ಸಾರ್. ನಿಮ್ಮ Executive Engineer, Superintending Engineer, Chief Engineer ಚಪ್ರಾಸಿಗಳ, ನಾನು ನೊಂದು ಹೇಳಬೇಕಾಗಿದೆ. ಇಡೀ ಅಧಿಕಾರಿಗಳ ಮೇಲೆ ಸರ್ಕಾರದ control ಇಲ್ಲ. ರಾಜ್ಯ ಸರ್ಕಾರದ ಡಿ.ಸಿ. ಗಳು ಎಸ್.ಪಿ. ಗಳಿಗೆ ಹೇಳುವವರು ಇಲ್ಲ. ಆದರೆ 2 ಇಲಾಖೆಗಳಲ್ಲಿ ಇಡೀ ಅಧಿಕಾರಿಗಳೆ ಸತ್ತು ಹೋಗಿಬಿಟ್ಟಿದ್ದಾರೆ. ಅವರು ಉಸಿರನ್ನು ಬಿಡುವಹಾಗೆ ಇಲ್ಲ ಉಸಿರು ಬಿಟ್ಟರೆ ಅವರು ಇಲ್ಲ. ಹೇಳಿದನ್ನು ಕೇಳುತ್ತೀರಾ ಕೇಳಿದರೆ Chief Secretary ಆಗುತ್ತೀರಿ, ಹೇಳಿದನ್ನು ಕೇಳಲಿಲ್ಲವೇ, ನೀವುಗಳು ಜೈಲಿಗೆ ಹೋಗುತ್ತೀರಿ. ಈ ಎರಡು ಇಲಾಖೆ ಸಬ್ಧವಾಗಿದೆ. only man, my God ಎಷ್ಟು ಶಕ್ತಿ ಕೊಟ್ಟಿರಬಹುದು. ಎಷ್ಟು Energy ಕೊಟ್ಟಿರಬಹುದು. ಎಷ್ಟು Boards sitting ಗೆ ಕುಳಿತುಕೊಳ್ಳಬೇಕು ಎಷ್ಟು ಮೀಟಿಂಗ್ ಮಾಡಬೇಕು ? ಎಷ್ಟು ಹಣವನ್ನು ಖರ್ಚು ಮಾಡಬೇಕು ? ನಿಮ್ಮದು ಆ ಖಾತೆ ಋ ಖಾತೆ ಎಲ್ಲಾ ಸೇರಿ, ಬಹುಶ: ದೇವರ ಅನುಗ್ರಹದಲ್ಲಿ ಹುಟ್ಟಿದವರಿಗೆ ಮಾತ್ರ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮನುಷ್ಯನ ಅನುಗ್ರಹದಲ್ಲಿ ಹುಟ್ಟಿದವರಿಗೆ ಇದನ್ನು ಮಾಡುವುದಕ್ಕಾಗುವುದಿಲ್ಲ ಅಷ್ಟೊಂದು ಸಂಪನ್ಮೂಲ ಇರುತ್ತದೆ. ಅಲ್ಲಿ ಇಲಾಖೆಯ ಅಧಿಕಾರಿಗಳೇ ಇಲ್ಲಾ ಸಾರ್. ಉಸಿರು, ಉಸಿರು ಅಕಸ್ಮಾತ್ ನಿಮ್ಮದು ಏನಾದರೂ breathing problem ಇದ್ದರೆ ಆಸ್ಮಾಗಿಸ್ಮಾ ಇದ್ದರೆ ಉಸಿರು ಕಟ್ಟಿಕೊಂಡು ಆಚೆಗೆ ಹೋಗಿ ಬಂದು ಉಸಿರಾಡಬೇಕು. ಉಸಿರನ್ನು ಜೋರಾಗಿ ಬಿಟ್ಟರೆ ಮುಗಿಯಿತು. ನಿಮ್ಮ ಇಲಾಖೆಯಲ್ಲಿ ಏನು ನಡೆಯುತ್ತಿದೆ. ನಾನು ಒಂದು Interesting case

ಹೇಳುತ್ತೇನೆ ತಾವು ನನ್ನನ್ನು ಕ್ಷಮಿಸಬೇಕು ಪುನ: ನಾನು ನೈಸ್ ಕಂಪನಿಯ ವಿಷಯಕ್ಕೆ ಹೋಗುತ್ತಿಲ್ಲ. ಆದರೆ ಈ ಸರ್ಕಾರ ಕಳೆದ ತಿಂಗಳಲ್ಲಿ ಸುಪ್ರಿಂಕೋರ್ಟಿಗೆ ಒಂದು affidivate ಹಾಕಿದೆ. ಅದು ಸುಪ್ರಿಂಕೋರ್ಟಿನ ಮುಂದೆ Special Leave Petition permission ತೆಗೆದುಕೊಂಡು ಒಂದು ಅರ್ಜಿಯನ್ನು ಹಾಕಿದೆ. ಏನೆಂದು ಅರ್ಜಿಯನ್ನು ಹಾಕಿದೆ ಎಂದರೆ, 2 ದಾಖಲೆಗಳನ್ನು, ಮಾನ್ಯ ಪ್ರಕಾಶ್‌ರವರೆ, ನಿಮ್ಮ ಸರ್ಕಾರ ಹಾಕಿರುವುದು, I don't know whether you are party to this or not. ನಾನು Government affidivate ಬಗ್ಗೆ ಹೇಳುತ್ತಿದ್ದೇನೆ, 2 ದಾಖಲೆಗಳನ್ನು suppress ಮಾಡಿದ್ದಾರೆ ನಾವು ಸುಪ್ರಿಂಕೋರ್ಟಿನ ಮುಂದೆ ಅದನ್ನು ಹೇಳಿದೆವು. ನಾನು ಅದನ್ನು ಓದುತ್ತೇನೆ.

"It is submitted that in view of the above orders and undertaking on behalf of the State the State has not proceeded with the commission of enquiry, however, the recovery of the two important files have shown that betweenjuly and September 1999 i.e., after dismissal of SLP in Somashekar Reddy's case, by indulging in supression of considerable previous record and by sustituting false and fabricated record it is placed an additional 2,289 acres of land for sale in toll road sanction and township of the project was illegally sought to be made available to the petitioner company, In these sustituted figures which has formed basis of hte subsequent decisions of the Government, this additional salable land amounting to 2,289 acres is worth about 30,000 crores in present value in terms of floor price index FSI. It is in this like it has become nescessary for the State to seek suitable modification of the order dated 21.07.2006 in order to proceed against the officers of the State responsible for these acts in order to safeguard interest of the State and to enable the State to implement the judgement of thisw Hon'ble Court dated 20.04.2006 in State of Karnataka Vs. All India Manufactures Organization. The petition Company in collusion with some high ranking officials of the State in supression of massive record and decision of the Government of Karnataka form time to time before and after signing the frame work agreement dated 3rd April 1997 created a fabricated record there by making available addtional 2,289 acres of saleble land in the toll road section and towships where as originally Only on 5,937. In August 1995 the petitioner company submitted, ಇದು ಏನು ಹೇಳುತ್ತದೆ ? ತಾವು ಹೇಳಿದ್ದೀರಿ, ಕೋರ್ಟ್ ಮುಂದೆ ತಾವು ಹೇಳಿದ್ದೀರಿ, ನಮಗೆ ಎರಡು ದಾಖಲೆಗಳು ಸಿಕ್ಕದೆ ಹೋಗಿರುವುದರಿಂದ ಸುಪ್ರಿಂಕೋರ್ಟ್ ಮುಂದೆ ಅವರೆಡನ್ನು ಹಾಕಲಿಕ್ಕೆ ಆಗದೇ ಇರುವುದರಿಂದ ಈ ಕೇಸಿನಲ್ಲಿ ಹಿನ್ನಡೆ ಆಗಿದೆ. 2,289 ಎಕರೆ ಬೆಂಗಳೂರಿನಲ್ಲಿ ಐದು ಸಾವಿರ ಚಿಲ್ಲರೆ ಎಕರೆ ಟೌನ್‌ಶಿಪ್‌ನಲ್ಲಿ ವೃಥಾ ಕೊಡಬೇಕಾಗಿ ಬಂತು. ತಾವು ಆ ಆಫೀಸರ್ಸ್ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳುತ್ತೇವೆ. But ನಮಗೆ ಈ ಅರ್ಜಿಯನ್ನು consider ಮಾಡಿ fresh decision ಕೊಡಿ ಎಂದು ಕೋರ್ಟ್ ಮುಂದೆ

ಹಾಕಿದ್ದೀರಿ. ಏಕೆಂದರೆ ನಾನು ಎಲ್ಲಾ ಓದಿ ಈ ಶಾಸನಸಭೆಯ ಕಾಲವನ್ನು ತೆಗೆದುಕೊಳ್ಳುವುದಿಲ್ಲ. Are you as Law Minister aware of this ? ಅಷ್ಟೇ ನನ್ನ ಪ್ರಶ್ನೆ? ಇಲ್ಲಿ ನಿಮ್ಮ ಹೆಗಡೆಯವರು sign ಮಾಡಿ ಹಾಕಿರುವ Affidivate ಇದೆ ಅದರ ಪ್ರತಿಯನ್ನು ತಮಗೆ ಕಳುಹಿಸುತ್ತೇನೆ. ಅದರ prayer ಏನು ನಿಮ್ಮ prayer ಓದಿಬಿಡುತ್ತೇನೆ. Suitably modify the Order dated 21.7.2006 and permit the State to intiate preliminary fact finding enquiry in the matter of a making available 2,289 acres of extre saleable land to the project Company, supression of record of the State KIADB file No: 1256 pertaining to BMICP : PWD File No. 155 CRM 95 dated 1999-2000 to enable the state in intiate further necessary action" ಸುಪ್ರಿಂಕೋರ್ಟ್ ಮುಂದೆ ಶ್ರೀ ಸಂಜಯ್ ಆರ್. ಹೆಗಡೆ ಯವರು ಒಂದು ಅಪ್ಲಿಕೇಷನ್ ಹಾಕುತಾರೆ. ಇದಕ್ಕೆ ನಾಚಿಕೆ ಪಡಬೇಕು, ಯಾರಾದರೂ ವಿದ್ಯೆ, ಬುದ್ಧಿ, ಜ್ಞಾನ ಇರುವ ಒಂದು ಸಮಾಜ ಇದ್ದರೆ ಒಂದು ಸರ್ಕಾರ ನಾಲ್ಕೈದು ವರ್ಷದವರೆಗೆ ಒಂದು ಕಟ್ಟಳೆ ನಡೆಸಿ, ಕೇಸ್ ನಡೆಸಿ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ನಲ್ಲಿ ಈಗ ಹೋಗಿ after the decision ನಾನು 50,000–00 ಶ್ರೀರಾಮರೆಡ್ಡಿಯವರು 50,000–00 cost ಕೊಟ್ಟ ಮೇಲೆ ಹೋಗಿ ನಮ್ಮ ಹತ್ತಿರ ಇದ್ದ record ಅನ್ನು ಈ ಆಫೀಸರ್ಸ್ ಕದ್ದು ಇಟ್ಟಿದ್ದಾರೆ. ಆ records ಅನ್ನು ಈಗ file ಮಾಡಿದರೆ 30,000–00 ಕೋಟಿ ರೂ. ಗಳಷ್ಟು ಪ್ರಾಪರ್ಟಿ ನಮಗೆ ಸಿಗಬೇಕು. They have colluded with the company ನಮಗೆ fresh application re-petition ಗೆ ಅವಕಾಶವನ್ನು ಕೊಡಿ ಎಂದು ನೀವು ಅರ್ಜಿ ಹಾಕಿ you are conducting the case. ಯಾರು ಅವತ್ತಿನ PWD secretary ? 2006 ನೇ ಇಸವಿಯಲ್ಲಿ, ಯಾರು ನಿಮ್ಮ PWD secretary? ಅವರು ಈಗ ಏನಾದರೂ ? He is elevated as the Chief Secretary of Karnataka for doing this mischief. ಈ ಪಾಪ ಮಾಡಲಿಕ್ಕೆ ಅವರನ್ನು ಬಳಸಿಕೊಂಡು ಇವತ್ತು ಮುಖ್ಯ ಕಾರ್ಯದರ್ಶಿಯನ್ನಾಗಿ ಮಾಡಿದ್ದೀರಿ, ಮೇಲೆ ಬರುತ್ತದೆಂದು, ಇವತ್ತು ಅವರ ಮುಂಡನ ಬೋಳಿಸುತ್ತಿದ್ದೀರಿ. He will be cut short. ಸುಪ್ರೀಂಕೋರ್ಟ್ ಮುಂದೆ ಹೋಗಿದ್ದಾರೆ. ಯಾರು ನಿಮ್ಮ C& I Secretary, who is taking care of Industrial Area Development Board of Karnataka ? ಆತನನ್ನು ಇವತ್ತು ನೀವು ತೆಗೆಸುತ್ತಿದ್ದೀರಿ. ಹಾಗಾದರೆ ನೀವು ಇಲಾಖೆಯನ್ನು ನಡೆಸುತ್ತಿರಾ ? ನೀವು ಈ ಶಾಸನಸಭೆಯಲ್ಲಿ ಹೇಳುವುದೆಲ್ಲಾ ಸತ್ಯವೆಂದು ನಾವು ತಿಳಿದುಕೊಳ್ಳಬೇಕೆ ? ನಿಮಗೆ ಪೂರ್ಣವಾದ ಮಾಹಿತಿಯನ್ನು ಅಧಿಕಾರಿಗಳು ಕೊಡುತ್ತಿದ್ದಾರೆಂದು ನಾವು ಭಾವಿಸಬೇಕೆ ? ಇಲ್ಲೇನು ಹೇಳುತ್ತಿದ್ದೀರಿ, ಅದು ಸುಳ್ಳಾಗಿರಬಹುದು. ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ಮುಂದೆಯೇ ಅಧಿಕಾರಿಗಳು ಮಾಹಿತಿ ಕೊಟ್ಟಿಲ್ಲ. ಅದಕ್ಕಾಗಿ ಇನ್ನೊಂದು ಅರ್ಜಿಯನ್ನು ಹಾಕಲಿಕ್ಕೆ ಅವಕಾಶ ಕೊಡಿ ಎಂದು pray ಮಾಡುವ ಒಂದು ಸರ್ಕಾರ ಕರ್ನಾಟಕವನ್ನು ಆಳುತ್ತಿದೆ ಎಂದರೆ ಇದಕ್ಕಿಂತ ನಾಚಿಕೆಗೆಟ್ಟ ಪರಿಸ್ಥಿತಿ ಯಾವುದೇ ಪ್ರಜಾಪ್ರಭುತ್ವದಲ್ಲಿ

ಬರುವುದಿಲ್ಲ. After the disposal of the case, after conducting the enquiry and refusal by the enquiry officer to go head, ನೀವು case ಫೈಲ್ ಮಾಡುತ್ತಿದ್ದೀರಿ, ನೋಡಿ ಎಂತಹ ಕೆಲಸ ನಡೆಯುತ್ತಿದೆ. ಸರ್ಕಾರ ನಡೆಸುತ್ತಿದ್ದೀರಿ, ಪೈಪೋಟಿಯಲ್ಲಿದ್ದೀರಿ, ಮುಖ್ಯಮಂತ್ರಿಗಳು ಏತಕ್ಕೆ ಆಗುತ್ತೀರಿ ? ನಾನು ನಿಮಗೆ ಹೇಳಿದೆ, ಅಂಕಣದ ಗುಡಿ ಲೇಸು ಸರ್ವಜ್ಞ ಎಂದಿರುವ ನಾಡಿನಲ್ಲಿ ನಾವು ಹುಟ್ಟಿರುವವರು, ಈ ಹಂಗಿನ ಅರಮನೆಯಲ್ಲಿ ಬದುಕಬೇಕೇ ನೀವು ? ಯಾರ ಹಂಗಿನಲ್ಲಿ ಬದುಕಿದ್ದೀರಿ, ಏತಕ್ಕೆ ಬದುಕಿದ್ದೀರಿ ? ಯಾರ ತಲೆ ಬೋಳಿಸಲಿಕ್ಕೆ ಬದುಕಿದ್ದೀರಿ ? ಇವತ್ತು ಈ ರಾಜ್ಯದಲ್ಲಿ ರಾಜಕೀಯ ಮಾಡುತ್ತಿರುವವರು, ಆಡಳಿತ ಮಾಡುವವರು ಇದಕ್ಕೆ ನಮಗೆ ಉತ್ತರ ಹೇಳಬೇಕು. ಈ ಸಭೆ ಮುಂದೆ ನಾನು next ಹೇಳುತ್ತೇನೆ. ಕಟ್ಟಡಗಳ ಒಂದು ಪಟ್ಟಿಯನ್ನು ತಾವು ತರಿಸಿ ಓದಿ. Mr. J.H. Patel ಅವರ ಕಾಲದಲ್ಲಿ ಜಿಲ್ಲೆಯನ್ನು create ಮಾಡಿದ್ದಾರೆ. have they provided any amount for that ? ಹೊಸ ಹೊಸ ಕಟ್ಟಡಗಳನ್ನು ಹೊಳೆನರಸೀಪುರ, ರಾಮನಗರ, ಹಾಸನ ಅಷ್ಟರಲ್ಲೇ ಕಟ್ಟಬೇಕೇ ನೀವು ? ಇನ್ನೆಲ್ಲಿಯೂ ಕಟ್ಟುವ ಹಾಗಿಲ್ಲ. ಇನ್ನೆಲ್ಲಿಯೂ T.B. alter ಆಗುವ ಹಾಗಿಲ್ಲ. ಎಷ್ಟು ಗೆಸ್ಟ್‌ಹೌಸ್ ಹೊಳೆನರಸೀಪುರದಲ್ಲಿ ಆಗುತ್ತಿದೆ ಎಂಬ ಬಗ್ಗೆ ದಯವಿಟ್ಟು ಈ ಪುಸ್ತಕ ತೆಗೆದುಕೊಂಡು ಓದಬೇಕು. ನಿಮಗೇನಾದರೂ ಮನುಷ್ಯತ್ವ ಅನ್ನುವುದು ಇದ್ದರೆ if at all you deemed fit to behave as custodian of the exchequer and treasury of this land ಎಂದು ನೀವು ಭಾವಿಸಿದ್ದರೆ, ಈ ರಾಜ್ಯದ ಸರ್ಕಾರ ನಡೆಸಲಿಕ್ಕೆ ಯೋಗ್ಯತೆ ಇದೆಯೆಂದು ಭಾವಿಸಿದರೆ ಈ ಪುಸ್ತಕವನ್ನು ನೀವು ಓದಬೇಕು. ಎಲ್ಲೆಲ್ಲಿ ಯಾರ್ಯಾರಿಗೆ ಎಷ್ಟು ಅಗತ್ಯವಿರುವ ಕಟ್ಟಡಗಳು, ಇವೆ, ಎಷ್ಟು ಅನಗತ್ಯವಾಗಿರುವ ಕಟ್ಟಡಗಳು ಇವೆ, ತಾವು ಓದಬೇಕು, ನೋಡಬೇಕು. ರಾಜ್ಯದ ಹಣದಲ್ಲಿ ಚೆಲ್ಲಾಟ ಆಡುತ್ತಿರುವಿರಾ ? ಯಾವನೋ ಟ್ಯಾಕ್ಸ್ ಕಟ್ಟುತ್ತಿದ್ದಾನೆ ದಿಮ್ಮಗೆ, ಮನೆ ಮಠ ಹಾಳು ಮಾಡಿಕೊಂಡಿದ್ದಾನೆ, ತಂದು ತಂದು ನಿಮ್ಮ ಇಷ್ಟ ಬಂದ ಹಾಗೆ ಪೋಲು ಮಾಡುತ್ತಿರುವಿರಾ ? ಏನು ನಡೆಯುತ್ತಿದೆ ಇಲ್ಲಿ ? ಲೂಟಿ, ಹಗಲುದರೋಡೆ ಮಾಡಲಿಕ್ಕೆ ಯಾರು ಮುಂದೆ ಇರಬೇಕು ಎಂದು ಪೈಪೋಟಿ ನಡೆಯುತ್ತಿದೆ. ಅದನ್ನು running-race ಎಂದು ತಿಳಿದುಕೊಂಡಿದ್ದಾರೆ. Running-Race ಇರುವುದು ಅದಕ್ಕೆ ಈ ಪೈಪೋಟಿಗೆ ಪಾರ್ಟಿ ಆಗುವಿರಾ ? ಈ ಸ್ಪರ್ಧೆಯಲ್ಲಿ ತಾವು ಕ್ರೀಡಾಪಟುಗಳೇ? ಏನಾಗಿದೆಯೆಂದು ನನಗೆ ಗೊತ್ತಾಗಬೇಕು. ಇನ್ನು ಪ್ಯಾಕೇಜ್ ಎಂದರೆ ಏನು ? ಓದಿ ಏಂದರೆ ಓದುತ್ತೇನೆ, ಇದು ಬಹಳ ದೊಡ್ಡ ಪುಸ್ತಕ ಓದುವುದು ಹೇಗೆ? ಪ್ಯಾಕೇಜ್ ಎಂದರೆ ಏನು ? ಯಡಿಯೂರಪ್ಪನವರೇ, ನಾನು ಡಿಮ್ಯಾಂಡ್ ಮಾಡುತ್ತೇನೆ. ಇದೇ ಪಕ್ಷ ಪ್ಯಾಕೇಜ್ ಅನ್ನು ವಿರೋಧ ಮಾಡಿದೆ. ಶ್ರೀ ಎಸ್.ಎಂ. ಕೃಷ್ಣರವರು ಪ್ಯಾಕೇಜ್ ಪ್ರೋಗ್ರಾಮ್ಸ್ ಅನ್ನು announce ಮಾಡಿದಾಗ ಪ್ಯಾಕೇಜಿಗೆ ವಿರುದ್ಧವಾಗಿ ಮಾತನಾಡಿದಂಥ ಪಕ್ಷ ಇವತ್ತು ಪ್ಯಾಕೇಜ್‌ಗಳನ್ನು ಕೊಡಲಿಕ್ಕೆ ಅವರಿಗಿಂತ 100 ಕಿ.ಮಿ. fast ನಲ್ಲಿದ್ದಾರೆ. ಎಲ್ಲಾ ಪ್ಯಾಕೇಜ್. ಯಾರ ಜೊತೆ ಪ್ಯಾಕೇಜ್ ಅದರ ಫಲಾನುಭವಿ ಯಾರು ? ಅದರ shareholders ಯಾರು ? ಹೇಳಾದರೂ ಹೇಳಿ.

ನಮಗೆ ಗೊತ್ತಾಗಬೇಕು. ನಿಮಗೆ ಒಂದು ತಾಲ್ಲೂಕಿನ ರಸ್ತೆ. ಎಲ್ಲಾ maintenance package ಇವತ್ತು. ಅದನ್ನು ಒಬ್ಬನಿಗೇ ಕೊಡಬೇಕು ಒಂದು ಕೋಟ್, ಎರಡು, ಎರಡೂವರೆ ಕೋಟ್ ಬೇರೆ ಯಾರೂ ಅಲ್ಲಿ ಒಂದು ಜೆಲ್ಲಿ ಹೊಡೆಯವಂತಿಲ್ಲ, ಟಾರ್ ಹಾಕುವ ಅಗಿಲ್ಲ, ಒಂದು ಗುಂಡಿ ಮುಚ್ಚುವ ಹಾಗಿಲ್ಲ 100% ಪ್ಯಾಕೇಜ್. ಕೆ.ಇ.ಬಿ. ಸಾರಾಸಗಟಾಗಿ ಪ್ಯಾಕೇಜ್ 4–5 ಕಂಪನಿಯವರನ್ನು ಕರೆದು ಡಿವಿಷನ್ ಪ್ಯಾಕೇಜಸ್‌ನಲ್ಲಿ 24 ತಿಂಗಳಿಗೆ ಕೊಟ್ಟಿದ್ದೇನೆ, 5 ವರ್ಷಕ್ಕೆ enhance ಮಾಡುತ್ತೇವೆನ್ನುವುದು. ಒಂದು ಕಂಬ ವೆಡಲಿಕ್ಕೂ ಕೂಡ ಪ್ಯಾಕೇಜ್.ಒಂದು ಗುಂಡಿ ನೆಡಿಲಿಕ್ಕೆ ಪ್ಯಾಕೇಜ್ At what cost ? ಈ ಸಭೆಯ ಮುಂದೆ ಇಡಬೇಕು. S.R. ಅನ್ನು ತಾವು ರಿವೈಸ್ ಮಾಡಿದಿರಿ. It is again a long process ಎಸ್. ಆರ್. ಬಗ್ಗೆ ನಾನೇನಾದರೂ ನಿಂತುಕೊಂಡು ಮಾತನಾಡಿದೆ. ಶ್ರೀ ಹೆಚ್.ಕೆ. ಪಾಟೀಲ್ ಈ ಸಭೆಯಲ್ಲಿ ಅಥವಾ ಇನ್ನೊಂದು ಸಭೆಯಲ್ಲಿ ಎಸ್.ಆರ್. revision ಬಗ್ಗೆ ಅವರ ಸರ್ಕಾರದಲ್ಲಿ Irrigation Minister ಆಗಿದ್ದಾಗ ಟೀಕೆ ಮಾಡಿದ್ದರು ಎಂಬುದನ್ನು ರೆಕಾರ್ಡ್ ತೆಗೆದರೆ ನೀವು revise ಮಾಡಿರುವ ಖಖ. ಅನ್ನು ಹೋಲಿಸಿಬಿಟ್ಟರೆ ನೀವು ಈ ರಾಜಯವನ್ನು ನಡೆಸಲಿಕ್ಕೆ ಇದ್ದೀರೋ ಅಥವಾ ನಿರ್ನಾಮ ಮಾಡಲಿಕ್ಕೆ ಇದ್ದೀರೂ ನಮಗೆ ಉತ್ತರ ಹೇಳಬೇಕಾಗುತ್ತದೆ. 27, 28,40 % ವರೆಗೆ ಕೆಲವು Items ಮೇಲೆ enhance ಮಾಡಿದ್ದೀರಿ. Contractor ನಿನ್ನೆ ನನ್ನೊಂದಿಗೆ ಯಾರೋ ಮಾತನಾಡುತ್ತಿದ್ದರು, ಮೊದಲು ಈ ರಾಜ್ಯ, ದೇಶವನ್ನು ರಾಜಕೀಯದವರು ನಡೆಸುತ್ತಿದ್ದರು, ಅವರ ವ್ಯವಸ್ಥೆಯಲ್ಲಿತ್ತು ಹಾಳಾಯಿತು ಎಂದರು, ಆಮೇಲೆ bureaucrats ಬಂದು ಸರ್ಕಾರ ನಡೆಸುತ್ತಿದ್ದರು ಹಾಳಾಯಿತು ಎಂದರು, ಈಗೇನಾಗಿದೆ ಎಂದರೆ Contractors ನಮ್ಮನ್ನು ಆಳುತ್ತಿರುವವರು, ಆಡಳಿತ ನಡೆಸುತ್ತಿರುವವರು, ನಮ್ಮ ರೀತಿ ನೀತಿಯನ್ನು ನಿರ್ವಹಣೆ ಮಾಡುತ್ತಿರುವವರು money-lenders, contractor, builders, black money ಇರುವವರು. ಯಾರು ಇಲ್ಲಿಯವರು ಇಲ್ಲ. ಏಕೆ ? ಇಲ್ಲಿ ಬಣ್ಣ ಬಯಲು ಆಗಿಬಿಡುತ್ತದೆ. ಅವನೆಲ್ಲಾದರೂ ಕುಡಿದು ಸಂತೆಯಲ್ಲಿ ಬಾಯಿ ಬಿಟ್ಟುಬಿಡುತ್ತಾನೇನೋ ಎನ್ನುವ ಭಯ. ಅವನು ಆಂಧ್ರ, ತಮಿಳು ಭಾಷೆಯಲ್ಲಿ ಯಾರಿಗೆ ಇಲ್ಲಿ ಗೊತ್ತಾಗುತ್ತದೆ ? ಆದರೆ work ಮಾಡುತ್ತಿರುವವರು ಯಾರು ಸನ್ಮಾನ್ಯ ಪ್ರಕಾಶ್‌ರವರೇ ? ಯಾರು ಒಂದು ಲಕ್ಷ ಎರಡು ಲಕ್ಷ ಐದು ಲಕ್ಷ piece work ಮಾಡಿಕೊಂಡು ಇದ್ದರೋ, ಅದೇ ಹುಡುಗರ ಕೈಯಲ್ಲಿ ಇವತ್ತು ಅವನು ಸಬ್ ಲೀಸ್ ಕೊಟ್ಟು ಕೆಲಸ ಮಾಡಿಸುತ್ತಿರುವುದು. ಎಲ್ಲಿಂದಲೂ ಗ್ಯಾಂಗ್ ತರಿಸಲಿಲ್ಲ. ಎಲ್ಲೂ ತರಲಿಲ್ಲ favour ಎಲ್ಲೂ ಹಾಕಿಲ್ಲ ಪ್ಲಾಂಟ್. ಯಾರೋ ಒಬ್ಬರೋ ಇಬ್ಬರೋ ಹಾಕಿರಬಹುದು. ಎಲ್ಲರೂ ಉಪಯೋಗಿಸುತ್ತಿರುವುದು ಸ್ಥಳೀಯರಾದ ಹುಡುಗರನ್ನು, ಕಂಟ್ರಾಕ್ಟರುಗಳನ್ನೇ. ರೇಟ್‌ನಲ್ಲಿ ಎಷ್ಟು ವ್ಯತ್ಯಾಸವಿದೆ ಅವರಿಗೆ ಇವರಿಗೆ, ಎಷ್ಟು ವ್ಯತ್ಯಾಸವಿದೆ ? ನಾನು ಎಸ್.ಆರ್. ಗೆ ಮಾಡಿಕೊಡುತ್ತೇವೆ ಎಂದು ಹುಡುಗರು ಕೇಳಿದರೆ, ನೀವು ಕೊಡಲಿಲ್ಲ. ಇವತ್ತು ಪ್ಯಾಕೇಜ್‌ನಲ್ಲಿ 200 times ಜಾಸ್ತಿ ಮಾಡಿಕೊಡುತ್ತೀರಿ. Material procure ಮಾಡುವುದಕ್ಕೂ ಅವನಿಗೆ ಬಿಡುತ್ತೀರಿ. ಚಿಕ್ಕನಾಯಕನಹಳ್ಳಿಯಲ್ಲಿ ಒಬ್ಬ surface dressing ಮಾಡಿ ನಾಲ್ಕು ವರ್ಷಗಳಾಯಿತು. Surface dressing ಎಂದರೆ, ತಮಗೆ ಗೊತ್ತಾಗಬಹುದು. ರಸ್ತೆ ಎಲ್ಲವನ್ನೂ ಮಾಡಿ ಮುಗಿಸಿ, ನಾಳೆ, ನಾಡಿದ್ದು ashphat, tar ಹಾಕಬೇಕೆಂದರೆ, ಸ್ವಲ್ಪ ಮೆತ್ತಗೆ ಎರಚಿಕೊಂಡು ಮಟ್ಟ ಮಾಡಿಕೊಂಡಿರುತ್ತಾನೆ.

ಒಂದೇ ಸಲ ಟಾರ್ ಹಾಕುವುದಕ್ಕೆ ಹೋದರೆ ನಷ್ಟವಾಗುತ್ತದೆ. Surface dress ಆಗಿ 4–5 ವರ್ಷಗಳಾಗಿವೆ. ರಸ್ತೆಗಳಿಗೆ ಮತ್ತೆ Asphalt ಹಾಕಿಲಿಲ್ಲ, ಏಕೆ? ಕಳೆದ ವರ್ಷ asphalt rate ಜಾಸ್ತಿಯಾಯಿತು, ರೇಟ್ ಸಿಗಲಿಲ್ಲ Every one was waiting for revision of S.R. S.R. reivise ಆಗುತ್ತದೆಂದು every one was knowing S.R. revise ಮಾಡಿ ಎಂದು ನಾವೂ ಹೇಳಿದ್ದೇವೆ. ಆದರೆ, ಯಡಿಯೂರಪ್ಪನವರೇ, ಪ್ರತಿ contractor ಗೆ ಆರು ತಿಂಗಳು ಮೊದಲೇ ರೇಟ್ ರಿವಿಶನ್ ಆಗುತ್ತಿರುವುದು ಮೊದಲೇ ಗೊತ್ತಿತ್ತು, ಜಲ್ಲಿ ರೇಟ್ ಜಾಸ್ತಿಯಾಗುತ್ತದೆಂದು. ಪ್ರತಿ contractor ಗೆ ಗೊತ್ತಿತ್ತು, ಮರಲು ರೇಟ್ ಜಾಸ್ತಿಯಾಗುತ್ತದೆಂದು ಪ್ರತಿ contractor ಗೆ ಮೊದಲೇ ಗೊತ್ತಿತ್ತು, ಜೂನ್, ಜುಲೈ ಆಗುವವರೆಗೂ ಒಬ್ಬರೂ ಕೆಲಸ ಮಾಡುವುದಕ್ಕೆ ರಾಜಿ ಇರಲಿಲ್ಲ. They were sure ಆಗಿಯೆ ಆಗುತ್ತದೆಂದು ಗೊವತ್ತು ಂಯಾರು ? They are the Masters ನಾವಲ್ಲ. ನಾನು ಬರೆದುಕೊಟ್ಟಿದ್ದ ರಸ್ತೆಯನ್ನು ಇವತ್ತು ತೆಗೆದುಕೊಳ್ಳುತ್ತಿಲ್ಲ. ಯಾರಾದರೂ ಉದ್ದಿಮೆದಾರರಿಂದ ಬರೆಸಿಕೊಡಬೇಕು. ಇಲ್ಲವೇ ಯಾರಾದರೂ ಸ್ವಾಮಿಗಳ ಪಾದಕ್ಕೆ ಅಡ್ಡ ಬಿದ್ದು ನಿಮಗೊಂದುಕಾಗದ ಕೊಡಿಸಬೇಕು. ಇವತ್ತು ನಿಮ್ಮ ಆಫೀಸ್‌ಗಳಲ್ಲಿ ಎಷ್ಟು ಸ್ವಾಮಿಗಳು transfer ಗೆ ಶಿಫಾರಸ್ಸುಗಳನ್ನು ಮಾಡಿಲ್ಲ ? ಹೇಳಿ, ಅದನ್ನು ತೆಗೆಸಿರಿ ಸರ್. ಮಠಾಧ್ಯಕ್ಷರುಗಳಿಗೆ ಇವತ್ತು ಇದೊಂದು ದೊಡ್ಡ ಉದ್ಯೋಗವಾಗಿ ಬಿಟ್ಟಿದೆ. ನಮಗೆ ನಾಚಿಕೆಯಾಗುತ್ತದೆ. ಈಗ ನಮ್ಮ ಹತ್ತಿರ ಬರುವುದಿಲ್ಲ. ಒಂದು ಕಾಗದ ಕೊಡಿ ಸರ್, ನಾನು transfer ಮಾಡಿಸಿಕೊಳ್ಳುತ್ತೇನೆಂದು officials ಆದವರು ಸ್ವಾಮಿಗಳ ಹತ್ತಿರ ಹೋಗುತ್ತಾರೆ. ನಮ್ಮ ಕಾಗದದ ಮೇಲೆ ನಿಮ್ಮ ಇಲಾಖೆಯಲ್ಲಿ ಕಾಗದ ಹಾಕಿರುತ್ತಾರೆ. ಈಶ್ವರಪ್ಪನವರೆ, ಮಿನಿಸ್ಟರ್‌ಗಳು ನಮ್ಮ ಕಾಗದದ ಮೇಲೆ ಬರೆಯುತ್ತಿಲ್ಲ. ಅವರು ಸ್ವಾಮಿಗಳ ಕಾಗದದ ಮೇಲೆ ಬರೆಯುವುದು. ಇಂತಹ ಬುದ್ದಿಯೋರು ಇಂತಹ transfer ಕೇಳಿಕೊಂಡಿದ್ದಾರೆ, consider ಮಾಡಿ ಎಂದು ಕಾಗದ ಹಾಕಿರುತ್ತಾರೆ. ಹಾಗಾದರೆ, ನಾವು ಇಲ್ಲಿ ಏಕಿರಬೇಕು ? ಆಡಳಿತ ಯಾರು ಮಾಡುತ್ತಿದ್ದಾರೆ ? ತಾವು ಎಲ್ಲಿಗೆ ಹೋಗುತ್ತಿದ್ದೀರಿ ? ಸಾಹಿತಿಗಳು, ಸ್ವಾಮಿಗಳು, ನಿಮ್ಮ ಹತ್ತಿರ ಇರುವ contractor ಗಳು, ಸರ್ಕಾರಿ ಆಡಳಿತವನ್ನು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ನಾವು ಮಂತ್ರಿಗಳನ್ನು ನೋಡೋಣವೆಂದು ಹೊರಗಡೆ ನಿಂತಿರುತ್ತೇವೆ. ಅದರೆ, ಅವರು ಸೀದಾ ಒಳಕ್ಕೆ ಹೋಗುತ್ತಿರುತ್ತಾರೆ. ಯಾರು ಅಡೆತಡೆ ಉಂಟು ಮಾಡುವುದಿಲ್ಲ. ಆಮೇಲೆ ನೀವು ಬಂದು ಅವರನ್ನು ರಿಸೀವ್ ಮಾಡಿಕೊಳ್ಳುತ್ತೀರಿ. M.L.A ಗಳಾದವರು ಆ ಸೌಜನ್ಯವನ್ನು ನಿರೀಕ್ಷಿಸುವುದಕ್ಕಾಗುವುದಿಲ್ಲ. ಇಲ್ಲೊಂದು ಕಡೆ decentralization ಎಂದು ನಮಗೆ ಈಗ ಡಿ.ಆರ್. ಪಾಟೀಲರ ಕಾಲ, ಇನ್ನೊಂದು ಕಡೆ ನಿಮ್ಮ ಕಾಟ. MP ಗಳಿಗೆಲ್ಲರಿಗೂ ಕಾರು, staff, ಹುಡುಗರನ್ನು ಕೊಟ್ಟು ಅವರನ್ನು ಮಂತ್ರಿಗಳನ್ನಾಗಿ ಮಾಡಿ ಇಟ್ಟರಿ. ಮತ್ತೊಂದು ಕಡೆ, ಎಲ್ಲ ಕೆಲಸವೂ ನಮ್ಮಿಂದಲೇ ಆಗುತ್ತದೆಂದು ಜನರಿಂದ ನಿರೀಕ್ಷೆ. ಇಂತಹ ವಿಷಮ ಸ್ಥಿತಿಯಲ್ಲಿ ಶಾಸಕರಾದ ನಾವು ಬದುಕಿದ್ದೇವೆ ? ನಾವು ಮನೆಗಳನ್ನು ಕೊಡುವಂತಿಲ್ಲ, ಕೆ.ಡಿ.ಪಿ. ಮೀಟಿಂಗ್ ಮಾಡುವುದನ್ನು ನಿಲ್ಲಿಸಿ ಬಿಟ್ಟಿದ್ದೇವೆ. ಮೀಟಿಂಗ್‌ನಲ್ಲಿ ನೀರಿನ ಬಗ್ಗೆ review ಮಾಡುವಂತಿಲ್ಲ, ರಸ್ತೆಗಳ works review ಮಾಡುವಂತಿಲ್ಲ, ತಾಲ್ಲೂಕು ಪಂಚಾಯಿತಿ works review ಮಾಡುವಂತಿಲ್ಲ, ಜಿಲ್ಲಾ ಪಂಚಾಯತಿ works review ಮಾಡುವಂತಿಲ್ಲ. ಈ column ಇಲ್ಲ. ನಾವು ಏಕೆ ಇದ್ದೇವೆ? ಗೊತ್ತಿಲ್ಲ.

ಆದರೆ, ಇವತ್ತು ನಿಮ್ಮಲ್ಲರ ಪಾಪವನ್ನು ನಾವು ನಮ್ಮ ಮುಖದ ಮೇಲೆ ಹಾಕಿಕೊಂಡು ಜನರ ಮುಂದೆ ಕ್ಯಾಕರಿಸಿ ಉಗಿಸಿಕೊಳ್ಳುವುದಕ್ಕೆ ನಿಂತುಕೊಳ್ಳಬೇಕು. ನಮ್ಮ ಮುಖಗಳನ್ನು ಬಿಟ್ಟರೆ, ಬೇರೆಲ್ಲೂ ಒಳ್ಳೆಯ ಜಾಗಗಳಿಲ್ಲ. ಬಹಳ ಸಂಪನ್ನವಾದ ಜಾಗವೆಂದರೆ, ಅದು MLA ಗಳ ಮುಖವಾಗಿದೆ. ಪಾಲಿಗೆ ಯಾರ್‍ಯಾರು ? ಎಲ್ಲರೂ ಭಾಗಸ್ಥರೆ ಆಗಿದ್ದಾರೆ. MLCಗೆ ಭಾಗ ಕೊಡಬೇಕು, MPಗೆ ಭಾಗ ಕೊಡಬೇಕು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಭಾಗ ಕೊಡಬೇಕು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಭಾಗ ಕೊಡಬೇಕು, ZP Memberಗೆ ಭಾಗ ಕೊಡಬೇಕು, ಎಲ್ಲರಿಗೂ ಭಾಗ ಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೆ, ಉದಾಸಿಯವರು ನಗುತ್ತಿದ್ದಾರೆ. ಒಐಂಗಳು ಉಗಿಸಿಕೊಳ್ಳಬೇಕೆಂದರೆ, ಅವರು ನಗಾಡುತ್ತಿದ್ದಾರೆ. ಅವರು ಎಷ್ಟು ಖುಷಿಯಲ್ಲಿದ್ದಾರೆಂಬುದನ್ನು ನೋಡಿ. ಬೈಗುಳವೆಲ್ಲವೂ ನಮಗೆ. ಹಳ್ಳಿಗಳಿಗೆ ಹೋದರೆ, ಜನರು ನೀರು ಬೇಕೆಂದು ಕೇಳುವುದು ನಮ್ಮನ್ನು, ರಸ್ತೆ ಬೇಕೆಂದು ಕೇಳುವುದು ನಮ್ಮನ್ನು, ಲೈಟ್ ಬೇಕೆಂದು ಕೇಳುವುದು ನಮ್ಮನ್ನು, ಚರಂಡಿ ಬೇಕೆಂದು ಕೇಳುವುದು ನಮ್ಮನ್ನು, ಎಲ್ಲವನ್ನು ಕೇಳುವುದೂ ನಮ್ಮನ್ನೇ. ಆದರೆ, ದುಡ್ಡು ಕೊಡುವುದು ಮಾತ್ರ ಅವರಿಗಾದರೆ, ಬೈಸಿಕೊಳ್ಳುವುದು ಮಾತ್ರ ನಾವು. ನಮಗೆ ಎಂತಹ ಗ್ರಹಚಾರ ನೋಡಿ ?

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ :– ಒಐಂಗಳಿಗೆ ಅಷ್ಟೋ ಇಷ್ಟೋ ಅವಕಾಶ ಕಲ್ಪಿಸಿಕೊಡಲು ಅವರು ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನೀವು......

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಇಲ್ಲಿ ಅವಕಾಶ ಎನ್ನುತ್ತಾರೆ, ಅಲ್ಲಿ Governor ಹತ್ತಿರ ಹೋಗಿ petition ಕೊಡುತ್ತಾರೆ. ಇಲ್ಲಿ ಬರುತ್ತಾರೆ, ಅರ್ಜಿ ಕೊಡುತ್ತೀರಿ, ಯಾರಿಗೆ ಅವಕಾಶ ಮಾಡಿಕೊಡುತ್ತಿದ್ದೀರಿ ? Governor ಗೆ ಹೋಗಿ petition ಕೊಟ್ಟಿದ್ದಾರೆ.

ಶ್ರೀ ಬಿ.ಎ. ಜೀವಿಜಯ :– ಅಧ್ಯಕ್ಷರೆ, ಮೊನ್ನೆ ಮಳೆ ಹಾನಿಯಲ್ಲಿ ನಮ್ಮ ಕೊಡಗಿಗೆ ಸ್ವಲ್ಪ ಹಣ ಬಿಡುಗಡೆಯಾಗಿದೆ. ನಮ್ಮ District Minister ಆದ ರಾಮಚಂದ್ರೇಗೌಡರು ಇಲ್ಲೇ ಇದ್ದಾರೆ. ಅವರು ಬಹಳ ಸಜ್ಜನರು. ಆದರೆ, ಅಲ್ಲಿಗೆ ಅವರ ಚೇಲಾಗಳು ಬರುತ್ತಿದ್ದಾರೆ. ಇಂತಿಂಥ ರಸ್ತೆಗಳಿಗೆ ಇಷ್ಟಿಷ್ಟು ಹಣ ಬಿಡುಗಡೆ ಮಾಡಬೇಕೆಂದು ಇವರು ಲೆಟರ್ ಕಳುಹಿಸುತ್ತಿದ್ದಾರೆ. ಹಾಗಾದರೆ, MLAಗಳಾಗಿ ನಾವು ಏಕಿರಬೇಕು ? ಮಳೆಯಿಂದ ಹಾನಿಯಾಗಿದೆಯೆಂದು ಇವರು ಹೇಗೆ decide ಮಾಡುತ್ತಾರೆ ? ಅಲ್ಲಿ committee ಇದೆ. ಅದ್ಯಾವುದೂ ಇಲ್ಲದೇ ಈ ರೀತಿ ಮಾಡುತ್ತಿರುವುದರಿಂದ ಇವರ ಸರ್ಕಾರದಿಂದ ನಮಗೆ ಒಳ್ಳೆಯ ಆಡಳಿತ ಸಿಗುತ್ತದೆಯೇ ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಅಧ್ಯಕ್ಷರೆ, ನಾನು ಅದಕ್ಕೊಂದು ಉದಾಹರಣೆ ಹೇಳುತ್ತೇನೆ. ಮಾನ್ಯ ಯಡಿಯೂರಪ್ಪನವರು ಇಲ್ಲೇ ಕುಳಿತಿದ್ದಾರೆ. ಆಗಲೇ ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾ, ಚಿಕ್ಕಮಗಳೂರಿಗೆ ಏನು ಅನ್ಯಾಯವಾಗಿದೆ ಎಂಬುದನ್ನು ಹೇಳಿದ್ದಾರೆ. ಎಂ.ಎಲ್.ಎ. ಬಿಡಿ, ನಿಮ್ಮ ಮಂತ್ರಿಗಳಾದ ಶ್ರೀರಾಮುಲು ಇಲ್ಲಿ ಕುಳಿತ್ತಿದ್ದಾರಲ್ಲ, ಇವರು ಬಳ್ಳಾರಿ ಮಂತ್ರಿ ಅವರ ಗತಿ ಏನಾಗಿದೆ ಗೊತ್ತೆ? ಬಳ್ಳಾರಿ ಮುನಿಸಿಪಾಲಿಟಿಗೆ ಹಣ ಕೊಟ್ಟಿದ್ದೀರಿ.. ..

ಅಧ್ಯಕ್ಷರು :– ರೆಡ್ಡಿಯವರೆ, ಈಗ ಅವರು ಮಾತನಾಡುತ್ತಿದ್ದಾರೆ. ನೀವು ಮಧ್ಯೆ ಎದ್ದು ನಿಂತು ಹೀಗೆ ಮಾತನಾಡಿದರೆ ಹೇಗೆ? ನೀವು ಮಾತನಾಡುವಾಗ ಇವೆಲ್ಲವನ್ನೂ ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಂತ್ರಿಯಾಗಿರುವ ಅವರ ಗತಿ ಏನೆಂದು ಹೇಳುತ್ತೇನೆ, ನೋಡಿ, 2 ಕೋಟಿ 43 ಲಕ್ಷ ರೂಪಾಯಿಗಳಷ್ಟು SFC grant release ಮಾಡಿದ್ದಾರೆ, ಎಲ್ಲಾ ತಾಲ್ಲೂಕು, ಪಟ್ಟಣಗಳಿಗೆ grant ಕೊಟ್ಟು ಬಿಟ್ಟಿದ್ದೀರಿ ಬಳ್ಳಾರಿಗೆ ನಿಮ್ಮ office ನಿಂದಲೆ ಪೌರಾಡಳಿತ ಮಂತ್ರಿಗಳ ಆಫೀಸೋ, ಮುಖ್ಯಮಂತ್ರಿಗಳ ಆಫೀಸೋ ಗೊತ್ತಿಲ್ಲ, 43 ಲಕ್ಷ ರೂಪಾಯಿಗಳನ್ನು ಮಾತ್ರ ಬಳ್ಳಾರಿ ಟೌನ್‌ಗೆ ಇಟ್ಟು, ಯಾವ್ಯಾವ works ತೆಗೆದುಕೊಳ್ಳಬೇಕೆಂದು ಇಲ್ಲಿಂದಲೇ ಕಳುಹಿಸಿದ್ದೀರಿ, ನೋಡಿ. ದುರ್ಗಾ ಲೇಔಟ್ – 20 ಲಕ್ಷ ಬಿ.ಗೋನಾಳ – 10 ಲಕ್ಷ ವಿನಾಯಕ ನಗರ – 10 ಲಕ್ಷ ಗಗ್ಗರಕಟ್ಟೆ – 35 ಲಕ್ಷ ಅವಂಭಾವಿ – 20 ಲಕ್ಷ ಅಲದಳ್ಳಿ – 10 ಲಕ್ಷ ಬಿಸಲಳ್ಳಿ – 10 ಲಕ್ಷ ಸಾಯಿರಾಂ ಕಾಲೋನಿ – 10 ಲಕ್ಷ ಕಾಕರ್ಲ ತೋಟ – 20 ಲಕ್ಷ ಆಲ್ಲೀಪುರ – 10 ಲಕ್ಷ ಹಂದ್ರಾಳ – 20 ಲಕ್ಷ ಈ ರೀತಿಯಾಗಿ ಇಲ್ಲಿಂದಲೇ ಇಂತಿಂತಹ works ತೆಗೆದುಕೊಳ್ಳಬೇಕೆಂದು ಹೇಳಿ ಕಳುಹಿಸಿಬಿಟ್ಟರೆ, ಆ ಮಂತ್ರಿ ಗತಿ ಏನಾಗಬೇಕು ನೀವೇ ಹೇಳಿ? ನಿಮ್ಮ ಕ್ಯಾಬಿನೆಟ್ ಮಂತ್ರಿಯ ಪರಿಸ್ಥಿತಿ ಏನು? ನೀವು ಇಲ್ಲಿಂದಲೇ ಇಂತಿಂತಹ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಕಳುಹಿಸುತ್ತೀರಿ. ಅಲ್ಲಿರುವ ಜನಪ್ರತಿನಿಧಿಗಳ ಪರಿಸ್ಥಿತಿ ಏನು? ಗತಿ ಏನು? ಹೇಳಿ. ನೀವು ಯಾರಿಗೆ ಸರ್ಕಾರ ನಡೆಸುತ್ತಿದ್ದೀರಿ? ಹೇಗೆ ಸರ್ಕಾರ ನಡೆಸುತ್ತಿದ್ದೀರಿ? ಇದು ಪರಿಸ್ಥಿತಿ. ಇಲ್ಲಿಂದಲೇ ಲಿಸ್ಟ್ ಮಾಡಿ ಕಳುಹಿಸಿದರೆ, ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಬಾಗೇಪಲ್ಲಿಗೆ ಸಂಬಂದಿಸಿದಂತೆ ನಾವು action plan ಮಾಡಿ ಕಳುಹಿಸಿದರೆ, ನಮ್ಮ ಪಕ್ಷದ ಕಾರ್ಯಕರ್ತರು ಹೇಳಿದ ಕೆಲಸಗಳನ್ನು ಸೇರಿಸಿಕೊಳ್ಳಲಿಲ್ಲವೆಂದು ಆ plan ಅನ್ನು approval ಮಾಡದೇ pending ಇಟ್ಟಿದ್ದಾರೆ.

ಅಧ್ಯಕ್ಷರು : ಮಾಧುಸ್ವಾಮಿಯವರೆ, ತಾವು ಮಾತನಾಡಿ ಈ ರೀತಿಯಲ್ಲಿ ನೀವು ಎಲ್ಲರಿಗೂ ಯೀಲ್ಡ್ ಆದರೆ, ಎಲ್ಲರೂ ಎದ್ದು ನಿಂತು ಮಾತನಾಡುತ್ತಾರೆ. ಅವರಿಗೆ ಅವಕಾಶವಿದ್ದಾಗ ಮಾತನಾಡಲಿ. ನೀವು ಇಷ್ಟು ಗಂಟೆ ಇಷ್ಟು ನಿಮಿಷದೊಳಗೆ ಮಾತನಾಡಬೇಕಾಗುತ್ತದೆ. ನಾನು ಅಂಕೆ ಹಾಕಿಬಿಡುತ್ತೇನೆ. ಇದು ಡಿಮ್ಯಾಂಡ್. ಎಲ್ಲಾ ಕಡೆಗಳಲ್ಲೂ ಮಾತನಾಡಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ :- ಸರ್, ತಮ್ಮ ಗಮನಕ್ಕೆ urgent ಆಗಿ ಒಂದು ವಿಷಯ ತರಬೇಕಾಗಿದೆ. Councilನಲ್ಲಿ ಈಗ APMC amended Bill ಅನ್ನು discussionಗೆ ತೆಗೆದುಕೊಳ್ಳುತ್ತಿದ್ದಾರೆ. ಇಲ್ಲಿ ಸರ್ಕಾರ ಏನು ಒಪ್ಪಿತ್ತು Marketing Directorಗೆ ಬದಲಾಗಿ ಸರ್ಕಾರಕ್ಕೆ ಆ ಅಧಿಕಾರಿಯನ್ನು ಇಟ್ಟುಕೊಳ್ಳಬೇಕೆಂದು ನಾವು ಹೇಳಿದ್ದೆವು. ಅದಕ್ಕೆ ಸರ್ಕಾರ ಒಪ್ಪಿತ್ತು. ಆನಂತರ private market yardನೊಳಗೆ producers ಮತ್ತು sellersಗೆ ಯಾವುದೇ ರೀತಿಯಲ್ಲೂ; ದುಡ್ಡನ್ನು levy ಮಾಡಬಾರದೆಂದು ಹೇಳಿದ್ದೆವು. ನೀವು ಎರಡನ್ನೂ ಒಪ್ಪಿದ್ದಿರಿ. ಒಂದರಲ್ಲಿ ಆ Marketing Directorಗೆ ಲೈಸೆನ್ಸ್ ಕೊಡುವಂತಹ ಪವರ್ ಅನ್ನು ಇಟ್ಟು, ನೀವು ಒಪ್ಪಿದ್ದರ ವಿರುದ್ಧವಾಗಿ Bill ಅನ್ನು ಕಳುಹಿಸಿದ್ದೀರಿ. ಇನ್ನೊಂದರಲ್ಲಿ, producer ಅನ್ನು delete ಮಾಡಿದ್ದೀರಿ, seller ಎಂದು ಇಟ್ಟಿದ್ದೀರಿ. Producer is also a Seller as per the APMC definition. ಇವೆರಡನ್ನೂ ತಾವೂ ಏನು ಇಲ್ಲಿ ಒಪ್ಪಿದ್ದಿರಿ, ಅದರ ವಿರುದ್ಧ ಅಲ್ಲಿ Bill ಈಗ discussionನಲ್ಲಿದೆ. ದಯವಿಟ್ಟು ಅದರಲ್ಲಿ ತಾವು ಯಾವ ರೀತಿ ಬದಲಾವಣೆ ತರುತ್ತೀರಿ? ಬೇಗ ತರಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ, ಸನ್ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರವನ್ನು charge ಮಾಡುತ್ತಿದ್ದೇನೆ. ಈಗ ನಾನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಮೂಲಕ PWD Minister ಅವರನ್ನು ಕೇಳಬಯಸುತ್ತೇನೆ. ರಸ್ತೆಗಳ ಆಯ್ಕೆ ಯಾವ ಆಧಾರದ ಮೇಲೆ ಆಗುತ್ತಿದೆ? ರಸ್ತೆಗಳಿಗೆ ಗ್ರಾಂಟ್ ಅನ್ನು ಯಾವ ಆಧಾರದ ಮೇಲೆ ಕೊಡುತ್ತಿದ್ದೀರಿ? ಸರ್, ನಮ್ಮ ಹತ್ತಿರ ಬರುತ್ತಿದ್ದಾರೆ. ನಾನು ಯಾವುದನ್ನೂ ಇಲ್ಲಿ ಉತ್ಪ್ರೇಕ್ಷೆಯಿಂದ ಆಡುವುದಿಲ್ಲ. ಒಂದು ಕಾಗದವನ್ನು ಕೊಟ್ಟು ಬಿಡಿ ಸರ್, ನಾವು manage ಮಾಡಿ ರೋಡಿಗೆ grant ಹಾಕಿಸಿಕೊಂಡು ಬರುತ್ತೇವೆ ಎಂದು ಹೇಳುತ್ತಾರೆ. ನಮಗೆ ಗೊತ್ತಿಲ್ಲದೆ, ಈಗ ನನ್ನ ಕ್ಷೇತ್ರದಲ್ಲಿ 90 ಲಕ್ಷ ರೂಪಾಯಿಗಳಷ್ಟು NABARD works ಸೇರಿದೆ. ಪ್ರಕಾಶ್‌ರವರೆ, ರಸ್ತೆಯೇ ಇಲ್ಲ, ಮೂರು ಕಿಲೋಮೀಟರ್‌ಗಳು ಬಿಟ್ಟು ಮುಂದಕ್ಕೆ ಹೋದರೆ, ಹಳ್ಳ. ಯಾರು ಇದನ್ನು ಸೇರಿಸಿದ್ದು? ಗೊತ್ತಿಲ್ಲ. ನನ್ನದೇ ಮತಕ್ಷೇತ್ರವಾದ

ಚಿಕ್ಕನಾಯಕನಹಳ್ಳಿಯಲ್ಲಿ ಈ ರೀತಿ ಆಗಿದೆ. ಇಲ್ಲಾ ಜಾತಿಯಲ್ಲಿ ಇರಬೇಕು, ನಾವೂ ಇಲ್ಲಾ ಪಾರ್ಟಿಯಲ್ಲಿರಬೇಕು. ಹಾಗೂ ನಮ್ಮ ಕ್ಷೇತ್ರದಲ್ಲಿ ಕೊಟ್ಟರೆ ಅವರ ಪಾರ್ಟಿಯವರಿಗೆ ನಾವು ಎಂ.ಎಲ್.ಎ.ಗಳು ಭಾಗ ಕೊಡಬೇಕು. ನೀವು ನಮ್ಮನ್ನು ಎಂಥ ವಿಷಮ ಸ್ಥಿತಿಗೆ ತಂದು ನಿಲ್ಲಿಸಿದ್ದಿರಿ? ತರಿಸಿ ರೆಕಾರ್ಡು. ಯಾವ್ಯಾವ ರಸ್ತೆಗಳಿಗೆ ಗ್ರಾಂಟ್ ಹಾಕುತ್ತಿದ್ದಿರಿ ನೀವು, ಯಾವ ಆಧಾರದ ಮೇಲೆ ಆಗಿದೆ ಎಂಬುದನ್ನು ಹೇಳಬೇಕಲ್ಲಾ? ಏನು ನಡೆಯುತ್ತಿದೆ ಈ ಇಲಾಖೆಯಲ್ಲಿ ಎಂಬುದು ಗೊತ್ತಾಗುವುದಿಲ್ಲ. ಯಾರು ಬೇಕಾದರೂ ಬಂದು 25, 30, 40, 90 ಲಕ್ಷದ worksನ್ನು ಇಲ್ಲಿ ಹಾಕಿಸಿಕೊಂಡು ಹೋಗಬಹುದು, ನಿಮ್ಮ ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಏನು ಎಂ.ಎಲ್.ಎ. ಆಗ ಬೇಕಾಗಿಲ್ಲ. ಅಲ್ಲಿ ಮೀಸೆ ತಿರುವುತ್ತಾರೆ. ಏನಯ್ಯ, ನಿಮ್ಮ ಎಂ.ಎಲ್.ಎ. ನೀತಿ ಹೇಳಿಕೊಂಡು ಓಡಾಡಿದರು ನೋಡು ನಾನು work ಹಾಕಿಸಿಕೊಂಡು ಬಂದೆ ಎಂದು. ಉಸಿರು ಬಿಡುವಂತೆ ಇಲ್ಲ. ನಾನು ಇದನ್ನು ಮಾಡಬೇಡಿ ಎಂದರೆ ಅಲ್ಲಿನ ಜನರು ವಿರೋಧಿಯಾಗುತ್ತಾರೆ. ಅವರು ಮಾಡುವುದನ್ನು ಇವತ್ತು ಸಹಿಸಿಕೊಳ್ಳಲು ಆಗುವುದಿಲ್ಲ. ನಮ್ಮ ಕಣ್ಣಿನ ಎದುರಿಗೆ ಅಗತ್ಯ ಇಲ್ಲದಿರುವ ಕೆಲಸ ನಡೆಯುತ್ತಿದೆ. ಕೆಲಸ ಇಲ್ಲದೇ payment ಆಗುತ್ತಿದೆ. ಜಂಗಲ್ ಕ್ಲಿಯರೆನ್ಸ್ ಎಂದು 25, 30, 40 ಲಕ್ಷ ಹಾಕಿಸಿಕೊಂಡು ಹೋಗಿದ್ದಾರೆ. side ನಲ್ಲಿರುವ ಗಿಡವನ್ನು ನಾನು ತೆಗೆಯುತ್ತೇನೆಂದು ಒಂದು ಜೆ.ಸಿ.ಬಿ. ತೆಗೆದುಕೊಂಡು 3 ಗಂಟೆ ಆ ಕಡೆ 3 ಗಂಟೆ ಈ ಕಡೆ ಒಡೆದುಕೊಂಡು ಹೋಗಿ 20–25 ಲಕ್ಷ ರೂಪಾಯಿ ಕೆಲಸ ಮಾಡಿದ್ದ stage ತಂದಿದ್ದಾರೆ. ಏನಾಗಿದೆ? ನಾನು ಉತ್ಪ್ರೇಕ್ಷೆಗೆ ಆಡುತ್ತಿಲ್ಲ. ಇಷ್ಟೊಂಡು ಅಧ:ಪತನಕ್ಕೆ ಯಾವತ್ತೂ ಲೋಕೋಪಯೋಗಿ ಇಲಾಖೆ ಇಳಿದಿರಲಿಲ್ಲ. ತೆಗೆದುಕೊಳ್ಳುತಿರುವ ರೋಡ್ ಯಾವುದು? ನಿಮಗೆ ಸಂಬಂಧ ಇಲ್ಲ. ನಬಾರ್ಡ್ ಎಂದು ಹೇಳುತ್ತೀರಿ, ವಿ.ಆರ್. ತೆಗೆದುಕೊಳ್ಳುತ್ತೀರಿ, ಇನ್ನು ಯಾವುದೋ ಎಂ.ಡಿ.ಆರ್. ತೆಗೆದುಕೊಳ್ಳುತ್ತೀರಿ, ಒ.ಡಿ.ಆರ್. ತೆಗೆದುಕೊಳ್ಳುತ್ತಿದ್ದೀರಿ, ಐ.ಸಿ.ಆರ್.ಸಿ. ರೋಡ್‌ನ್ನು ತೆಗೆದುಕೊಳ್ಳುತ್ತಿದ್ದೀರಿ. ನೀವು ಪಿ.ಡಬ್ಲ್ಯೂ.ಡಿ ರಸ್ತೆಯನ್ನೇನು ಮಾಡುತ್ತೀರಿ ಎಂದರೆ ಕೆ.ಆರ್.ಡಿ.ಸಿ.ಎಲ್. ನವರು ಮಾಡುತ್ತಾರೆ, ಅದು ನಮಗೆ ಸಂಬಂಧ ಇಲ್ಲ, State Highwayಗಳೆಲ್ಲಾ ಕೆ.ಆರ್.ಡಿ.ಸಿ.ಎಲ್. ನಲ್ಲಿ ಆಗಬೇಕೆಂದು ಹೇಳಿ ಅಲ್ಲಿ ದನಾ ಕಾಯಲು ಲಾಯಕ್ಕು ಇಲ್ಲದ ಒಬ್ಬ officer ನ್ನು ಇಟ್ಟುಕೊಂಡು ಸವಾರಿ ಮಾಡುತ್ತೀರಾ ನೀವು? he is unfit ಕತ್ತೆಯನ್ನೋ, ದನವನ್ನೋ ಕಾಯಲಿ ಅವರನ್ನು ಮನೆಗೆ ಕಳಿಸಿ. ನಾನು ಇವತ್ತು ನೊಂದು ಹೇಳುತ್ತಿದ್ದೇನೆ. ಯಡಿಯೂರಪ್ಪನವರಿಗೆ ಗೋಗರೆದು ಒಂದು ಕಾಗದವನ್ನು ಕೊಡಿಸಿದೆ. ಒಂದು ರಸ್ತೆ ಮಂಡ್ಯ–ಹಡಗಲಿ ರೋಡ್ ಹಾಳಾಗಿಹೋಗಿದೆ ಕ್ಯಾಕರಿಸಿ ಉಗಿಯುತ್ತಿದ್ದಾರೆ

ಜನ ಎಂದು, ಅವರು ವಿವೇಚನೆ ಯಾರಿಗೂ ಕೊಟ್ಟಿಲ್ಲದಿದ್ದ ಕಾಗದ 3 ಕೋಟಿ 55 ಲಕ್ಷ ಬಿಡುಗಡೆ ಮಾಡಿ ರಸ್ತೆ ತೆಗೆದುಕೊಳ್ಳಿ ಎಂದರೆ secretary ಯವರು Finance Minister ಅವರು ಹಾಗೆಲ್ಲಾ ಕೂಡಲು ಬರುವುದಿಲ್ಲವೆಂದು ಹೇಳುತ್ತಾರೆ. Call him. ಮತ್ತೆ ನಾನು ಹೋಗಿ ಗಲಾಟೆ ಮಾಡಿದ್ದಕ್ಕೆ ನಾನು ಎಂ.ಡಿ.ಗೆ ಹೇಳಿದ್ದೇನೆ ಸಾರ್, you contact him. M.D. ನನಗೆ ಫೋನ್ ಮಾಡಿ ಹೇಳುತ್ತಾರೆ, Sir, I have taken care of the road ತಾವು ತಾಪತ್ರಯ ಮಾಡಿಕೊಳ್ಳಬೇಡಿ ಸಾರ್, ಆದರೆ ಆ contractorನ್ನು ಮುಂದುವರೆಸಲು ಆಗುವುದಿಲ್ಲ ಸಾರ್. ನನ್ನ ಮನೆಯಲ್ಲಿ ಯಾರೂ ನೆಂಟರಿಷ್ಟರು contractor ಇಲ್ಲ, ಯಾವನಿಗೋ ಕೊಟ್ಟು ರೋಡ್ ಮಾಡಿಸಯ್ಯ ಎಂದು ಹೇಳಿದರೆ four months ಆದ ಮೇಲೆ ನಾನು ಫೋನ್ ಮಾಡಿ ಹೇಳಿದರೆ "I am sorry sir, that cannot be included" ಎಂದು ಹೇಳುತ್ತಾರೆ. I have a letter. ನಿಮ್ಮ ಸುಬ್ರಹ್ಮಣ್ಯಂರವರ ಹತ್ತಿರ letter ಇದೆ. ನಿಮ್ಮ ಎಂ.ಡಿ. ಕೆ.ಆರ್.ಡಿ.ಸಿ.ಎಲ್. ಅವರು ನಾನು ಆ ರಸ್ತೆಯನ್ನು ಸೇರಿಸಿಕೊಂಡಿದ್ದೇನೆ ಎನ್ನುವ letter ಇದೆ. ಕತ್ತೆಯ ಹಲ್ಲು ಉಜ್ಜಲು ಇದ್ದಾನಾ ಆ officer? ನಮ್ಮ ಮರ್ಯಾದೆ ಏನಾಗಬೇಕು? ನಾನು ಆ ರಸ್ತೆಯನ್ನು ಕಿತ್ತುಹಾಕಿಸಿ ಎಂ.ಎಲ್.ಎ. ಗ್ರಾಂಟನ್ನು ಹಾಕಿ ಎಂಬ್ಯಾಂಕ್‌ಮೆಂಟ್ ಮಾಡಿಸಿದೆ, ತಗ್ಗಾಗಿರುವ ಕಡೆ ಮಣ್ಣನ್ನು ಹೊಡೆಸಿದೆ. ಆನಂತರ ಆಗುವುದಿಲ್ಲವೆಂದು ಆ letter ರನ್ನು ಎಸೆದರು. ನಾವು ಸ್ವಾಭಿಮಾನ ಇರುವವರು ಏನಾಗಬೇಕು? ಇವತ್ತು ಜನರು ನಮ್ಮನ್ನು ನೋಡಿ ನಗುತ್ತಾರೆ. I demand. Such officers should be called here and explanation has to be sought ನಾನು ಹುಡುಗಾಟಕ್ಕೆ ಮಾತನಾಡುವವನಲ್ಲ. ಪಿ.ಡಬ್ಲ್ಯೂ.ಡಿ. secretary ಏನಾಗಿದ್ದರೆ, ಮೂರು ದಿವಸಗಳಿಂದ ಕೇಳುತ್ತಿದ್ದೇನೆ ಮಾಹಿತಿ ಕೊಡಿ ಎಂದು. ಕೊಡುತ್ತಾರಾ? ನಿಮ್ಮ secretary ಕೈಯಲ್ಲಿ ಕೊಡಿಸಿದ್ದೇನೆ. ನಾನು ಭಾರಿ ಹುಷಾರಿ. ನಿಮ್ಮ secretary ಕೈಯಲ್ಲಿ ನಾನು demand ಮೇಲೆ ಮಾತನಾಡಲು ಇಂತಿಂಥ ಮಾಹಿತಿ ಬೇಕು ಎಂದು ಕಾಗದ ಕೊಡಿಸಿದ್ದೇನೆ. I have not received ಇವತ್ತಿನವರೆಗೂ ಬಂದಿಲ್ಲ. You call for his explanation ಪಾಟೀಲ್‌ರವರನ್ನು ಕರೆದು ಮಾಧುಸ್ವಾಮಿಯವರು ಕಾಗದ ಕೊಟ್ಟಿದ್ದರೇ, ಇವತ್ತಿನವರೆಗೆ ಉತ್ತರ supply ಆಗಿದೆಯೇ ಎಂದು ಕೇಳಿ. ಎಲ್ಲಿಂದ ತರಿಸಿಕೊಳ್ಳಬೇಕು? ಮಾಹಿತಿ ಹಕ್ಕಿನ ಕೆಳಗೆ ಹಾಕಿಕೊಂಡು ಕುಳಿತರೆ ನೀವು ಶಾಸನ ಸಭೆ ನಡೆಸಲು ಆಗುತ್ತದೆಯೇ? Right to Information Act ಕೆಳಗೆ ಎಂ.ಎಲ್.ಎ.ಗಳು ಅರ್ಜಿಯನ್ನು ಹಾಕಬೇಕೇ? Are we not empowered to access the records in the

State Offices ? ಇದು ಹೊಸದೇ? ಕೊಡುವಂತೆ ಇಲ್ಲ. ಶಾಸನಸಭೆ ಮುಗಿಯುವವರೆಗೂ ಯಾವುದೇ ಮಾಹಿತಿಯನ್ನು ಯಾರಿಗೂ ಕೊಡುವಂತೆ ಇಲ್ಲ. ಏನಿದು ಸಾರ್ವಭೌಮರ, ಚಕ್ರವರ್ತಿಗಳ ಅದಿಲ್‌ಶಾಹಿ ಕಾಲದಲ್ಲಿದ್ದೇವಾ? ಎಲ್ಲಿ ಬದುಕಿದ್ದೇವೆ? ಇದು ಪ್ರಜಾಪ್ರಭುತ್ವನಾ, ನಿಮ್ಮ ಇಚ್ಛೆ, ಯಾರ್‍ಯಾರ ತೆವಲು ಹೇಗೇಗೆ ಇದೆಯೋ ಹಾಗೆ ಸರ್ಕಾರ ನಡೆಸಲು? ನೀವು ಏನಾದರೂ ಹಣಕಾಸು ಮಂತ್ರಿಗೆ ಲಾಯಕ್ಕಾಗಿದ್ದರೆ ಯಾವ ಯಾವ ರಸ್ತೆಯಲ್ಲಿ ಎಷ್ಟೆಷ್ಟು ಖರ್ಚು ಮಾಡಿದೆ, ನಾನು ಇಲ್ಲಾ ಭಾಷಣ ಮಾಡಿದ್ದೇನೆ ಎಂದು ಹೇಳಿ ಸಾರ್? ಸಮಗ್ರ ಅಭಿವೃದ್ಧಿ ಎಂದು ಇಲ್ಲಿ ಏನು ಭಾಷಣ ಮಾಡ್ದೀರಿ, ಅದಕ್ಕೇ ನಾನು ಓದಿ ಹೇಳಿದೆ. ನೀವು ಹೇಳಿ ಸಾರ್, ಯಾವ ಯಾವ ರಸ್ತೆ important ಇತ್ತು, ಯಾವ್ಯಾವ ರಸ್ತೆಗೆ ಖರ್ಚನ್ನು ಹಾಕಿದ್ದಾರೆ, ಯಾವ ರಸ್ತೆಗೆ ಏಕೆ ಹಾಕಿಲ್ಲ ಎಂದು ಇಲ್ಲಿ ತರಿಸಿ, ಒಂದು ಮೌನ್ಯಮಾಪನ ಆಗಲಿ ಸಾರ್, ವರ್ಕ್ ಕೇಳುತ್ತಿರುವವರು ಯಾರು, contract ಕೊಡಿಸುತ್ತಿರುವುದು ಯಾರಿಗೆ, ಪ್ಯಾಕೇಜ್ ಯಾರಿಗೆ ಆಗುತ್ತಿದೆ? ಯಾವ ಆಂಧ್ರದವನಿಗೆ ಪ್ಯಾಕೇಜ್ ಕೊಡುತ್ತೀರಿ? ನಿಮ್ಮ ನೆಂಟರಿಷ್ಟರನ್ನು ಸಬ್‌ಏಜೆಂಟ್ ಆಗಿ ಸಬ್ ಲೀಸ್‌ನಲ್ಲಿ ಕೊಡುತ್ತೀರಾ ನೀವು? ಇದೆಲ್ಲಾ ಸಹಿಸಿಕೊಂಡು ನಾವು ಇಲ್ಲಿ ಕೆಲಸ ಮಾಡಬೇಕಾ? ಇಲ್ಲಿ ಯಾರ ಹಂಗಿನಲ್ಲಿ ರಾಜಕೀಯ ಮಾಡಲು ಬಂದಿಲ್ಲ ಯಡಿಯೂರಪ್ಪನವರೇ. ಹಂಗಿನಲ್ಲಿ ಬರುವುದಾಗಿದ್ದರೆ ನಿಮ್ಮಂತವರ ಕೈಕಾಲು ಹಿಡಿದು ನಿಮ್ಮ ಪಾರ್ಟಿಗಳಲ್ಲಿ ಬಿದ್ದಿರುತ್ತಿದ್ದೆವು ಹೇಳಿದ ಹಾಗೆ ಕೇಳಿಕೊಡು. ನಮಗೆ ಶಕ್ತಿ ಇದೆ, ನಮಗೆ ಜನರಿದ್ದಾರೆ ಎಂಬ ಧೈರ್ಯದ ಮೇಲೆ ಒಂದೊಂದೇ ಎಂ.ಎಲ್.ಎ. ಇರುವ ಪಕ್ಷದಲ್ಲಿ ನಿಂತಿದ್ದೇವೆ. ನಮಗೆ ಧಮ್ಮು ಕೊಟ್ಟಿದ್ದಾನೆ ದೇವರು. ಬಾಳಲುಶಕ್ತಿ ಕೊಟ್ಟಿದ್ದಾರೆ ಈ ರಾಜ್ಯದ ಜನ. ನಮ್ಮ ಕ್ಷೇತ್ರದ ಜನ. ಅವರಿಗೆ ನಾವು ನ್ಯಾಯ ಒದಗಿಸಬೇಕಾಗಿದೆ. ವರ್ಷ ವರ್ಷ ಒಂದು ರೂಪಾಯಿ ಗ್ರಾಂಟ್ ಇಲ್ಲದಂತೆ ನಮ್ಮನ್ನು ಆಚೆ ಇಡುವ ಸ್ಥಿತಿ ತಂದರೆ ಬಜೆಟ್ ಪಾಸ್ ಮಾಡಿ ಎಂದು ಕೇಳುತ್ತೀರಾ ನೀವು ಇಲ್ಲಿ? ಯಾರದ್ದೋ ನಾಲ್ಕು ಜನಕ್ಕೆ ಅನುಕೂಲ ಆಗುವುದು ರಾಜ್ಯ ಬಜೆಟ್ ಎಂದು consider ಮಾಡಬೇಕೆ? No, this cannot be passed. This demand is underserving to be passed. ಏಕೆ? ನಿಮಗೆ ಹಿಡಿತ ಇಲ್ಲ. ನಿಮ್ಮ ಇಲಾಖೆಗಳು ಸತ್ತು ಹೋಗಿದೆ. ನೀವು ಸುಪ್ರಿಂಕೋರ್ಟ್ ಮುಂದೆ ಅರ್ಜಿ ಹಾಕಿದ್ದೀರಿ, ನಮ್ಮ ಹತ್ತಿರ fabricated record ಕೊಡುವ officerಗಳು ಇದ್ದಾರೆ ಎಂದು. ನಿಮ್ಮ officer ಗಳು ಇವತ್ತು Non-bailable warrant ಗಳಲ್ಲಿ ಕೋರ್ಟ್ ಮುಂದೆ ನಿಂತುಕೊಳ್ಳುತ್ತಾರೆ. ಸುಪ್ರೀಂ ಕೋರ್ಟ್‌ಗೆ ಹೋಗಿ stay ತರುತ್ತಾರೆ ಇವತ್ತು warrant ತಪ್ಪಿಸಿಕೊಳ್ಳಲು, Contempt of the Court pro-

ceedings ತಪ್ಪಿಸಿಕೊಳ್ಳಲು Contempt of High Court ತಪ್ಪಿಸಿಕೊಳ್ಳಬೇಕು ಎಂದು Principal Secretary, C & I ಕೂಡ ಸುಪ್ರೀಂ ಕೋರ್ಟ್ ಮುಂದೆ ಹೋಗಿದ್ದಾರೆ. ಏನು ನಡೆಸುತ್ತಿದ್ದೀರಿ ಪ್ರಮುಖವಾದ ಇಲಾಖೆಗಳಲ್ಲಿ? ಹಾಗಾದರೆ ಅವರನ್ನೇ ಇಟ್ಟುಕೊಂಡು ನಡೆಸುವ ಆಸೆ ಏನು? Commitment, care, ವ್ಯವಹಾರ. ಬೇರೆ ಏನಿದೆ? In the name of package everything is packed up state ನ್ನು ನಿರ್ನಾಮ ಮಾಡಿದ್ದೀರಿ ನೀವು. ನಾನು ಹೇಳಿದ್ದೆ ಒಂದು ಹೋದ ಸಲ Assembly ಆದಾಗ ಯಡಿಯೂರಪ್ಪನವರ ಸುದೈವ, ಯಾರಿಗೂ ಸಿಕ್ಕಲಾರದ ಒಂದು ಅವಕಾಶ ಸಿಕ್ಕಿತು ಕರ್ನಾಟಕವನ್ನು ಅಭಿವೃದ್ಧಿ ಪಥಕ್ಕೆ ತೆಗೆದುಕೊಂಡು ಹೋಗುವುದು. ದುರಾದೃಷ್ಟ, ಇವತ್ತು, ಯಾರೋ ಆರು ಜನ Finance Ministers ಹಿಡಿತ ಮಾಡಿ, ಇವತ್ತು ರಾಜ್ಯಕ್ಕೆ ಸಂಪನ್ಮೂಲ ಕ್ರೋಢೀಕರಿಸಿಡುವ ಸ್ಥಿತಿ ಬಂದಾಗ ಯಡಿಯೂರಪ್ಪನವರೇ, ಈ ಸ್ಥಿತಿ ನಿರ್ಮಾಣವಾಗಿಬಿಟ್ಟರೆ ನಾಳೆ ಬರುವವರ ಗತಿ ಏನು? ದಿವಾಳಿಯಾಗಿತ್ತದೆ ನಿಮ್ಮ ಸರ್ಕಾರ, ಇನ್ನೊಂದು ಅವಧಿಗೆ ಬಂದು ನೋಡಿ ಎಷ್ಟು ಸಾಲ ತೀರಿಸಬೇಕಾಗುತ್ತದೆ, beggar ಆಗಿರುತ್ತದೆ ಕರ್ನಾಟಕ ಜನತೆ. ಇವತ್ತು ಚೆನ್ನಾಗಿದೆ ಎಂದು ಯಥೇಚ್ಛವಾಗಿ ನಿಮಗೆ ಇಷ್ಟ ಬಂದಂತೆ ಏನು ಖರ್ಚು ಮಾಡುತ್ತಿದ್ದೀರಿ ಅದು ನಿಮ್ಮ ದುಡ್ಡಲ್ಲ. ಮುಂದಿನ ಜನಾಂಗದವರಿಗೆ ಬಿಟ್ಟು ಹೋಗಬೇಕಾಗಿರುವ ದುಡ್ಡು ಇದು. ಎಷ್ಟು ಉಳಿಸುತ್ತಿದ್ದೀರಿ? What is your Capital Investment? ಯಾವ sector ನಲ್ಲಿ ದುಡ್ಡು ಮಾಡಿದ್ದೀರಿ ಇವತ್ತು? ಯಾವ sector ನಲ್ಲಿ ಇವತ್ತು ಅಭಿವೃದ್ಧಿಯಾಗುತ್ತಿದೆ? ನಾನು ಹೇಳಿದೆ, ನಿನ್ನೆ ಅವರು ಬೈದುಕೊಂಡರು. Growth is not this growth ಇಡೀ ಬೆಂಗಳೂರು ಜಿಲ್ಲೆ ಒಂದು ಭಾಗಕ್ಕೆ ಖರ್ಚು ಆಗುವ ಹಣ ಇನ್ನೊಂದು ಅದೇ ಅರ್ಧದಷ್ಟು ಹಣ ಒಂದೇ ಒಂದು ಕ್ಷೇತ್ರಕ್ಕೆ ಖರ್ಚಾದರೆ ಬೆಂಗಳೂರು ಜಿಲ್ಲೆ ಆಗುತ್ತದೆಯೇ? ಇಡೀ ನಿಮ್ಮ ಡಿವಿಜನ್‌ಗೆ ಆಗುವ ಹಣ ಶಿಕಾರಿಪುರದಲ್ಲಿ ಖರ್ಚಾದರೆ ಶಿವಮೊಗ್ಗ ಅಭಿವೃದ್ಧಿಯಾಗಿತ್ತದೆಯೇ? ನೀವ್ರು ಮಂತ್ರಿಯಲ್ಲವೇ? ನಮಗೆಲ್ಲಾ ಮಂತ್ರಿಯಲ್ಲಬೇ? ಈ ರಾಜ್ಯಕ್ಕೆಲ್ಲ ನಾಯಕರಲ್ಲವೇ ನೀವು ? ಬರೀ ನಿಮ್ಮ ಕ್ಷೇತ್ರಗಳಿಗೆ ನಾಯಕರುಗಳಾ ನೀವು? If at all you feel that, ಈ ಕ್ಷಣ ಆ ಸೀಟ್‌ನಲ್ಲಿ ಕುಳಿತುಕೊಳ್ಳಬಾರದು. ನಾನು, ನನ್ನ ಕ್ಷೇತ್ರ, ನಾಳೆ ನಾನು ಅಲ್ಲಿ ಚುನಾವಣೆ ನೋಡಬೇಕು, ಅಲ್ಲಿರುವ ಜನರನ್ನು ಓಲೈಸಬೇಕೆಂದರೆ ಕೈಮುಗಿದು ಕೇಳುತ್ತೇವೆ, ಬಹಳ ದೊಡ್ಡ ಮನುಷ್ಯರು ಕುಳಿತುಕೊಂಡಿರುವ ಆ ಸೀಟನ್ನು ಏಕೆ ಕುಳಿತು ಹಾಳು ಮಾಡುತ್ತೀರಿ? ಆ ಪಾಪವನ್ನು ಮಾಡಬೇಡಿ. ನಮಗೆ ಏನು ಮಾಡಲು ಆಗದಿದ್ದರೂ ಆ ಸೀಟಿನ ಗೌರವವನ್ನಾದರೂ ಉಳಿಸಿ ಹೋಗೋಣ. ನಮಗೆ ಒಂದು ಸಲ ರಾಮಕೃಷ್ಣ

ಹೆಗಡೆಯವರು ಹೇಳುತ್ತಿದ್ದರು, ಕುರ್ಚಿಗೆ ಕೂತುಕೊಂಡರೆ ಗೌರವ ಬರುವ ಸ್ಥಿತಿ ಇರುತ್ತದೆ. ನಾವು ಕುಳಿತುಕೊಂಡಾಗ ಕುರ್ಚಿಗೆ ಗೌರವ ತರುವ ಸ್ಥಿತಿ ಬೇರೆ ಇರುತ್ತದೆ ಎಂದು. ನಾವು ಕುಳಿತುಕೊಂಡರೆ ಆ ಕುರ್ಚಿಗಳಿಗೆ ಗೌರವ ಬರಬೇಕು ಸಾರ್. ಯಾರೋ ಗೌರವಸ್ಥರು ಕುಳಿತದ್ದ ಕುರ್ಚಿಯಲ್ಲಿ ಕುಳಿತುಕೊಂಡು ಹೋಗಿಬಿಟ್ಟರೆ ಆಗುವುದಿಲ್ಲ. ಆ ಕುರ್ಚಿಗೆ ನಮ್ಮಿಂದಲೂ ಸ್ವಲ್ಪ ಗೌರವ ಹೆಚ್ಚಬೇಕು. ನಾನು ಈ ಕ್ಷೇತ್ರದ ಬಗ್ಗೆ ನೊಂದು ಇವತ್ತು ಮಾತನಾಡಲೇ ಬೇಕು ಎಂದು ಮಾತನಾಡುತ್ತಿದ್ದೇನೆ. ನನಗೆ ಹಂಗು ಇಲ್ಲ. ಯಾವುದೋ ಏನೋ ಕೆಲಸ ಆಗಲಿಲ್ಲವೆಂದರೆ ನನ್ನ ಕ್ಷೇತ್ರದ ಜನ ನನ್ನನ್ನು ಮನೆಗೆ ಕಳುಹಿಸುವುದಿಲ್ಲ. ನಾನು ಎಲ್ಲಾ ಸ್ಥಿತಿಯನ್ನು ನಿಭಾಯಿಸಿಯಾಗಿದೆ. ಈ ಭಯ, ಭೀತಿಗೆ ಹೆದರಿಕೊಂಡು ರಾಜಕೀಯ ಮಾಡಲು ನಾನು ಇಲ್ಲಿ ಬಂದಿಲ್ಲ. ಭೀತಿ ನಿರ್ಮಾಣ ಮಾಡುತ್ತೀರಾ ನಮ್ಮ voiceನ್ನು suppress ಮಾಡುತ್ತೀರಾ ? ಯಾರು ಮಾತನಾಡುವಂತೆ ಇಲ್ಲವೇ ನಿಮ್ಮ ವಿರುದ್ಧವಾಗಿ ಈ ರಾಜ್ಯದಲಿ ಏನಾಗಿದ್ದಾರೆ ನಿಮ್ಮಂತೆ ಮೆರೆದವರು? ಬಿಹಾರದಲ್ಲಿ ಏನಾದರು? ಯು.ಪಿ.ಯಲ್ಲಿ ಏನಾದರು? ಏನಾಗಿದ್ದಾರೆ ನಿಮ್ಮಂತೆ ಮೆರೆದವರು? ಬಿಹಾರ, ಯು.ಪಿ.ಯಲ್ಲಿ ಏನಾದರೂ ಸ್ವಲ್ಪ ತಿರುಗಿ ನೋಡಿ ಆ ಗಾಳಿಯನ್ನು ಶಾಶ್ವತವಾಗಿ ಇರುತ್ತೀರಾ ? ನಿಮ್ಮ ಹಣೆ ಬರಹವನ್ನು ಬರೆದಾಗಿದೆ ಜನ. ಹಣೆಯಬರಹ ಗೊತ್ತಿದ್ದೂ, ಆಯಸ್ಸು ಮುಗಿದಿದೆ ಎಂದು ಗೊತ್ತಿದ್ದೂ, ಮೃತ್ಯುಂಜಯ ಜಪ ಮಾಡಿಕೊಂಡಿದ್ದೂ, ಮಹಾಚಂಡಿ ಯಜ್ಞಗಳನ್ನು ಮಾಡಿಕೊಂಡು ಈ ರೀತಿ ವರ್ತಿಸುತ್ತೀರಲ್ಲ. ನಮ್ಮ ಗತಿಯೇನು ಬದುಕಬೇಕಾದವರದ್ದು? I am sorry. This is an unfit demand to be passed. ಇದು selfish. ನಾನು ನಿಮಗೆ ಬಿಡುತ್ತೇನೆ, ಇಡೀ ಬೆಂಗಳೂರು ಸರ್ಕಲ್‌ನಲ್ಲಿ ಯಾವ್ಯಾವ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಇವತ್ತು ಅನುದಾನ ರಿಲೀಸ್ ಆಗುತ್ತಿದೆ, ಯಾವ್ಯಾವ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡು ಇವತ್ತು ಲೋಕೋಪಯೋಗಿ ಇಲಾಖೆಯಲ್ಲಿ ಅನುದಾನ ರಿಲೀಸ್ ಆಗಿತ್ತಿದೆ, ನಾನು ನಿಮಗೆ ಆಗಲೇ ಹೇಳಿದ್ದೇನೆ. ಈ ದಾಖಲೆ ಎಲ್ಲವನ್ನು ನಿಮ್ಮ ಮುಂದೆ ಇಡುತ್ತೇನೆ. I demand a white paper on this floor. ಇಲ್ಲಿ ಬರಬೇಕು. ಯಾವ್ಯಾವ ಅರ್ಹತೆ ಮೇಲೆ ರೋಡ್‌ಗಳು upgrade ಅಗಿದೆ, ಯಾವ ಅರ್ಹತೆ ಮೇಲೆ grant ರಿಲೀಸ್ ಆಗಿದೆ? ನಾನು ಇನ್ನೊಂದು ಪ್ರಶ್ನೆ ಕೇಳುತ್ತೇನೆ, ಪಿ.ಡಬ್ಲ್ಯೂ.ಡಿ. ರೋಡ್ ಯಾವುದೂ ನಬಾರ್ಡನಲ್ಲಿ ಅಭಿವೃದ್ಧಿಯಾಗಲಿಲ್ಲ ರೇವಣ್ಣನವರೆ ಯಾಕೆ ಹಾಗಾದರೆ ಆರ್.ಡಿ.ಪಿ.ಆರ್. Minister ಅದಕ್ಕೆ ಅಧ್ಯಕ್ಷರಾಗಿರಬಾರದು?

They are all village roads, Village roads ಅನ್ನು P.W.D.ನವರೇಕೆ ವಹಿಸಿಕೊಂಡು ಅಭಿವೃದ್ಧಿ ಮಾಡುತ್ತಿದ್ದೀರಿ? Why are

you taking up these roads? ಒಂದು ಸಲ NABARDನಲ್ಲಿ ನೀವು ತೆಗೆದುಕೊಂಡ ರಸ್ತೆಯನ್ನು ಮತ್ತೆ ಏನಾದರೂ ನಿಮ್ಮ ಇಲಾಖೆಗೆ ಸೇರಿಸಿಕೊಳ್ಳುವಂತಹ ಕೃಪೆ ಮಾಡಿದೀರಾ? ಯಾವ್ಯಾವ roadಅನ್ನು NABARDನಲ್ಲಿ ಇವತ್ತು ನಾವು asphalt ಮಾಡಿದ್ದೇವೆ? ಯಾವ road ಗಳಲ್ಲಿ ಸೇತುವೆಗಳನ್ನು ಮಾಡಿದ್ದೇವೆ? Natural ಆಗಿ, ಏನ್ರಿ ರೇವಣ್ಣನವರೆ, ನಮ್ಮದೊಂದೂ ಕೂಡ ಸೇರಿಸಿಕೊಳ್ಳಲಿಲ್ಲವಲ್ಲಾ ಎಂದು ಮಾನ್ಯ ಸಚಿವರಿಗೆ ಕೇಳಿದೆ. ನಿಮ್ಮ ಕಾಗದವೇ ಇಲ್ಲವೆಂದು ಹೇಳಿದರು. ಸಾರ್, ನಾನು ಏಕೆ ಕಾಗದ ಕೊಡಬೇಕು? Upgradation of roadಗೆ ನನ್ನ constituencyಯಲ್ಲಿ ಒಂದು kilometer ಕೂಡ ಆಗಿಲ್ಲ. ಒಂದೇ ಒಂದು ಕಿಲೋಮೀಟರ್ ಕೂಡ ಆಗಿಲ್ಲ. ಇಲ್ಲಿರುವ ಪಟ್ಟಿಯಲ್ಲಿ ನಮ್ಮ ಕ್ಷೇತ್ರದ ಹೆಸರಿಲ್ಲ. ಚಿಕ್ಕನಾಯಕನಹಳ್ಳಿ ಕರ್ನಾಟಕ ರಾಜ್ಯದಲ್ಲಿ ಇಲ್ಲವೆ? ನೀವೇನು RIDFನಲ್ಲಿ ಹೋದ ಸಲ ಹಣ ಕೊಟ್ಟಿದ್ದೀರಿ, 12th ನಲ್ಲಿ. ನಮ್ಮ ಕ್ಷೇತ್ರಕ್ಕೆ ಒಂದು ರೂಪಾಯಿ ಸಹಾ ಕೊಟ್ಟಿಲ್ಲ. 11ರಲ್ಲಿ ಕೊಟ್ಟಿದ್ದೀರಿ, 12ರಲ್ಲಿ ಅರ್ಧ ಕೊಟ್ಟಿದ್ದೀರಿ, 13ರಲ್ಲಿ... 12ರಲ್ಲಿ ಒಂದೇ ಒಂದು ರೂಪಾಯಿಯನ್ನೂ ಸಹ ಕೊಟ್ಟಿಲ್ಲ. ನನ್ನ ಪಕ್ಕದ ಕ್ಷೇತ್ರಕ್ಕೆ ಎರಡೂ ಚಿಲ್ಲರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಾವು tax ಕಟ್ಟುವುದಿಲ್ಲವೇ? ಸಾರ್, ಇದಕ್ಕೆ ಎಲ್ಲಿಯಾದರೂ ಒಂದು ಕಡೆ ಇತಿಶ್ರೀ ಹಾಡಲೇಬೇಕು. ತುಂಬಿದ್ದು ಬಹಳ ದಿವಸ ಬದುಕುವುದಿಲ್ಲ. ನಾನು ಬಹಳ ನಿಮ್ಮ ಭಾಷಣ ಓದಿದ್ದೇನೆ. ಪುಸ್ತಕದಲ್ಲಿ ಓದಿ ಬಿಟ್ಟರೆ ಭಾಷಣವಾಗಿವುದಿಲ್ಲ. ಮಾನ್ಯ ಯಡಿಯೂರಪ್ಪನವರೆ, ಸ್ವರಾಜ್ಯ, ರಾಮರಾಜ್ಯ ಪುಸ್ತಕದ ಮೇಲೆ ಆಗುವಂತಿದ್ದರೆ, ನಿಮಗಿಂತ ಒಳ್ಳೊಳ್ಳೆಯ ಭಾಷಣಗಳನ್ನು ಮಾಡಿದವರು ಇಲ್ಲಿಂದ ಎದ್ದು ಹೋಗಿ ಬಿಟ್ಟಿದ್ದಾರೆ. ಭಾಷಣದಲ್ಲೇ ಸ್ವರ್ಗ ಸೃಷ್ಟಿಯಾಗಿವಂತಿದ್ದರೆ, ನಾವೆಲ್ಲಾ ಚೆನ್ನಾಗಿ ಸೃಷ್ಟಿ ಮಾಡುವವರು ಇಲ್ಲಿ ಕುಳಿತುಕೊಂಡು ಬಿಟ್ಟಿದ್ದೇವೆ, ಏನು ಬೇಕಾದರೂ ಮಾತಿನಲ್ಲಿ ಸೃಷ್ಟಿ ಮಾಡಿಬಿಡಬಹುದು. I am sorry to say, this demand is unfit to be passed. ಈ demandಅನ್ನು ವಿಧಾನಸಭೆ pass ಮಾಡಿದರೆ ಈ ಶಾಸನ ಸಭೆಗೆ ಶೋಭೆ ತರುವುದಿಲ್ಲ. ನಾನು ಹೇಳುತ್ತಿದ್ದೇನೆ, ಇಲ್ಲಿರುವ ಎಲ್ಲಾ ಸದಸ್ಯರು ಒಂದೇ ಎನ್ನುವಂತಹ ಭಾವನೆ ಯಾವುದೇ ಕಾರ್ಯಕ್ರಮದ ಕೆಳಗಡೆ ಲೋಕೋಪಯೋಗಿ ಇಲಾಖೆಯಲ್ಲಿ ಆಗಿಲ್ಲ. ಹಾಗಾಗಿ ತಾರತಮ್ಯವಾಗಿದೆ. ಪಕ್ಷಭೇಧವಾಗಿದೆ. ದಯಮಾಡಿ ಇದನ್ನು ಪಾಸ ಮಾಡಕೂಡದು. ಇದನ್ನು prove ಮಾಡಲಿಕ್ಕೆ ನನ್ನ ಹತ್ತಿರ recrods ಇದೆ. ನೀವು ನಿಮ್ಮ ಪಾರ್ಟಿಯವರಿಗೆ ಅಥವಾ ನಿಮ್ಮ ಜಾತಿಯವರಿಗೆ ಮಾಡುತ್ತೀರಿ ಎಂದು ನಾನು ಪ್ರೂವ್ ಮಾಡುತ್ತೇನೆ.

ನಾನು ಹೇಳುತ್ತಿದ್ದೇನೆ, ನನಗೆ ಇಲ್ಲಿ prove ಮಾಡಲಿಕ್ಕೆ ಅವಕಾಶ ಕೊಡಬೇಕು. ಇದು proov ಆಗುವವರೆಗೆ ಈ demand ಅನ್ನು pass ಮಾಡಕೂಡದು ಎಂದು ನಾನು ಬೇಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೆ, ಬಹಳ ಸಂಪದ್ಭರಿತವಾಗಿರತಕ್ಕಂಥ ಕರ್ನಾಟಕ ಇವತ್ತು ಹೋಗುತ್ತಿದೆ. ನನಗೆ ಮಾನ್ಯ ರೇವಣ್ಣನವರ ತಂದೆಯವರ ಬಗ್ಗೆ ಬಹಳ ಗೌರವವಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ :– He is a senior Member, Concerned Ministers ಅವರ Demand ಅನ್ನು move ಮಾಡಿದ್ದಾರೆ. You have allowed the House to debate over it. All the members of the House are at liberty to express their opinion ಅದಕ್ಕೇನೂ ತೊಂದರೆಯಿಲ್ಲ. ಈ House ಆ demand ಅನ್ನು consider ಮಾಡಬಹುದು, pass ಮಾಡಬಹುದು. ಇಲ್ಲವೆಂದರೆ ಎಲ್ಲಾ ಸದಸ್ಯರಿಗೂ ಅವರು ಹೇಳಿದ್ದೇ ಸರಿ ಎಂದೆನಿಸಿದರೆ, ಎಲ್ಲರೂ ಒಟ್ಟಾರೆಯಾಗಿ ಅದನ್ನು reject ಸಹ ಮಾಡಬಹುದು. ಆದರೆ ಅವರು ಈ ಎರಡನ್ನೂ ತಪ್ಪಿಸಿ, ಮೂರನೇ....

ಶ್ರೀ ಜೆ.ಸಿ. ಮಾಧುಸ್ವಾಮಿ :– ಇಲ್ಲ, ನಾನು reject ಮಾಡಿ ಎಂದೇ ಕೇಳಿದ್ದೇನೆ. ನಾನು demand ಅನ್ನು reject ಮಾಡಬೇಕೆಂದು ಹೇಳಿದ್ದೇನೆ. I am very clear. ಇನ್ನು ಇಂಧನ ಇಲಾಖೆ ಬಗ್ಗೆ ಹೇಳುವುದಾದರೆ, 1800 ಕೋಟಿ ರೂ.ಗಳನ್ನು ವಿದ್ಯುತ್ ಸಹಾಯ ಧನ ಕೊಡುತ್ತಿದ್ದೇನೆ, 400 ಮೆಗಾವ್ಯಾಟ್ ಅನ್ನು ಹೆಚ್ಚು ಮಾಡುತ್ತಿದ್ದೇವೆ, ಅದರ ಜೊತೆಗೆ ನೌಕರರ ಪಿಂಚಣಿ ಮೊದಲಾದವಕ್ಕೆ 280 ಕೋಟಿ ರೂ.ಗಳನ್ನು extra ಕೊಡುತ್ತಿದ್ದೇನೆ ಎಂದು ತಾವು ಹೇಳಿದ್ದೀರಿ. Sir, ಏನಾಗಿದೆ ಎಂದರೆ, ಸನ್ಮಾನ್ಯ ರೇವಣ್ಣನವರು ಇಲ್ಲಿ ಮಂತ್ರಿಯಾಗುವುದಕ್ಕೆ ಮೊದಲು ಅವರ ತಂದೆಯವರು 'ಕತ್ತಲಲ್ಲಿ ಕರ್ನಾಟಕ ಎಂಬ ಒಂದು ಪುಸ್ತಕ ಬರೆದಿದ್ದರು. ಅದರಲ್ಲಿ ಅವರು ಗ್ರಾಮೀಣ ಕರ್ನಾಟಕ ಕತ್ತಲಲ್ಲಿ ಸೊರಗಿ ಹೋಗಿ ಬಿಟ್ಟಿದೆ. ನಮ್ಮ ಮೊದಲನೇ ಆದ್ಯತೆ ಹಳ್ಳಿ ಭಾಗದ ಜನರಿಗೆ ವಿದ್ಯುತ್ ಕೊಡುವುದು ಎಂದಿದ್ದರು. ಅದಕ್ಕೆ ಸನ್ಮಾನ್ಯ ಸಿದ್ಧರಾಮಯ್ಯನವರೂ ಪಾರ್ಟಿ. ಇವತ್ತು ನಮ್ಮ ಸ್ಥಿತಿ ಏನಾಗಿದೆ? ಮೂರು ವರ್ಷ ನೀವು ಆಡಳಿತ ಮಾಡಿದ್ದೀರಿ. ಬೇರೆಯವರ ಸುದ್ದಿ ನನಗೆ ಗೊತ್ತಿಲ್ಲ ಮೂರು ವರ್ಷಗಳಾದ ಮೇಲೆ ನಾವು ಯಾರಾದರೂ ಹಳ್ಳಿಯಲ್ಲಿ, ಇವತ್ತಿನವರೆಗೂ 8 ಗಂಟೆಗಿಂತ ಜಾಸ್ತಿ IP sets ಓಡಿಸಲಿಕ್ಕೆ ಆಗಿಯೇ ಇಲ್ಲ. ಇವತ್ತಿನವರೆಗೂ ನಮಗೆ power cut ಅನ್ನು ತೆಗೆದೇ ಇಲ್ಲ. ಮಳೆ ಬಂದರೂ power cut, ಮಳೆ ಹೋದರೂ power cut. 6-8 hours, entire rural karnataka is under power cut. ನಿಮ್ಮ

ಹತ್ತಿರ ಹೇರಳವಾಗಿ ಹಣ ಇತ್ತು. What should have been the priority? Finance Minister ಆಗಿದ್ದ ಮಾನ್ಯ ಸಿದ್ಧರಾಮಯ್ಯನವರು ಹೇಳಬೇಕು. ಮಾನ್ಯ ಯಡಿಯೂರಪ್ಪನವರೆ, ನಿಮಗೆ ಇದ್ದಿದ್ದು ಎರಡೇ priority ನಿಮ್ಮ generation ಅನ್ನು increase ಮಾಡಿಕೊಂಡು, ಏನಾದರೂ ಇವತ್ತು ನೀವು ಕೊಂಡುಕೊಂಡು ಬಂದಿರುವ power ಅನ್ನು substitute ಮಾಡಲಿಕ್ಕೆ ಆಗುತ್ತಿತ್ತೇ? ಎಂದು ನೋಡಬೇಕಾಗಿತ್ತು. ಎರಡನೆಯದಾಗಿ, ಆದಷ್ಟೂ land ಅನ್ನು irrigate ಮಾಡಲಿಕ್ಕೆ ಆಗುತ್ತಿತ್ತೇ ಎಂದು ನೋಡಬೇಕಾಗಿತ್ತು. ಈ ಎರಡರಲ್ಲಿ ಯಾವ ಕೆಲಸವನ್ನು ತಾವು ಮಾಡಿದ್ದೀರಿ? I am very sorry. ಮಾನ್ಯ ಈಶ್ವರಪ್ಪನವರು ಮಂತ್ರಿಗಳಾದ ನಮಗೆ ಬಹಳ ಆಸೆ ಇತ್ತು. ಬಿ.ಜೆ.ಪಿ.ಯಲ್ಲಿ ಇದ್ದವರು, ಏನೋ ಬಹಳ ಮಾಡುತ್ತಾರೆಂಬ ಆಸೆ ಇತ್ತು. ಇಬ್ಬರೂ ಗಳಸ್ಯ-ಕಂಠಸ್ಯ. ಇಬ್ಬರೂ ನೀರಾವರಿಯಲ್ಲಿ ಆಸಕ್ತಿ ಇರುವವರು, ಹೆಚ್ಚು ದುಡ್ಡು ಕೊಡುತ್ತಾರೆ ಎಂದುಕೊಂಡಿದ್ದೆವು. ಮಾನ್ಯ ಈಶ್ವರಪ್ಪನವರಿಗೆ ಹೋದ ವರ್ಷ ಸಿಕ್ಕಷ್ಟು ದುಡ್ಡೂ ಕೂಡ ಈ ವರ್ಷ ಸಿಗಲಿಲ್ಲ. ಪಕ್ಕದ ರಾಜ್ಯವನ್ನು ನೋಡಿ. 16 ಸಾವಿರ ಕೋಟಿ ರೂ.ಗಳನ್ನು ಇವತ್ತು ಆಂಧ್ರಪ್ರದೇಶದವರು irrigationಗಾಗಿ ಇಟ್ಟಿದ್ದಾರೆ. ಸ್ಪರ್ಧೆ ಏಕಾಗಿ ನೀವು ಮಾಡುತ್ತೀರಿ? ಅವರು ಅಷ್ಟೊಂದು ಹಣವನ್ನು ಏಕೆ ಇಟ್ಟರು? ಅವರಿಗೆ ಅಕಲ್ ಇಲ್ಲವೆನ್ನುತ್ತೀರಾ? ಶಕಲ್ ಕೊಡಲಿಕ್ಕೆ ಅವರಿಗೆ ಆಗುತ್ತಿರಲಿಲ್ಲವೇ? ಎಲ್ಲರಿಗೂ ತೆಗೆದುಕೊಳ್ಳಪ್ಪ ಎಂದು ಒಂದೊಂದು ಗುಲಾಬಿ ಹೂವು ಕೊಟ್ಟುಕೊಂಡು ಬರಲಿಕ್ಕೆ ಆಗುತ್ತಿರಲಿಲ್ಲವೇ? ಅಥವಾ ಎಲ್ಲರಿಗೂ ಒಂದೊಂದು ಕಂಬಳಿ ಕೊಟ್ಟುಕೊಂಡು ಬರಲಿಕ್ಕೆ ಆಗಿತ್ತಿರಲಿಲ್ಲವೇ? 16 ಸಾವಿರ ಕೋಟಿ ರೂ.ಗಳನ್ನು ಅವರು ಏಕೆ ಇಟ್ಟರು? They have future. ರಾಜ್ಯ ಮುಂದಕ್ಕೆ ಹೋಗಬೇಕಾಗಿದೆ, ಬದುಕಬೇಕಾಗಿದೆ. core subject ಇರುವುದು ಅಲ್ಲಿ, ಜನ ಬದುಕಿರುವುದು ಹಳ್ಳಿಯಲ್ಲಿ ಅದಕ್ಕಾಗಿ ಅವರು ಅಷ್ಟು ಹಣ ಇಟ್ಟರು. ಹಳ್ಳಿಗಳಲ್ಲಿ 75–78% ಇದ್ದ ಜನ ಇವತ್ತು 65%ಗೆ ಇಳಿದಿದ್ದಾರೆ. Aerobic land ಕಡಿಮೆ ಆಗುತ್ತಿದೆ, ಇರುವ land ಇವತ್ತು exhaust ಆಗಿದೆ, fertilizers, chemicals use ಮಾಡಿ ಇಲ್ಲಿಂದ ಮುಂದಕ್ಕೆ production ಮುಂದಕ್ಕೆ ಜಾಸ್ತಿ ಮಾಡಲಿಕ್ಕೆ ಅವಕಾಶವಿಲ್ಲ, ಆಗಿವುದಿಲ್ಲ, production ಜಾಸ್ತಿ ಮಾಡದೇ ಇದ್ದರೆ produce ಆಗುತ್ತಿರುವುದು ಜನಸಂಖ್ಯೆಗೆ match ಆಗುವುದಿಲ್ಲವೆಂದು ಅವರು ಯೋಚನೆ ಮಾಡಿದರು. ತಾವು ಇದನ್ನು ತಲೆಗೆ ತೆಗೆದುಕೊಳ್ಳಬೇಕಾಗಿತ್ತು. ಇರುವ ಜಾಗವನ್ನು ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ. ನೀವು ಈಗಾಗಲೇ 33% forest ಇಟ್ಟುಕೊಳ್ಳಬೇಕಾಗಿದ್ದವರು, 16–17%ಗೆ ಇಳಿದಿದ್ದೀರಿ. ಇರುವ ಜಾಗದಲ್ಲಿ

fertilizer and chemicals ಹಾಕಿ ಬಿಟ್ಟು entire fertility ಅನ್ನು ತಿಂದು ಹಾಕಿ ಬಿಟ್ಟಿದ್ದೀರಿ. ಅಲ್ಲಿಂದ ತಂದು ಹಾಕಿದರೆ ಬಿಡುತ್ತದೆ, ಇಲ್ಲವೇ ಇಲ್ಲ. subsidy ತೆಗೆದ ಮೇಲೆ ಮಾನ್ಯ ಸಿದ್ದರಾಮಯ್ಯನವರೆ, DAP rate ಕೇಳಿದ್ದೀರಾ? ಭಾರಿ ರೈತರ ಪರವಾದ leadersಗಳು ಬಂದರು. ಏನು ಸಾರ್, ಇವತ್ತು DAP price? ಬೀಜದ್ದು ಇವತ್ತು ಇಲ್ಲಿ ಚರ್ಚೆಯಾಗಿದ್ದು ಬಿಟ್ಟರೆ, ಗೊಬ್ಬರದ ಚರ್ಚೆ ಶ್ರೀನಿವಾಸಗೌಡರು ಮಾಡುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :- ನಾನು ಇನ್ನೂ ಎರಡು ಗಂಟೆಗಳ ಕಾಲ ಕೇಳಿದ್ದೆ, ನಿನ್ನೆ ಮಾನ್ಯ ಉಪಾಧ್ಯಕ್ಷರು ಇದ್ದರು. ನೀವೇ ಮೂರೂ ಕಾಲು ಗಂಟೆ ಮಾತನಾಡಿದಿರಿ ಎಂದರು. ನನಗೆ ಗೊಬ್ಬರದ ಬಗ್ಗೆ ಇವರಿಗಂತ ಜಾಸ್ತಿ ಗೊತ್ತು. ನಾನು ಅನೇಕ ಗೊಬ್ಬರ ಕಂಪನಿಗಳಲ್ಲಿ ಕೆಲಸ ಮಾಡಿದ್ದೇನೆ. ಮಾಡುತ್ತಲೂ ಇದ್ದೇನೆ. ನಾನೇನೂ ಮಾಧುಸ್ವಾಮಿಯವರಿಂದ ಹೇಳಿಸಿಕೊಳ್ಳಬೇಕಾಗಿಲ್ಲ. ಗೊಬ್ಬರದ ಪರಿಸ್ಥಿತಿ ಏನಿದೆ ಎಂಬುದನ್ನು......

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಶ್ರೀನಿವಾಸಗೌಡರೆ, ನಾನು ಯೀಲ್ಡ್ ಆಗಿಲ್ಲ. ದಯಮಾಡಿ ನಾನು ಪೂರ್ತಿ ಮಾತನಾಡುವುದನ್ನು ಕೇಳಿ. ಮಾನ್ಯ ಶ್ರೀನಿವಾಸಗೌಡರು ಬೆಳಕು ಚೆಲ್ಲಬೇಕಾಗಿತ್ತು. He is working in those Corporations and Federations ಎಂದು ಹೇಳುತ್ತಿದ್ದೆ. ಆ ಮಾತನ್ನೇ ನೀವು mistake ಮಾಡಿಕೊಂಡರೆ ಹೇಗೆ? You are in the field, you should have told ಎಂದಷ್ಟೇ? ನಾನು ಹೇಳುತ್ತಿದ್ದೇನೆ. ಸಾರ್, ನಾನು ಇವತ್ತು KPTCL ಬಗ್ಗೆ ಮಾತನಾಡಬೇಕಾಗಿದೆ. ನಾವು ಬಹಳ ಆಸೆ ಇಟ್ಟುಕೊಂಡಿದ್ದೇವೆ. ನಾವು ಬಹಳ ಮಾತನಾಡುತ್ತಿದ್ದೆವು, ಮಾನ್ಯ ರೇವಣ್ಣನವರು ಏನು ಮಾಡದಿದ್ದರೂ KPTCLನಲ್ಲಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂದು. ಏಕೆಂದರೆ, ಶುರುವಿನಲ್ಲಿ ನಮ್ಮನ್ನೆಲ್ಲಾ ಸಭೆಗಳಿಗೆ ಕರೆಯುತ್ತಿದ್ದರು, ನಮ್ಮನ್ನೆಲ್ಲಾ ಏನಾಗಬೇಕು ಹೇಳಿ ಎನ್ನುತ್ತಿದ್ದರು. ಆದಾಗಬೇಕು, ಇದಾಗಬೇಕು ಎಂದು ನಾವೂ ಹೇಳುತ್ತಿದ್ದೆವು. ಮಾನ್ಯ ರೇವಣ್ಣನವರು, ಮಾಜಿ ಪ್ರಧಾನಿಗಳ ಮಕ್ಕಳು. ಅವರು ಹೇಳಿದ್ದೆಲ್ಲಾ ಆಗಿಯೇ ಹೋಗಿ ಬಿಡುತ್ತದೆಂದು ನಾವೆಲ್ಲಾ ತಿಳಿದುಕೊಂಡಿದ್ದೆವು. ಮಾನ್ಯ ರೇವಣ್ಣನವರೆ, ನಮ್ಮ ಸಮಸ್ಯೆಗಳೆಲ್ಲಾ ಬಗೆಹರಿದು ಹೋಗಿಬಿಟ್ಟವು ಎಂಬ ಭಾವನೆಯಲ್ಲಿ ನಾವೆಲ್ಲಾ ಬಹಳ ಖುಷಿಯಾಗಿದ್ದೆವು 1-1 1/2 ವರ್ಷಗಳ ಕಾಲ, ಮಾನ್ಯ ರೇವಣ್ಣನವರು ಇದ್ದಾರೆ, ನಮಗೇನೂ ತೊಂದರೆಯಿಲ್ಲ ಎಂದುಕೊಂಡಿದ್ದೆವು. ಆದರೆ ಅವರಿಗೆ ರಾಜ್ಯ ಎಂದರೆ ಹೊಳೆನರಸೀಪುರ ಆಗಿ ಹೋಯಿತು, ರಾಷ್ಟ್ರ ಎಂದರೆ ಹಾಸನ ಆಗಿ ಹೋಯಿತು. ನಾವೂ ಈ ರಾಜ್ಯದಲ್ಲೇ ಇದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ :- ಸ್ವಲ್ಪ ಯೀಲ್ಡ್ ಆಗಿ ನಾನು ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರಷ್ಟು ನಾನು ನುರಿತವನಲ್ಲ. ಅವರಷ್ಟು ಚಾಣುಕ್ಯತನದಿಂದ ನನಗೆ ಮಾತನಾಡಲಿಕ್ಕೆ ಬರುವುದಿಲ್ಲ. ಅವರು ನಾವು ಕೇವಲ ಹೊಳೆನರಸೀಪುರ, ಹಾಸನ, ರಾಮನಗರಕ್ಕೆ ಆದ್ಯತೆ ಕೊಟ್ಟಿದ್ದೇವೆಂದರು. ಅದಕ್ಕೆ ನಮ್ಮ ಹಿರಿಯ ಕಾಂಗ್ರೆಸ್ ಸದಸ್ಯರು ಬೆನ್ನು ತಟ್ಟುತ್ತಿದ್ದಾರೆ. ನಾನು ಉತ್ತರ ಕೊಡದೇ ಕದ್ದು ಓಡಿ ಹೋಗುವುದಿಲ್ಲ. KPTCLನಲ್ಲಿ ಏನೇನು ನಡೆದಿದೆ?..

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ರೇವಣ್ಣನವರೆ,..

ಶ್ರೀ ಹೆಚ್.ಡಿ. ರೇವಣ್ಣ :- ಒಂದು ನಿಮಿಷ ನಾನು ಹೇಳುತ್ತೇನೆ. ಏಕಂದರೆ, ಪತ್ರಕಾ ಸ್ನೇಹಿತರು, electronic media ದವರು ಇದ್ದಾರೆ ಎನ್ನುವ ದೃಸ್ಟಿಯಿಂದ ಮಾನ್ಯ ಮಾಧುಸ್ವಾಮಿಯವರು ಮಾತನಾಡುವುದು ಬೇಡ....

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾನು ನಿಮ್ಮ ಮೇಲೆ ಪ್ರಿವಿಲೇಜ್ ಮೂವ್ ಮಾಡುತ್ತಿದ್ದೇನೆ. I am moving privilege. ...

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಅವರು ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಅವರು ರಿಪ್ಲೈ ಮಾಡಲಿ, ನಾವು ಕುಳಿತುಕೊಂಡು ಕೇಳುತ್ತೇವೆ, ನೀವು ಏನು ಮಾತನಾಡುತ್ತೀರೋ ಮಾಡನಾಡಿ ತಮಗೆ ರಿಪ್ಲೈ ಮಾಡಲು ಅವಕಾಶವಿದೆ..

ಶ್ರೀ ಸಿದ್ಧರಾಮಯ್ಯ :- ಅವರು ಬೇಡಿಕೆಗಳ ಮೇಲೆ ಮಾತನಾಡುತ್ತಿದ್ದಾರೆ. He has got every right to speak. ನಿಮಗೆ ಉತ್ತರ ಕೊಡಲು ಅವಕಾಶವಿದೆ, ಆವಾಗ ರಿಪ್ಲೈ ಕೊಡಿ. (ಗೊಂದಲ)

ಶ್ರೀ ಬಿ. ಶಿವರಾಂ :- ಅಧ್ಯಕ್ಷರೆ, ಒಬ್ಬ ಸದಸ್ಯರ ಮೇಲೆ ಈ ರೀತಿಯ ಆರೋಪ ಮಾಡುವುದು ಸರಿಯಲ್ಲ. (ಗೊಂದಲ)

ಅಧ್ಯಕ್ಷರು :- ಸುಮ್ಮನೆ ಎಲ್ಲರು ನಿಂತುಕೊಳ್ಳುತ್ತೀರಿ, ಅವರು ಕೂಗುತ್ತಾರೆ, ಇವರು ಕೂಗುತ್ತಾರೆ. ವಸ್ತುಸ್ಥಿತಿ ಯಾರಿಗೂ ಅರ್ಥವಾಗುವುದಿಲ್ಲ, ಆದುದರಿಂದ ಒಬ್ಬರು ಮಾಡನಾಡಿ, ಅವರು ಉತ್ತರ ಕೊಟ್ಟ ಮೇಲೆ ನೀವು ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಸರ್, ನಾನು ಈಗ ಮಂತ್ರಿಗಳ ಮೇಲೆ ಪ್ರಿವಿಲೇಜ್ demand ಮಾಡುತ್ತಿದ್ದೇನೆ, I am demanding privilege

ಪ್ರಿವಿಲೇಜ್ ಮೂವ್ ಮಾಡುವುದಕ್ಕೆ ತಾವು ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಅವರು (ಮಂತ್ರಿಗಳು) ಏನು ಹೇಳುತ್ತಾರೆ ನೋಡೋಣ ತಾವು ಕುಳಿತುಕೊಳ್ಳುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾನು ಅವರ ಮೇಲೆ ಪ್ರಿವಿಲೇಜ್ ಮೂವ್ ಮಾಡುತ್ತಿದ್ದೇನೆ, ನಾನೇಕೆ ಕುಳಿತುಕೊಳ್ಳಬೇಕು?

ಶ್ರೀ ಸಿದ್ಧರಾಮಯ್ಯ :– ಅವರು ಬೇಡಿಕೆ ಮೇಲೆ ಮಾತನಾಡುತ್ತಿದ್ದಾರೆ, ನೀವು ಕೇಳಿ ಬರೆದುಕೊಳ್ಳಿ, ಆಮೇಲೆ ಉತ್ತರ ಕೊಡಿ, ಮಧ್ಯದಲ್ಲಿ ಎಲ್ಲದಕ್ಕೂ ಉತ್ತರ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಹೆಚ್.ಡಿ. ರೇವಣ್ಣ :– ನಮ್ಮ ಇಲಾಖೆಗೆ ಸಂಬಂಧಿಸಿದಂತೆ ಏನು ಬೇಕಾದರೂ ಚರ್ಚೆ ಮಾಡಲಿ, ಆದರೆ ಕ್ಷೇತ್ರವಾರು ಬಂದಾಗ ಚರ್ಚೆ ಮಾಡಿ, ಕ್ಷೇತ್ರವಾರು ಚರ್ಚೆ ಮಾಡುವುದಕ್ಕೆ ನಾನು ರೆಡಿ ಇದ್ದೇನೆ, ಯಾವ್ಯಾವ ಕಾಲದಲ್ಲಿ ಯಾವ್ಯಾವ ಕ್ಷೇತ್ರದಲ್ಲಿ ಏನಾಗಿದೆ ಎಂಬ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ರೆಡಿ ಇದ್ದೇನೆ.

ಶ್ರೀ ಬಿ.ಶಿವರಾಂ :– ಕ್ಷೇತ್ರವಾರು ಏನಾಗಿದೆ ಎಂದು ಶ್ವೇತಪತ್ರ ಬಿಡುಗಡೆ ಮಾಡಿ, ಸಾಕು ಅದರಲ್ಲೇ ಗೊತ್ತಾಗುತ್ತದಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಈ ಬೇಡಿಕೆಗಳನ್ನು ಎರಡು ದಿವಸ ಮುಂದಕ್ಕೆ ಹಾಕೋಣ, ಅವರು ಕ್ಷೇತ್ರವಾರು ಪಟ್ಟಿಯನ್ನು ಇಲ್ಲಿ ಮಂಡಿಸಲಿ, ನಾನು ಈಗ ಕುಳಿತುಕೊಳ್ಳುತ್ತೇನೆ. PWD ಇಲಾಖೆಯಲ್ಲಿ KPTCLನಲ್ಲಿ ಅದರ ಕೆಳಗಿರುವ electric companiesನಲ್ಲಿ ಕ್ಷೇತ್ರವಾರು ಆಗಿರುವ ಕೆಲಸಗಳ ಶ್ವೇತಪತ್ರವನ್ನು ಇಲ್ಲಿ ನಾವು ಡಿಮ್ಯಾಂಡ್ ಮಾಡುತ್ತಿದ್ದೇವೆ, ನಮಗೆ ಈಗ ಮಾಹಿತಿ ಸಿಕ್ಕಿಲ್ಲ, ತಾವು 3 ವರ್ಷದಿಂದ ಮಂತ್ರಿಗಳಾದಾಗಿನಿಂದ ಇಲ್ಲಿಯವರೆಗೆ ಏನೇನು ಕ್ಷೇತ್ರವಾರು ಮಾಡಿದ್ದೀರೆಂಬುದನ್ನು ಮಂಡಿಸಿ, ಕ್ಷೇತ್ರವಾರು ಕೆಲಸಗಳಾಗಿದ್ದರೆ, ನಾವು ತಮ್ಮನ್ನು ತಲೆಯ ಮೇಲೆ ಹೊತ್ತುಕೊಂಡು ಕರ್ನಾಟಕ ತುಂಬಾ, ಇಂಥವರು ನಮಗೆ ಸಿಗುವುದಿಲ್ಲ, ನೋಡಪ್ಪ ಕರ್ನಾಟಕ ಸ್ವರ್ಗವಾಗಿದೆ ಎಂದು ಓಡಾಡುತ್ತೇವೆ, ಇಲ್ಲವೆಂದರೆ ನೀವು ಏನು ಮಾಡಿಕೊಳ್ಳಬೇಕೋ ಮಾಡಿಕೊಳ್ಳಿ. KPTCL ನಲ್ಲಿ ಆರಂಭದಲ್ಲಿ ಮಂತ್ರಿಗಳು ಒಳ್ಳೆಯ ಕೆಲಸ ಮಾಡಿದರೆಂದು ನಾನು ಆರಂಭದಲ್ಲೇ ಹೇಳಿದೆ. ಸರ್ಕಾರದಿಂದ ಬಿಟ್ಟು ಹೋಗಿ ಒಳಗೆ ಬಂದ ಮೇಲೆ ಏಕೋ ಸಾರ್ವಭೌಮವಿದೆ ಎಂದು ತಿಳಿದುಕೊಂಡರೇನೋ ನನಗೆ ಗೊತ್ತಿಲ್ಲ. Number of transformers ತೆಗೆದುಕೊಂಡಿರುವುದನ್ನು ನೋಡಿಬಿಟ್ಟರೆ ದಿಗಿಲಾಗುತ್ತದೆ. ಆದರೆ, ಅಷ್ಟೊಂದು ಉತ್ಪಾದನೆ ಮಾಡಬೇಕಾದ ಸಂಸ್ಥೆಗಳಿಗೆ ಏಕೆ work

order ಹೋಗಲಿಲ್ಲ ಗೊತ್ತಾಗಲಿಲ್ಲ. ಉತ್ಪಾದನೆಗೆ ಇಲ್ಲಿಂದ ಆರ್ಡರೇ ಹೋಗುತ್ತಿಲ್ಲ. ಎರಡನೆಯದು, ಡೆವಲಪ್‌ಮೆಂಟ್, ನಾನು ಕೇಳುತ್ತೇನೆ, ನಾವೆಲ್ಲಾ ಭಾರಿ ಪ್ರತಿಭಟನೆಯನ್ನು ಮಾಡಿ ರೈತರ ಐಪಿ ಸೆಂಟ್‌ಗಳಿಗೆ ಜಾಸ್ತಿ ಚಾರ್ಜ್ ಮಾಡಬಾರದು, ಫ್ರೀಯಾಗಿರಬೇಕು, ಇರಿಗೇಷನ್‌ಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೀರಾ, ಅದೊಂದಾದರೂ input activity ನಮಗೆ ಕೊಡಿ, ನಾವು ನಮ್ಮದೇ ಆದ ದುಡ್ಡಿನಲ್ಲಿ ಬೋರ್ ಕೊರೆದುಕೊಂಡು, ನಮ್ಮದೇ ದುಡ್ಡಿನಲ್ಲಿ ಮೋಟಾರ್ ಬಿಟ್ಟುಕೊಂಡು, ನೀರು ಎತ್ತಿ ಹಾಕಿಕೊಳ್ಳುತ್ತೇವೆಂದರೆ ಒಂದಿಷ್ಟು ರಿಯಾಯಿತಿ ಕೊಡರಪ್ಪ ನಿಮ್ಮ ದಮ್ಮಯ್ಯ ಎಂದು ನಾವು ಕೇಳಿದ್ದೇವಷ್ಟೆ. ಯಡಿಯೂರಪ್ಪನವರೆ, ನಾವು ಈ ದೇಶದ, ರಾಜ್ಯದ ಪ್ರಜೆಗಳು, ನಮ್ಮ ತೆರಿಗೆಯಲ್ಲಿ ಡ್ಯಾಂ ಕಟ್ಟಿದ್ದೀರಿ, ನಮ್ಮ ತೆರಿಗೆಯಲ್ಲಿ ಬೇರೆ ಕಡೆ irrigation potential create ಮಾಡಿದ್ದೀರಿ, ನಾವು ನಮ್ಮದೇ ಬಂಡವಾಳದಲ್ಲಿ ಬೋರ್ ಕೊರೆದುಕೊಳ್ಳುತ್ತಿದ್ದೇವೆ, ನಮ್ಮದೇ ಬಂಡವಾಳದಲ್ಲಿ ಮೋಟಾರ್ ಬಿಟ್ಟುಕೊಳ್ಳುತ್ತಿದ್ದೇವೆ, ಸ್ವಲ್ಪ ವಿದ್ಯುತ್ ಕೊಡಿರಪ್ಪ ಏನಾದರೂ ಸ್ವಲ್ಪ ಹೊಲ, ತೋಟ, ಮನೆಗೆ ಸ್ವಲ್ಪ ನೀರು ನೋಡಿಕೊಳ್ಳುತ್ತೇವೆಂದು ನಾವು ಕೇಳಿದ್ದೇವೆ. ಸರ್, ಸರ್ಕಾರಗಳು ಹೇಗೆ ನಡೆದುಕೊಂಡವು? ಒಂದು ಸಲ ನಾನು unauthorized ಅನ್ನು regularize ಮಾಡಬೇಕಾದರೆ 25,000 penalty plus deposit ಕೊಟ್ಟರೆ ಮಾಡುತ್ತೇವೆ ಎಂದು ಹೇಳಿದಿರಿ, ಹೌದಾ? ಮತ್ತೆ ಬಂದು, Rs. 10,000 with deposit ಕಟ್ಟಿ ಎಲ್ಲಾ regularize ಮಾಡುತ್ತೇವೆಂದರು. ಆ ಮೇಲೆ ಕೆಲವು ತಾಲ್ಲೂಕುಗಳಿಗೆ ವೈಟಿದೆ ಎಂದು, ಇಲ್ಲ deposit ಕಟ್ಟಿ ಸಕ್ರಮ ಮಾಡಿಕೊಳ್ಳಿ ಎಂದಿರಿ, ನಾವು ಇವರು ಯಾವ ಹಿತಾಸಕ್ತಿಯಲ್ಲಿ ಮಾತನಾಡಿದರೆಂದು ತಿಳಿದುಕೊಳ್ಳಬೇಕು ಸರ್ ? ಬೋರ್ಡಿನ ಹಿತಾಶಕ್ತಿಯಲ್ಲಿ ಮಾತನಾಡಿದರೆಂದು ನಾವು ತಿಳಿದುಕೊಳ್ಳಬೇಕು. ಕಳೆದ ಎರಡು ತಿಂಗಳ ಹಿಂದೆ ಮಾರ್ಚ್ 30ಕ್ಕೆ ಒಂದೇ ಒಂದು ರೂಪಾಯಿ deposit ಇಲ್ಲದೆ ಸಕ್ರಮಗೊಳಿಸಿದವರಲ್ಲ, ಇದು ಯಾವ ಸರ್ಕಾರದ ಪಾಲಿಸಿ? ನಾಳೆ ಯಾರಾದರೂ ನಿಮಗೆ ದುಡ್ಡನ್ನು ಕಟ್ಟುತ್ತಾರಾ? ಯುಡಿಯೂರಪ್ಪನವರೆ, ನಿಮಗೆ ಗೊತ್ತಾ? Without even the deposit for installation, power supply deposit ಇಲ್ಲದಂತೆ ಈಗ ಆಗಿ ಹೋಗಿಬಿಟ್ಟಿದೆ, 6000 ರೂಪಾಯಿ ಆಗುತ್ತದೆ, ಡೆಪಾಸಿಟ್ ಕೊಡುತ್ತೇವೆ, ಜವಾಬ್ದಾರಿ ಇರಲಿ, ಒಂದು ಐಪಿ ಸೆಟ್‌ಗೆ ಅಷ್ಟು ತೆಗೆದುಕೊಳ್ಳಿ ಪೆನಾಲ್ಟಿ ವೇವ್ ಮಾಡಿ ಕಟ್ಟುತ್ತೇವೆಂದು ನಾವು ಬೇಡಿದಾಗ ಅದು ಆಗಲಿಲ್ಲ. 10,000 ಆದರೂ ಕಟ್ಟಬೇಕೆಂದಾಯಿತು, ಅವತ್ತು ಸಿದ್ಧರಾಮಯ್ಯನವರಿಗೆ ಬೇಡಿದೆವು. ಇವತ್ತು ನಿಮಗೆ ಗೊತ್ತಾ? ಈ ಮಾರ್ಚ್ 31ಗೆ taking nothing for consideration ಅರ್ಜಿ ಮೇಲೆ ಎಲ್ಲರದು

confirm ಆಗಿದೆ.

ಶ್ರೀ ಬಿ. ಶಿವರಾಂ : ಎಲ್ಲಾ ಕಡೆ ಆಗಿದೆಯಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮಲ್ಲೆಲ್ಲಾ ಆಗಿದೆ, ನಿಮ್ಮದು ಗೊತ್ತಿಲ್ಲ, it is a policy of BESCOM.

ಶ್ರೀ ಬಿ. ಶಿವರಾಂ : ಸಚಿವರು ಇಲ್ಲೆ ಇದ್ದಾರೆ, ಈ ಬಗ್ಗೆ ಹೇಳಬೇಕು.

ಶ್ರಿ ಹೆಚ್.ಟಿ. ಕೃಷ್ಣಪ್ಪ : We have to appreciate the Government.

ಶ್ರಿ ಜೆ.ಸಿ. ಮಾಧುಸ್ವಾಮಿ : ಐಪಿ ಸೆಟ್ ಆನ್ ಅಥ ರೈಸ್ಡ್ ರೆಗ್ಯುಲರೈಸೇಷನ್ ಬರೀ ಒಂದು ಅರ್ಜಿ ಮೇಲೆ ಎಲ್ಲಾ ಕಡೆ ಆಗಿದೆ.

ಶ್ರೀ ಹಂಪನಗೌಡ ಬಾದರ್ಲಿ : ಮಾಧುಸ್ವಾಮಿಯವರೆ, ಎಲ್ಲಾ ಕಡೆ ಆಗಿಲ್ಲ.

ಶ್ರೀ ಹೆಚ್.ಟಿ. ಕೃಷ್ಣಪ್ಪ : ಮಾಧುಸ್ವಾಮಿಯವರೆ, we have to appreciate the Government ಅಲ್ಲವೆ? You have to appreciate the Government ಸಿದ್ಧರಾಮಣ್ಣನವರೆ ಇದು ಖುಷಿಪಡುವ ವಿಚಾರವಲ್ಲವೆ?

ಶ್ರೀ ಬಿ. ಶಿವರಾಂ : ಚಾಮುಂಡೇಶ್ವರಿ ಡಿವಿಷನ್‌ನಲ್ಲಿ ಆಗಿಲ್ಲ, ಇಲ್ಲಿ ಮಾತ್ರ ಅರ್ಜಿ ತೆಗದುಕೊಂಡು, ಪ್ರತಿ ತಿಂಗಳು ಕಂತಿನ ವಸೂಲಿಗೆ ಮಾಡಿಕೊಂಡಿದ್ದಾರೆಂದು ಮೀಟಿಂಗ್‌ನಲ್ಲಿ ನಮಗೆ ತಿಳಿದ ಮಾಹಿತಿ ಇದು. ಆದರೆ ಬೇರೆ ಡಿವಿಷನ್‌ನಲ್ಲಿ ಈ ತರಹ ಆಗಲಿ ಎಂಬುದನ್ನು ನಮ್ಮ ಆಸೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬೆಸ್ಕಾಂನಲ್ಲಿ ಆಗಿಬಿಟ್ಟಿದೆ ಸಂತೋಷ, ರಾಜ್ಯದಲ್ಲಿರುವ ರೈತರಿಗೆಲ್ಲಾ ವಿಸ್ತರಿಸಿ, ಈಗಾಗಲೆ ಯಾರ್‍ಯಾರು ಡೆಪಾಸಿಟ್ ಕೊಟ್ಟಿದ್ದೇವೆ, ದಯವಿಟ್ಟು ಅದನ್ನು ಹಿಂದಕ್ಕೆ ಕೊಡಿ ಸರ್. ತಾವು ನಮ್ಮ ಹತ್ತಿರ ಡೆಪಾಸಿಟ್ ಕೊಟ್ಟು ತಾನೇ ಪವರ್ ಕೊಟ್ಟಿದ್ದಿರಿ, ಈಗ ನೀವು ಏನೂ ಇಲ್ಲದೇ ಕೊಡುತ್ತಿದ್ದೀರಿ. ಕನಿಷ್ಟ ಡೆಪಾಸಿಟ್ ತೆಗೆದುಕೊಳ್ಳಿ ಎಂದು ನಾವೇ ರಾಜಿ ಮಾಡಿ, ಹೋರಾಟ ಮಾಡಿಕೊಂಡು ಬಂದು, ಡೆಪಾಸಿಟ್ ಕೊಡುತ್ತೇವೆಂದರೆ, ಆಗುವುದಿಲ್ಲ 10,000 ರೂಪಾಯಿ ದಂಡ ಕಟ್ಟಿ ಎಂದು ಏಕಾ ಏಕಿ ನೀವು ನಿರ್ಧಾರವನ್ನು ತೆಗೆದುಕೊಂಡಿರಿ, ಇಲ್ಲ, ಇಲ್ಲ, ಅರ್ಜಿ ತೆಗೆದುಕೊಳ್ಳಿ ಎಂದು ನಮ್ಮ ಹತ್ತಿರ ಜನರು ಬಂದು ಕೇಳಿದರು ಸರ್. ಏಸ್ ಸರ್, ಹೋದ ತಿಂಗಳೆಲ್ಲಾ ಕುಳಿತುಕೊಂಡು ಡೆಪಾಸಿಟ್ ಆದರೂ ಕಟ್ಟಿರೆಂದು ಹೇಳಿದಿರಿ, ಈಗ ಏನು ಇಲ್ಲದೇ ತೆಗೆದುಕೊಳ್ಳುತ್ತಿದ್ದಾರೆ, ಇದೇನಿದು ನಿಮಗೇನಾದರೂ ಗೊತ್ತಾ ಎಂದು ಕೇಳುತ್ತಿದ್ದಾರೆ.

ಖಂಡಿತಾ ಗೊತ್ತಿಲ್ಲ, ನಮಗೇನು ಗೊತ್ತಿಲ್ಲವೆಂದು ನಾವು ಹೇಳಿದೆವು. ಮುಂದೆ ಆ supplier ಗತಿಯೇನು? ಅವನು ಹೇಗೆ ಕರೆಂಟ್ ಎಳೆದುಕೊಂಡಿದ್ದಾನೆಂದು ನಿಮಗೆ ಗೊತ್ತಾ? Unauthorized ಹೇಗಾಗಿದೆ ನಿಮಗೆ ಗೊತ್ತಾ? ಅದನ್ನು ಸರಿಪಡಿಸಲು ನಿಮ್ಮ ಹತ್ತಿರವಿರುವ ಕಾರ್ಯಕ್ರಮವೇನು? ಅಲ್ಲಿ ಆಗುವ ಪವರ್ ಲಾಸ್‌ಗೆ, ವಿತರಣೆ ಲಾಸ್‌ಗೆ ನಿಮ್ಮ ಕಾರ್ಯಕ್ರಮವೇನು? ಅವನೇ ಸ್ವತಃ transformer ಹಾಕಿಕೊಳ್ಳುತ್ತೇನೆ. ದುಡ್ಡು ಕಟ್ಟುತ್ತೇನೆಂದು ಹೇಳಿದವನಿಗೆ ಇಲ್ಲಿಯವರೆಗೆ ಕೊಟ್ಟಿಲ್ಲ. ತಾವು ಹಿಂದಿನ ದಿನಾಂಕದಲ್ಲಿ ದಂಡ ಕಟ್ಟಿ un authorized connection ಅನ್ನು regularisation ಕೇಳಿರುವವನಿಗೆ ಇನ್ನು ಮೆಟೀರಿಯಲ್ ಕೊಟ್ಟಿಲ್ಲ, ತಾವು ಡೆಪಾಸಿಟ್ ತೆಗೆದುಕೊಂಡು ಇದುವರೆಗೆ ಮೆಟೀರಿಯಲ್ ಕೊಟ್ಟಿಲ್ಲ, ಈಗ ತಾವು ಏನೂ ಇಲ್ಲದೇ RR number ಅನ್ನು ಕೊಟ್ಟಿದ್ದಿರಿ.

ಇದನ್ನು ಹೇಗೆ ರೆಕ್ಟಿಫೈ ಮಾಡುತ್ತೀರಿ? ಈಗ ಅಲ್ಲಿನ TC ಮೇಲೆ ನಾವು ಎಲ್ಲಾ ಓವರ್ ಲೋಡ್ ಆಗಿದೆ ಎಂದು ಹೇಳುತ್ತೇವೆ. ನಿಮ್ಮ ಇಂಜನಿಯರ್ ಲೋಡ್ ಇಲ್ಲವೆಂದು ಹೇಳುತ್ತಾರೆ. ಯಾರು ಉತ್ತರ ಹೇಳುವವರು? ನಾವು ಇನ್ನು ಏನಾದರೂ ಕೇಳುವುದಕ್ಕೆ ಹೋದರೆ ಪ್ಯಾಕೇಜ್‌ವಲ್ಲಿ ಸೇರಿದೆ ಎಂದು ಹೇಳುತ್ತೀರಿ. KEBಯನ್ನು ನೀವು ಯಾವ ಬುನಾದಿ ಮೇಲೆ ನಡೆಸುತ್ತಿದ್ದೀರಿ? What is your goal? KEBಯಲ್ಲಿ ನಿಮ್ಮ ಪಾಲಿಸಿ ಏನು? ಎಲ್ಲಿಗೆ ತೆಗೆದುಕೊಂಡು ಹೋಗಬೇಕೆಂದು ಮಾಡಿದ್ದೀರಿ? ರೈತರಿಗೆ ಫ್ರೀ ಪವರ್ ಕೊಡಬೇಕೆಂದು ಮಾಡಿದ್ದೀರಾ? ಇಲ್ಲಿ ಒಂದು ಚರ್ಚೆಯಾಯಿತು. ಒಂದು ಲಕ್ಷ ರೂಪಾಯಿ ಮೇಲೆ ನಾನು ಯಾವುದೇ IP ಸೆಟ್‌ಗೆ ಕರೆಂಟ್ ಕೊಡುವುದಕ್ಕಾಗುವುದಿಲ್ಲವೆಂದು ಮಾನ್ಯ ರೇವಣ್ಣನವರು ಇಲ್ಲಿ ಹೇಳಿದರು, ಚೆನ್ನಾಗಿ ಇರುವವರು, ಸ್ವಲ್ಪ ಹಾಕಿಸಿಕೊಳ್ಳುವವರು ಎಲ್ಲ ಲೈನ್ ಎಳೆದು ಹಾಕಿಸಿಕೊಂಡಿದ್ದೇವೆ. ಈಗ ಕೇಳುತ್ತಿರುವವರು ಯಾರು? ಪಾಪ, ಬಗರ್ ಹುಕುಂನಲ್ಲಿ ಜಮೀನು ತೆಗೆದುಕೊಂಡಿರುವವರೋ, ಗಂಗಾ ಕಲ್ಯಾಣ ಸ್ಕೀಮ್‌ನಲ್ಲೋ, Social welfare ಇಲಾಖೆಯ ಕೆಳಗೆ OBCನಲ್ಲೋ, Minorityನಲ್ಲೋ , power supply ತೆಗೆದುಕೊಳ್ಳುವವರನ್ನು ಕೇಳುತ್ತಿದ್ದೇವೆ. ಎಂತಹ ದುರ್ಭಿಕ್ಷೆಯ ಕಾಲದಲ್ಲಿಯೂ ಕರ್ನಾಟಕದಲ್ಲಿ IP ಸೆಟ್ ಮೆಟೀರಿಯಲ್‌ಇಳಿಗೆ restrictions ಮಾಡಿಲ್ಲ. 60,65,70 ಸಾವಿರ ಟಾರ್ಗೆಟ್ ಇಟ್ಟುಕೊಂಡು ಈ ರಾಜ್ಯ 1800, 2,000, 2,500 ಕೋಟಿ ರೂಪಾಯಿ ಬಜೆಟ್ ಪ್ರಾವಿಷನ್ ಮಾಡಿ ಕನಿಷ್ಟ 70,000, ಬಂಗಾರಪ್ಪನವರ ಕಾಲದಲ್ಲಿ 70,000 ದಿಂದ ಆರಂಭವಾದ ಯೋಜನೆಯಲ್ಲಿ ನೀರನ್ನು ಹೊಡೆದುಕೊಳ್ಳುವುದಕ್ಕೆ ಕರೆಂಟ್ ಹಾಕಿಕೊಡುತ್ತಿದ್ದರು. ರಾಜ್ಯವನ್ನೇ ಎರಡು ಭಾಗ ಮಾಡಿಬಿಟ್ಟೀರಿ. Black, gray ಮತ್ತು white ಆಗಿ ಮಾಡಿದಿರಿ.

Black ಮುಗಿದು, ಹೋಯಿತು, ಅವರು supply ನೇ ಕೇಳುವ ಹಾಗಿಲ್ಲ. Gray you have to wait. ಮತ್ತೊಮ್ಮೆ ಜಿಯಾಲಜಿಸ್ಟ್ certificate ಕೊಡಬೇಕು. White, ಇಡೀ ಕೋಲಾರ, I think it is 100% black. ಇಡೀ Kolar is black. Tumkur 8 Talukas are black. ಎಲ್ಲಿ ಬಯಲು ಸೀಮೆ ಇತ್ತು. ಎಲ್ಲಿ ನಾವು ಈ ನೀರನ್ನೇ ಉಪಯೋಗ ಮಾಡಿ ಬದುಕಬೇಕಾಗಿತ್ತು. ಎಲ್ಲಿ ಬ್ಯಾಂಕ್‌ನವನಿಗೆ ಸಾಲ ಹಿಂದಕ್ಕೆ ಬರುವುದು ಅನುಮಾನವಾಗಿ, ಸರ್ಕಾರಕ್ಕೆ ಮೊರೆ ಹೋಗಿ, ಜಿಯಾಲಜಿಸ್ಟ್ certificate insist ಮಾಡಿ, ಆ ಜಿಯಾಲಜಿಸ್ಟ್ ಲೋನ್ ಪರ್ಪಸ್‌ಗೆ Black, Gray & White ಎಂದು ಮಾಡಿದ್ದು. ಬ್ಯಾಂಕುಗಳಲ್ಲಿ ಮೊದಲು IP ಸೆಟ್‌ಗಳಿಗೆ ಬೋರ್‌ವೆಲ್‌ಇಳಿಗೆ ಸಾಲ ಕೊಡುತ್ತಿದ್ದರು. ಈಗ ನಿಲ್ಲಿಸಿದ್ದಾರೆ. ಅವತ್ತು ಜಿಯಾಲಜಿಸ್ಟ್ certificate ಕೇಳುವವರು. ಆಗ White ತಾಲ್ಲೂಕು, Gray ತಾಲ್ಲೂಕು Black ತಾಲ್ಲೂಕು ಎಂದು ಪ್ರಶ್ನೆ ಉದ್ಭವವಾಗುತ್ತಿತ್ತು. ಆ ಸರ್ಟಿಫಿಕೇಟ್‌ನ್ನು ಆಧಾರವಾಗಿಟ್ಟುಕೊಂಡು ರಾಜ್ಯದ ರೈತರಿಗೆಲ್ಲಾ ನಿರ್ನಾಮ ಮಾಡಿದಿರಿ. ಅವರೆಲ್ಲಾ un-authorize ಆಗಿ ತೆಗೆದುಕೊಂಡಿದ್ದಾರೆ. ತುರುವೇಕೆರೆ ಕೃಷ್ಣಪ್ಪನವರು ಮಾತನಾಡುತ್ತಿದ್ದರು, ನಿಮ್ಮ ತಾಲ್ಲೂಕು, ಇನ್ನೊಂದು ಮಧುಗಿರಿ ತಾಲ್ಲೂಕು, ಬೋರ್‌ವೆಲ್ ಹಾಕಿಕೊಂಡಿದ್ದಾರೆ ಬ್ಲ್ಯಾಕ್ ತಾಲ್ಲೂಕು ಅರ್ಜಿ ಕೊಟ್ಟರೆ ಪವರ್ ಸಪ್ಲೈ ಕೊಡುವುದಿಲ್ಲ. ಅವರು ಕದಿಯಬಾರದು? ಅವರು ಅಕ್ರಮ ಮಾಡಬಾರದಾ? ಅವರು ತೋಟ ಉಳಿಸಿಕೊಳ್ಳಬಾರದಾ? ನನ್ನ ಬೋರಿನಲ್ಲಿ ನೀರು ಬಿದ್ದಿದೆ, ಪವರ್ ತೆಗೆದುಕೊಳ್ಳುತ್ತೇವೆ. ನೀವು ಯಾರು ಬ್ಲ್ಯಾಕ್ ಏರಿಯಾ ಎಂದು ಹೇಳುವುದಕ್ಕೆ? ನೀರು ಬಿದ್ದ ಮೇಲೆ ಅಲ್ಲವಾ ಸಾರ್ ನಾವು ಸಪ್ಲೈ ಕೇಳುವುದು? ತಾವೂ ರೈತರೇ. ನನ್ನ ಬೋರ್‌ನಲ್ಲಿ ನೀರು ಬಿದ್ದಿದೆ, yield test certificate ಕೊಡುತ್ತಿದ್ದೇನೆ, ಬ್ಲ್ಯಾಕ್ ತಾಲ್ಲೂಕು ಎಂದು ನೀರು ಹೊಡೆದುಕೊಳ್ಳುವುದಕ್ಕೆ ಕರೆಂಟ್ ಕೊಡುವುದಿಲ್ಲ. ಇದು ರೈತರ ಪರವಾದ ತೀರ್ಮಾನವೆಂದು ಮಾನ್ಯ ರೇವಣ್ಣನವರು ತಿಳಿದುಕೊಂಡಿದ್ದಾರೆ, ನಿಮಗಿಂತ ರೈತರ ಚಾಂಪಿಯನ್ ಯಾರೂ ಇಲ್ಲ. ಈಗ ಅವರಿಗೆಲ್ಲಾ ರೆಗ್ಯುಲರೈಸ್ ಆಗುತ್ತಿದೆ. ಒಂದು ಸರ್ಕಾರ ಬರುವುದು ನಿಮ್ಮನ್ನು ಗುತ್ತಿಗೆ ಹಿಡಿದುಕೊಳ್ಳುವುದು. ಇನ್ನೊಬ್ಬರು ಬರುವುದು ಸ್ವೇಚ್ಛೆಯಾಗಿ ಬಿಟ್ಟು ಬಿಡುವುದು. ಈ ರೀತಿ ಆದರೆ ಇಲಾಖೆಗಳು ಉಳಿದುಕುತ್ತವಾ ಸಾರ್? ನಿಮ್ಮ ಬೆಸ್ಕಾಮ ಇರುತ್ತಾ? ನಿಮ್ಮ ಕೆಪಿಟಿಸಿಎಲ್ ಇರುತ್ತಾ? ರಾಜ್ಯಕ್ಕೆ ಇದೇ ಕೊನೆಯಾ? ಒಂದು ನೀತಿ ಎಂದರೆ ಆ ನೀತಿಗೆ ಒಂದು 10 ವರ್ಷ ಬೇಡವಾ? ಇಂತಹ ಒಂದು ಸೆಕ್ಟಾರ್‌ನಲ್ಲಿ ಏನು ಮಾಡಬೇಕೆಂದು ಒಂದು ಹತ್ತು ವರ್ಷದವರೆಗೆ ಆಲೋಚನೆ ಬೇಡವಾ? ಏಕಾ ಏಕಿ ಫ್ರೀ.

ಅವತ್ತಿನಿಂದ ಇವತ್ತಿನವರೆಗೆ ಮೆಟೀರಿಯಲ್ ಮೂವ್ ಆಗುತ್ತಿಲ್ಲ. ಅವತ್ತಿನಿಂದ ಇವತ್ತಿನವರೆಗೆ RLMS ಎಂದು ಅವರು ಒಂದು ಸ್ಕೀಮ್ ಕೊಟ್ಟರು. ಚಿಕ್ಕನಾಯಕನಹಳ್ಳಿಯಲ್ಲಿ ಒಂದೊಂದು ಸ್ಟೇಷನ್‌ಗೆ ಒಂದೊಂದು ರೋಡ್ ತೆಗೆದುಕೊಂಡು ಬಿಟ್ಟಿದ್ದೇವೆ ಎಂದು ಹೇಳಿದರು. ಮಾನ್ಯ ಕೃಷ್ಣ ಬೈರೇಗೌಡರು RLFS ಬಹಳ ಒಳ್ಳೆಯ ಸ್ಕೀಮ್ ಎಂದು ಅವರ ಛೇಂಬರ್‌ನಲ್ಲಿ ಹೇಳುತ್ತಿದ್ದರು. ನಾನು ಗಮನಿಸಿದೆ. ನನಗೆ ಬಹಳ ನೋವಾಯಿತು. ನಾನು ಅವತ್ತು ಸ್ವಲ್ಪ ಒರಟಾಗಿ ಮಾತನಾಡಿದೆ. ನಮಗೆ ಒಂದೊಂದು ಫೀಡರ್‌ಗಳನ್ನು ಮಾಡಿ ಕೊಟ್ಟಿಲ್ಲ. ಚಿಕ್ಕನಾಯಕನ ಹಳ್ಳಿಯಲ್ಲಿ ನಿಮ್ಮ RLMS scheme ನಲ್ಲಿ even after three years ಒಂದು ಫೀಡರ್ ಇಲ್ಲ. ಏಕೆ? ಸಮರ್ಥರಿದ್ದೀರಿ, most capable ಇದ್ದೀರಿ, you can alone run the department, you can alone run the portfolio, ಬೇರೆಯವರ ಅಗತ್ಯವಿಲ್ಲ, you can alone run the Government, ಏಕೆ ಸ್ವಾಮಿ ಹೀಗಾಗಿದೆ? ತಾವು ಹೇಳಬೇಕಲ್ಲಾ? ಚಿಕ್ಕನಾಯಕನಹಳ್ಳಿ sub division ನಲ್ಲಿ RLMSನಲ್ಲಿ ಯಾವುದಾದರೂ ಒಂದು ಫೀಡರ್‌ನ್ನು ನಿಮ್ಮ contractor ಮಾಡಿದ್ದೀರಾ? Deepak ಎನ್ನುವವರಿಗೆ ಯಾರಿಗೋ contract ಕೊಟ್ಟಿದ್ದೀರಿ. ಅವರು ಮಾಡಲಿಲ್ಲ. Station ಗಳು ಎಷ್ಟೊಷ್ಟು ಮಾಡಿದ್ದೀರಿ? ಅವರು ಸ್ಟೇಷನ್‌ಗಳನ್ನು ಮಾಡಬೇಕೆಂದು ಹೇಳಿದಾಗ ನಾನು ಸ್ವಲ್ಪ ಬೇಸರವಾಗಿ ಮಾತನಾಡಿದೆ. ಏಕೆ? ನಮಗೆ ಎರಡು-ಮೂರು ಸ್ಟೇಷನ್, ಪಕ್ಕದಲ್ಲಿ 11, 12, 13, ಸ್ಟೇಷನ್ ಕೊಟ್ಟಿದ್ದಾರೆ. ಇದನ್ನು ನೀವು ಸಮಗ್ರವಾಗಿ ಪರಿಶೀಲನೆ ಮಾಡಿ ಜಿಯಾಗ್ರಫಿಕಲ್ ಆಗಿ ಅರ್ಗನೈಸ್ ಮಾಡಿದರೆ ನಮ್ಮದೇನು ತಕರಾರು ಇಲ್ಲ. who am i to object? ಮಾಡಿಲ್ಲ. ಆಗಿಲ್ಲ. ಇಷ್ಟ ಬಂದ ಕಡೆ ಆಗುತ್ತದೆ. ಅದು ಲೋಡ್ ಸೆಂಟರ್‌ನಲ್ಲಿ ಆಗುವುದಿಲ್ಲ. ಯಾರೂ ನಿಮಗೆ ವರದಿ ಕೊಡುತ್ತಿಲ್ಲ. ನೀವು ಹೇಳಿದರಷ್ಟೇ ವರದಿ ತಂದು ಕೊಡುವುದು. ವರದಿ ತೆಗೆದುಕೊಂಡು ಬಾರಯ್ಯಾ ಎಂದು ಪ್ರಭುಗಳು ಹೇಳಿದರೆ ಅವನು ಬರೆದುಕೊಂಡು ಬರುತ್ತಾರೆ. ಇಲ್ಲದಿದ್ದರೆ ವರದಿ ತರುವ ಧಮ್ಮು ಯಾರಿಗೂ ಇಲ್ಲ ಇವತ್ತು. KPTCL ಮತ್ತು BESCOM ನಲ್ಲಿ ಧಮ್ಮೇ ಇಲ್ಲ. ಯಾರಾದರೂ ಆಫೀಸ್ ಹತ್ತಿರ ಬಂದುನೋಡಲಿ. ಅವರಿಗೆ ಹುಟ್ಟಿದ ದಿವಸ ಜ್ಞಾಪಕ ಬಂದು ಬಿಡುತ್ತದೆ. ಮಾಡಿ ಸಾರ್, ನಮ್ಮವರೇ ಜನ. ಮೊದಲೆಲ್ಲಾ ನಿಮ್ಮ ಪಾರ್ಟಿಗೆ ಓಟು ಹಾಕಿದ್ದಾರೆ. ಒಂದು ಕಾಲದಲ್ಲಿ ನಾವೂ ಅಲ್ಲಿಯೇ ಇದ್ದವರು. ನಮ್ಮ ಹಾಗೆ ಏನು ನೀವು ವಿರೋಧ ಪಕ್ಷದಲ್ಲಿ ಕುಳಿತಿಲ್ಲ. ಏನು ಮಲತಾಯಿ ಧೋರಣೆ ಮಾಡುತ್ತಿದ್ದೀರಿ? ನಮಗೆ ತುಮಕೂರಿನಲ್ಲಿ ಹುಟ್ಟಿರುವುದು ಪಾಪ ಅನ್ನಿಸಿಬಿಟ್ಟಿದೆ. ಕೃಷ್ಣಪ್ಪನವರು ಸುಖವಾಗಿದ್ದಾರೋ ಏನೋ ಗೊತ್ತಿಲ್ಲ?

ಹಾಸನದ ಆಡಳಿತ ಬಂತು ಎಂದರೆ ನಾವು ಮೋಡದ ನೆರಳಾಗಿ ಹೋಗುತ್ತೇವೆ. ಹೇಮಾವತಿ ನೀರು ಬರುವುದಿಲ್ಲ. ಎಂದಿದ್ದು ಕೇಳಿದ್ದು ಆಯಿತು. ಕರೆಂಟ್ ರೆಗ್ಯುಲರೈಸ್ ಆಗಿವುದಿಲ್ಲ ಎಂದಿದ್ದು ಕೇಳಿದ್ದು ಆಯಿತು. ನಮಗೇನೋ ವಕ್ಕರಿಸಿಕೊಂಡು ಬಿಟ್ಟಿದೆ ಎನ್ನುವ ಭಾವನೆ ಬಂದು ಬಿಟ್ಟಿದೆ. ನಮ್ಮನ್ನು ಇದರಿಂದ ಆಚೆಗೆ ತೆಗೆಯಿರಿ.

ಶ್ರೀ ಕೃಷ್ಣಪ್ಪ : ರೆಗ್ಯುಲರೈಸ್ ಮಾಡಿದರೂ ನೀವು ಅಬ್ಜೆಕ್ಷನ್ ಮಾಡುತ್ತೀರಿ. ಈ ದೌರ್ಭಾಗ್ಯ ಏಕೆ ನಿಮಗೆ? free regularization ಮಾಡಿದರೂ ನೀವು objection ಮಾಡುತ್ತೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಿಮಗೆ ಚೆನ್ನಾಗಿ ಇಟ್ಟಿದ್ದಾರೆ. ಕೃಷ್ಣಪ್ಪನವರು ಹೇಳಿದರು, 300 ಕೋಟಿ ರೂಪಾಯಿಗಳ ಯೋಜನೆಗಳಿಗೆ ಶಂಕುಸ್ಥಾಪನೆ ಆಯಿತು ಎಂದು ಹೇಳಿದರು. ನಮ್ಮವ್ರು ಎಷ್ಟೆಷ್ಟು ಆಗಿದೆ ಎಂದು ಇಲ್ಲಿ ಹೇಳಬೇಕು. ಕೃಷ್ಣಪ್ಪನವರು ಒಬ್ಬ MLA ನಿಂತುಕೊಂಡು ಪೇಪರ್‌ನಲ್ಲಿ advertisement ಕೊಟ್ಟು 300 ಕೋಟಿ ರೂಪಾಯಿ ವರ್ಕನ್ನು ಇವತ್ತು ಶಂಕುಸ್ಥಾಪನೆ ಮಾಡಿದರೆ,....

ಅಧ್ಯಕ್ಷರು : ಈಗಾಗಲೇ ಒಂದು ಗಂಟೆ 40 ನಿಮಿಷವಾಯಿತು. ಮಾಧುಸ್ವಾಮಿಯವರು ಬೇಗ ಮುಗಿಸಬೇಕು.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಸದನ ಪ್ರಾರಂಭವಾದಾಗಿನಿಂದ ಒಳ್ಳೆಯ ಭಾಷಣ ಮಾಡುತ್ತಾರೆಂದು ನಾವು ಮತ್ತು ಜನಗಳು ತಿಳಿದುಕೊಂಡಿದ್ದೇವೆ. ಅಂಕಿ ಸಂಖ್ಯೆ ಕೊಡುತ್ತಾರೆ. ನಮಗೆ ಅಷ್ಟು ಶಕ್ತಿ ಇಲ್ಲ. ಇವರು ಮಾತು ಮಾತಿಗೂ ಹಾಸನದವರು ಎಂದು ಹೇಳುತ್ತಾರೆ. ಹೇಮಾವತಿ ನೀರನ್ನು ನಮ್ಮ ಹೃದಯ ನಾಳದಿಂದ ಕೊಟ್ಟ ಹಾಗೆ ನಮ್ಮ ಮನೆಯನ್ನು ಹಾಳು ಮಾಡಿಕೊಂಡು ಬಾಗೂರು ನವಿಲೆ ನೀರನ್ನು ಕೊಟ್ಟಿದ್ದೇವೆ. ಮಾನ್ಯ ಮಾಧುಸ್ವಾಮಿಯವರು ಅದನ್ನು ಹೇಳಬಾರದು. ಮಾನ್ಯ ರೇವಣ್ಣನವರು ಕೆಲವು ಒಳ್ಳೆಯ ಕೆಲಸಗಳನ್ನು ಮಾಡಿರಬಹುದು, ಕೆಲವು ಕೆಟ್ಟ ಕೆಲಸಗಳನ್ನು ಮಾಡಿರಬಹುದು. ನೀವು ವಿರೋಧ ಪಕ್ಷದಲ್ಲಿ ಕುಳಿತು ಸರ್ಕಾರದ ಲೋಪದೋಷಗಳನ್ನು ಎತ್ತಿ ಹಿಡಿಯಿರಿ, ಬೇಡವೆಂದು ಹೇಳುವುದಿಲ್ಲ. ನಾವು ಹಾಸನದಲ್ಲಿ ಹುಟ್ಟಿದ್ದು ಶಾಪವೇ ಸ್ವಾಮಿ?

ಶ್ರೀ ಜೆ.ಸಿ. ಮಾಧುಸ್ವಾಮಿ : ನಮಗೆ ಇವತ್ತಿನವರೆಗೆ ತುಮಕೂರು ಜಿಲ್ಲೆಗೆ ಕೊಡಬೇಕಾದ ಐದು ಲಕ್ಷ ಎಕರೆ ಅಚ್ಚುಕಟ್ಟಿನಲ್ಲಿ ಒಂದೇ ಒಂದು ಎಕರೆ ಅಚ್ಚುಕಟ್ಟನ್ನು ಇನ್ನು ಕೊಟ್ಟಿಲ್ಲ ಸ್ವಾಮಿ ತಾವು. ನಾವೆಲ್ಲಾ escape ನಲ್ಲಿ ನೀರು ಹಾಯಿಸುತ್ತಿರುವುದು. ನೀವೇನು ನಮಗೆ ಧಾರಾಳವಾಗಿ ನೀರು ಬಿಟ್ಟಿಲ್ಲ.

ಶ್ರೀ ಸಿ.ಎಸ್. ಪುಟ್ಟೇಗೌಡ : ಹಾಸನ ಜಿಲ್ಲೆಯಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಟನಾಲ್ ತೆಗೆದು ನಿಮಗೆ ನೀರು ಕೊಟ್ಟಿದ್ದೇವೆ. ಕುಡಿಯುವುದಕ್ಕೆ ನೀರಲ್ಲದೇ ಆ ಭಾಗದ ಜನ ಶಾಪಗ್ರಸ್ತರಾಗಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಮುಗಿಸಿ ಬಿಡುತ್ತೇನೆ.

ಅಧ್ಯಕ್ಷರು : ಮಾಧುಸ್ವಾಮಿಯವರೆ, ಒಂದು ಗಂಟೆ 40 ನಿಮಿಷ ಆಗಿದೆ. ಬೇಗ ಮುಗಿಸಿ.

ಡಾ.. ಹೆಚ್.ಸಿ. ಮಹಾದೇವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಹಾಸನದಲ್ಲಿ ಹುಟ್ಟಿರುವವರು ಸುಖವಾಗಿರಬಹುದು ಎಂದು ತಿಳಿದುಕೊಂಡಿದ್ದರು. ಮಾನ್ಯ ಪುಟ್ಟೇಗೌಡರಿಗೂ ಕಷ್ಟ ಇದೆ ಎಂದು ಗೊತ್ತಾಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ : KPTCL ಬಗ್ಗೆ ಬಹಳ ನೋವಿನಿಂದ ಹೇಳುತ್ತಿದ್ದೇನೆ. ಇವತ್ತಿನವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ಲೋಡ್‌ಶೆಡ್ಡಿಂಗ್‌ನ್ನು ತೆಗೆದಿಲ್ಲ. ವ್ಯವಹಾರ ದೃಷ್ಟಿ ಬಿಟ್ಟು BESCOM ಆಗಲಿ, KPTCL ಯಲ್ಲಾಗಲಿ ವರ್ಕ್ಸ್ ಇಲ್ಲ. ಇವತ್ತಿನವರೆಗೆ ನಮ್ಮ ಭಾಗದಲ್ಲಿ ಒಂದು transformer repair center ಕೂಡ ಮಾನ್ಯ ರೇವಣ್ಣನವರು ಮಾಡಿಲ್ಲ. ಯಥೇಚ್ಛವಾಗಿ transfromer fail ಆಗುವ ಚಿಕ್ಕನಾಯಕನ ಹಳ್ಳಿ, ತಿಪಟೂರು ಮತ್ತು ಶಿರಾ ಈ ಭಾಗದಲ್ಲಿ ಇವತ್ತಿನವರೆಗೂ ಒಂದು ರಿಪೇರಿ ಸೆಂಟರ್ ಕೆಲಸ ಮಾಡಿಲ್ಲ. ನಾವು ಮಾನ್ಯ ರೇವಣ್ಣನವರ ಹಂಗಿಗೆ ಮತ್ತು ಬೆಸ್ಕಾಂ ಹಂಗಿಗೆ ಇರಲೇಬೇಕು, TC ಕಳುಹಿಸಿ ಮಾನ್ಯ ರೇವಣ್ಣನವರೇ ನಿಮ್ಮ ದಮ್ಮಯ್ಯ ಎಂದು ಕೇಳಲೇಬೇಕೆನ್ನುವ ಹಾಗೆ ನಮ್ಮನ್ನು ಇಟ್ಟುಕೊಳ್ಳುವುದಕ್ಕೆ ಅವರು ತೀರ್ಮಾನ ಮಾಡಿದ್ದಾರೆ. ಅದು ಎಷ್ಟು ದಿವಸ ಇರಬೇಕೆಂದು ಅವರು ಹೇಳಿ ಬಿಟ್ಟರೆ, ಅಷ್ಟು ದಿವಸ ನಾವೂ ಚಾಕರಿ ಮಾಡಬಹುದು. ಅವರೇ ಎಲ್ಲಾ ಮಾಡಿದ ಮೇಲೆ ನಮ್ಮದು ಯಾವ ಲೆಕ್ಕ? ನಮಗೆ ಏನಾಗಿದೆ ಎಂದು ನಮಗೆ ಅರ್ಥವಾಗಬೇಕು.

ನಾನು ಮಾನ್ಯ ಯಡಿಯೂರಪ್ಪನವರಲ್ಲಿ ಡಿಮ್ಯಾಂಡ್ ಮಾಡುತ್ತೇನೆ. ಸರ್ಕಾರ ಎಲೆಕ್ಟ್ರಿಸಿಟಿ ಸಮಸ್ಯೆಯನ್ನು ಬಗೆಹರಿಸಬೇಕು. ರೇವಣ್ಣವರ ಪಿಡಬ್ಲ್ಯುಡಿ ಇಲಾಖೆಗೆ ದುಡ್ಡು ಕೊಡುವುದನ್ನು ಕಡಿಮೆ ಮಾಡುತ್ತೀರೋ ಅಥವಾ ಬೇರೇನು ಮಾಡುತ್ತೀರೋ ಗೊತ್ತಿಲ್ಲ. ನಾನು ಹೇಳುವುದೇನೆಂದರೆ, production of power has to be taken up on priority. ಇದು ರಾಜ್ಯದ ಹಿತಾಸಕ್ತಿ. ನೀವಿಬ್ಬರೇ ಇಲ್ಲಿ ಗೂಟಾ ಹೊಡೆದುಕೊಂಡು ಇರುವುದಿಲ್ಲ. ನಾಳೆ ಯಾರೋ ಬೇರೆಯವರು ಬರುತ್ತಾರೆ. ನಾನು ಒಂದು ಮಾತನ್ನು ಈ ಸಭೆಯಲ್ಲಿ ಹೇಳಬೇಕಾಗುತ್ತದೆ. ಚಿಕ್ಕನಾಯಕನಹಳ್ಳಿಯಲ್ಲಿ ಹೆಚ್ಚು ಓರ್ ಇದೆ. ಏನಾದರೂ

ಮಾಡಿ ಅಲ್ಲಿ ಒಂದು ಸ್ಟೀಲ್ ಪ್ಲ್ಯಾಂಟ್ ಹಾಕಿ ಎಂದರು. ಬರೋರೆಲಾ ಕೇಳೋದೆ ಸಾರ್. Water and Power, ಅದೆಲ್ಲದ್ದನ್ನೂ ತಂದ ಬೆಂಗಳೂರಿನಲ್ಲಿಯೇ ತಾವು ಮಾಡಬೇಕೆನ್ನುತ್ತೀರಾ? ಇವತ್ತೇನಾದರೂ ಎಲೆಕ್ಟ್ರಿಸಿಟಿ ನಮ್ಮ ಬಾಗದಲ್ಲಿ ನೀವು ಕೊಟ್ಟಿದ್ದರೆ ಫಸ್ಟ್‌ಕ್ಲಾಸಾಗಿ ಅಲ್ಲಿ ಸ್ಟೀಲ್ ಪ್ಲ್ಯಾಂಟ್ ಆಗಿರುತ್ತಿತ್ತು. ಒಂದ್ ಮುನ್ನೂರೋ, ಐದುನೂರೋ, ಒಂದು ಸಾವಿರವೋ, ಎರಡು ಸಾವಿರವೋ ಜನರು ನೌಕರರಿಗೆ ಹೋಗಿರುತ್ತಿದ್ದರು. ನೀವು ಮಾಡಲಿಲ್ಲ. ನೀರಿಲ್ಲ. ಇವತ್ತು ಕೆ.ಇ.ಬಿ. ಏನೋ ರೇವಣ್ಣನವರಿಗೆ ಪೂರಾ ಸಿಕ್ಕಿಬಿಟ್ಟು ನೀರು ಇಳಿದು ಹೋಗಿಬಿಟ್ಟಿದೆ ಅದರಲ್ಲಿ. ಅಧಿಕಾರಿಗಳು ಹೇಗಾಗಿದ್ದಾರೆ, ನಾನು ಒಂದು ಸಲ ಇಲ್ಲಿ ರೇವಣ್ಣನವರಿಗೆ ಹೇಳಿದ್ದೆ, ಚೀಫ್ ಇಂಜಿನಿಯರ್‌ಗಳಿಗೆ ಏಕಪ್ಪಾ ಪ್ರಮೋಷನ್ ಮಾಡಿಲ್ಲವೆಂದು ಕೇಳಿದ್ದೆ. 24 ಪೋಸ್ಟ್‌ಗಳು ಖಾಲಿ ಇತ್ತು. ಆವತ್ತು ಒಂದು ಮಾತನ್ನು ಹೇಳಿದೆ, ಈಗ ಇರುವ ಒಂದು ಬ್ಯಾಚ್ ಹೋಗುವವರೆಗೂ ರೇವಣ್ಣ ಪ್ರಮೋಷನ್ ಮಾಡುವುದಿಲ್ಲ, ಇದು ನನಗೆ ಗೊತ್ತು ಎಂದು ಹೇಳಿದ್ದೆ. ಅವರು ಅದನ್ನು ಪ್ರೂವ್ ಮಾಡಿಬಿಟ್ಟರು. ಆ ಬ್ಯಾಚ್ ಹೋದ ತಕ್ಷಣ ಸಿದ್ಧರಾಮಯ್ಯನವರೆ, ರಾತ್ರೋರಾತ್ರಿ ಚೀಫ್ ಇಂಜಿನಿಯರ್ ಆಗಿಬಿಟ್ಟರು, ಎಷ್ಟು ಜನ ಆಗಿದ್ದಾರೆ ಗೊತ್ತೆ, 57 ಜನ ಈಗ ಚೀಫ್ ಇಂಜನಿಯರ್‌ಗಳು ಪಿ.ಡಬ್ಲ್ಯೂ.ಡಿ.ಯಲ್ಲಿ ಇದ್ದಾರೆ. ಈಗ 50 ಮಾಡಿದ್ದೀರಿ. ಇನ್ನು 7 ಪೋಸ್ಟ್‌ಗಳನ್ನು ರಿಸರ್ವೇಷನ್‌ನಲ್ಲಿ ಇಟ್ಟುಕೊಂಡಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ : ತಾವು ಹೇಳುತ್ತಿರುವುದು ಚೀಫ್ ಇಂಜಿನಿಯರ್‌ಗಳದ್ದನ್ನು, ಪಿ.ಡಬ್ಲ್ಯೂ.ಡಿ.ಯಲ್ಲಿ ಇರುವುದು ನಾಲ್ಕೋ, ಐದೋ ಅಷ್ಟೆ. ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಇದೆ. ಅದು ನನಗೆ ಬರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬೆಂಗಳೂರು ಕಾರ್ಪೋರೇಷನ್‌ದು ನಿಮಗೆ ಗೊತ್ತಿಲ್ಲ. ಇರಿಗೇಷನ್‌ದು ನಿಮಗೆ ಗೊತ್ತಿಲ್ಲ. ಮೈನರ್ ಇರಿಗೇಷನ್‌ದು ನಿಮಗೆ ಗೊತ್ತಿಲ್ಲ. ಆದರೆ ಪ್ರಮೋಷನ್ ಕೊಡುವವರು ನೀವೇ ತಾನೇ?

ಶ್ರೀ ಹೆಚ್.ಡಿ. ರೇವಣ್ಣ : ಅದರ ಬಗ್ಗೆಯೇ ನಾನು ಹೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಪ್ರಮೋಷನ್ ವಿಚಾರ ಬಂದಾಗ ಪೇರೆಂಟಲ್ ಡಿಪಾಟ್‌ಮೆಂಟ್ ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟ್‌ಗೆ ಬರುತ್ತದೆ ತಾನೆ.

ಶ್ರೀ ಹೆಚ್.ಡಿ.ರೇವಣ್ಣ : ಪ್ರಮೋಷನ್ ಡಿ.ಪಿ.ಎ.ಆರ್.ನವರು ಮಾಡುವವರು.

ಶ್ರೀ ಜೆ.ಸಿ. ಮಾಧುಸ್ವಾಮಿ : ಡಿ.ಪಿ.ಎ.ಆರ್. ಕೆಳಗೇ ಮಾಡುವುದು. ಆದರೆ ನಿಮ್ಮ ಸೆಕ್ರೆಟರಿ ಮೊದಲು ಇಶ್ಯೂ ಮಾಡಬೇಕಲ್ಲ. ಅವರು ಸಹಿ ಮಾಡದೇ ನೀವೇ ಸಹಿ ಮಾಡಿಕೊಡುವುದಕ್ಕಾಗುತ್ತದೆಯೇ? ಯಾರಿಗಾದರೂ

ಇಂಥವರನ್ನು ಚೀಫ್ ಇಂಜಿನಿಯರ್ ಆಗಿ ಮಾಡಿದ್ದೇನೆಂದು ಮಾಡುವುದಕ್ಕಾಗುತ್ತದೆಯೇ? ಆ ರೀತಿ ಮಾಡುವುದಕ್ಕಾಗುತ್ತದೆಯೇ ಸಾರ್? ಅದಕ್ಕೋಸ್ಕರವೇ ನೀವು ಅಂಥ ಸೆಕ್ರೆಟರಿಯವರನ್ನು ಇಟ್ಟುಕೊಂಡಿರುವುದು. ಎಷ್ಟು ಜನ ಮಾಡುತ್ತಾರೆ? ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳಿಗೆ ಕೆಲವು ಪ್ರಮಾಷನ್‌ಗಳನ್ನು ಕೊಟ್ಟಿದ್ದೀರಿ. ಸಿ.ಆರ್. ಆವತ್ತು ಬಂದೇ ಇರಲಿಲ್ಲ. ಆಷ್ಟು ಸಾಮರ್ಥ್ಯ ಇಲ್ಲಿ ಯಾರಿಗಾದರೂ ಇದೆಯೆ?

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ಕಾನೂನು ಬಾಹಿರವಾಗಿ ಯಾವುದೇ ಪ್ರಮೋಷನ್ ಮಾಡಿದ್ದರೆ ಅಂಥದ್ದನ್ನು ಬೇಕಾದರೆ ಹೇಳಲಿ. ಆ ಬಗ್ಗೆ ಚರ್ಚೆಯಾಗಲಿ. ಸಿ.ಆರ್. ಬಂದೇ ಇರಲಿಲ್ಲ ಪ್ರಮೋಷನ್ ಕೊಡುವುದಕ್ಕೆ ಎಂದಿದ್ದಾರೆ. ಅಂಥವುಗಳು ಯಾವುದಾದರೂ ಇದ್ದರೆ ಹೇಳಲಿ. ಸಿ.ಆರ್. ಬರದೇ ಪ್ರಮೋಷನ್ ಕೊಟ್ಟಿರುವಂಥ ಯಾವುದಾದರು ಒಂದು ಪ್ರಕರಣ ಇದ್ದರೆ ಈ ಸಭೆ ಮುಂದೆ ಹೇಳಲಿ. ಬೇಕಾದರೆ ನೀವು ಏನು ಹೇಳುತ್ತೀರೋ ಕೇಳುತ್ತೀನಿ. ಇನ್ನು ಚೀಫ್ ಇಂಜಿನಿಯರ್ಸ್‌ಗಳ ಬಗ್ಗೆ ಹೇಳಿದಿರಿ. ಈಗ ಇಲ್ಲಿಯೇ ಮಹದೇವಪ್ಪನವರು ಇದ್ದಾರೆ, ಸಿದ್ಧರಾಮಯ್ಯನವರು ಇದ್ದಾರೆ, ಇವತ್ತಲ್ಲ, ನಮ್ಮ ಕಾಲದಲ್ಲಿ ನಡೆದಿಲ್ಲ, ಕಳೆದ ಎರಡು ವರ್ಷದಿಂದ ಬಿದ್ದಿತ್ತು. ಸುಪ್ರೀಂಕೋರ್ಟ್‌ಗೆ ಹೋಯಿತು. ಕೆ.ಎ.ಟಿ.ಗೆ ಹೋಯಿತು, ಹೈಕೋರ್ಟ್‌ಗೆ ಹೋಯಿತು, ಎಲ್ಲಾ ಕಡೆ ಹೋಯಿತು. ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ 40 ಜನ ಚೀಫ್ ಇಂಜಿನಿಯರ್ಸ್ ಹಿಂದೆ ಒಬ್ಬೊಬ್ಬರು ಚೀಫ್ ಇಂಜಿನಿಯರ್ ಆಗಿದ್ದವರು ಮೂರು ಮೂರು ಕಡೆ ಇನ್‌ಛಾರ್ಜ್ ಇದ್ದರು. ನಮ್ಮ ಪಿಡಬ್ಲ್ಯೂಡಿಯುಲ್ಲಿ ನಾರ್ತ್, ಸೌತ್ ಎರಡು ಬಿಟ್ಟರೆ, ಕೆ.ಆರ್.ಡಿ.ಸಿಎಲ್. ಚೀಫ್ ಇಂಜಿನಿಯರ್ ಬಿಟ್ಟರೆ, ಕೇಶಿಪ್ ಬಿಟ್ಟರೆ, ಈ ನಾಲ್ಕು ಚೀಫ್ ಇಂಜಿನಿಯರ್ಸ್ ಬಿಟ್ಟರೆ, ನಮ್ಮಲ್ಲಿ ಯಾವುದೂ ಇಲ್ಲ. ನಾವೇನಾದರೂ ಕಾನೂನುಬಾಹಿರವಾಗಿ ಏನಾದರೂ ನಾನು ಚೀಫ್ ಇಂಜಿನಿಯರ್‌ದೋ, ಎಕ್ಸಿಕ್ಯುಟಿವ್ ಇಂಜಿನಿಯರ್‌ದೋ, ಎಸ್.ಇ.ಗಳದ್ದೋ ಯಾವುದಾದರೂ ಕಾನೂನುಬಾಹಿರವಾಗಿ ಪ್ರಮೋಷನ್ ಮಾಡಿದ್ದಾರೆ ಮಾಧುಸ್ವಾಮಿಯವರು ಹೇಳಲಿ.

(ಗೊಂದಲ)

ಡಾ.. ಹೆಚ್.ಸಿ. ಮಹದೇವಪ್ಪ :– ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಲೋಕೋಪಯೋಗಿ ಸಚಿವರು ಹೇಳಿದರು. ಸುಮಾರು ವರ್ಷದಿಂದ ಅದು ಹಾಗೆಯೇ ಬಿದ್ದಿತ್ತು. ಸಿದ್ಧರಾಮಯ್ಯನವರು ಇದ್ದರು, ನಾನೂ ಇದ್ದೆ, ಎಂ.ಪಿ. ಪ್ರಕಾಶ್, ಎಲ್ಲರೂ ಕ್ಯಾಬಿನೆಟ್‌ನಲ್ಲಿ ಇದ್ದೆವು. ಸಂವಿಧಾನಕ್ಕೆ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ತಿದ್ದುಪಡಿಯನ್ನು ತಂದರು. ಪ್ರಮೊಷನ್‌ನಲ್ಲಿ ಎಸ್.ಸಿ/

ಎಸ್.ಟಿ ಅಧಿಕಾರಿಗಳಿಗೆ ಮುಂಬಡ್ತಿ ಕೊಡುವಾಗ ಮೀಸಲಾತಿ ಇಡಬೇಕೆಂದು ತಂದರು. ಈ ವಿಷಯದ ಮೇಲೆ ಸುಪ್ರೀಂಕೋರ್ಟ್‌ಗೆ ಹೋದಾಗ ಸುಪ್ರೀಂಕೋರ್ಟ್ ಎಸ್.ಸಿ./ಎಸ್.ಟಿ. ಅಧಿಕಾರಿಗಳಿಗೆ ಮುಂಬಡ್ತಿಯಲ್ಲಿ ಮೀಸಲಾತಿ ಇಡುವುದನ್ನು ಎತ್ತಿಹಿಡಿಯಿತು. 16(4)ನೇ ಕಾಲಂಗೆ ತಿದ್ದುಪಡಿ ತಂದಿರತಕ್ಕಂಥ ಮೀಸಲಾತಿ ಕ್ರಮವನ್ನು ಎತ್ತಿಹಿಡಿಯಿತು. 2002ನೇ ಇಸವಿಯಲ್ಲಿ 16 ಜನ ಪರಿಶಿಷ್ಟ ಜಾತಿಯವರು ಎಸ್.ಇ.ಗಳು ಇದ್ದರು. ಈ ಪ್ರಮೋಷನ್ ಕೊಟ್ಟಾಗ ಬರೇ ಇಬ್ಬರೋ ಮೂರು ಜನಕ್ಕೋ ಕೊಟ್ಟಿದ್ದಾರೆ. ಆದರೆ ಎಲ್ಲರೂ ಆಗಬೇಕಾಗಿತ್ತು. 2004ಕ್ಕೆ ಪ್ರಮೋಷನ್ಸ್ ಎಲ್ಲರಿಗೂ ಕೊಟ್ಟಿದ್ದಾರೆ. ನಿಜವಾಗಿ ಆಗಬೇಕಾಗಿದ್ದವರನ್ನು ಬಿಟ್ಟಿದ್ದಾರೆ, ಹೀಗೆ ಅನೇಕ ಗೊಂದಲಗಳು ಆಗಿವೆ.

ಗೊಂದಲ

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ಮಾನ್ಯ ಮಹದೇವಪ್ಪನವರಿಗೆ ಒಂದು ನಿಮಿಷದಲ್ಲಿ ಉತ್ತರ ಕೊಟ್ಟುಬಿಡುತ್ತೇನೆ. ಹಿಂದೆ ಹೆಚ್.ಕೆ. ಪಾಟೀಲರು ಕಾನೂನು ಸಚಿವರಾಗಿದ್ದರು. ಲಾ ಸೆಕ್ರೆಟರಿ ಒಪಿನಿಯನ್ ಇದೆ, ಅಡ್ವೊಕೇಟ್ ಜನರಲ್ ಒಪಿನಿಯನ್ ಇದೆ, ಕಾನೂನು ಮಂತ್ರಿಗಳು ಏನು ಒಪಿನಿಯನ್ ಕೊಟ್ಟಿದ್ದಾರೆ, ಅದರಂತೆ ಮಾಡಿದ್ದಾರೆ. ನಾನೇನಾದರೂ ಒಪ್ಪಿಗೆಯನ್ನು ಕೊಟ್ಟಿದ್ದರೆ ಹೇಳಲಿ.

ಶ್ರೀ ಆರ್. ಧ್ರುವನಾರಾಯಣ್ :– ಮಾನ್ಯ ಸಚಿವರೆ, ಮೀಸಲಾತಿ ಉಲ್ಲಂಘನೆ ಆಗಿದ್ದರೆ ತಾವು ಸರಿಪಡಿಸಿ.

ಶ್ರೀ ಹೆಚ್.ಡಿ. ರೇವಣ್ಣ :– ಒಂದು ಸಾವಿರ ಎಸ್.ಸಿ/ಎಸ್‌ಟಿ ಇಂಜಿನಿಯರ್ಸ್‌ಗಳನ್ನು ಸಿದ್ಧರಾಮಯ್ಯ ಸಾಹೇಬರು ಪರ್ಮನೆಂಟ್ ಮಾಡಿದರು. ನಿಮ್ಮ ಕೈಯಲ್ಲಿ ಆಯಿತೇನ್ರಿ, ಹಿಂದಿನ ಸರ್ಕಾರ ನಿಮ್ಮದು ಇದ್ದಾಗ ನೀವು ಏನು ಮಾಡಿದ್ದೀರಿ?

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ :– ರೇವಣ್ಣನವರು ಬೇಜಾರು ಮಾಡಿಕೊಳ್ಳುವ ಅಗತ್ಯವಿಲ್ಲ. ಅನ್ಯಾಯವಾಗಿದೆ. ಸಂವಿಧಾನದ ತಿದ್ದುಪಡಿಗೆ ವ್ಯತಿರಿಕ್ತವಾಗಿ...

(ಗೊಂದಲ)

ಅಧ್ಯಕ್ಷರು :– ಮಾಧುಸ್ವಾಮಿಯವರೆ, ತಾವು ಮಾತನಾಡಿ, ಸುಮ್ಮನೇ ನೀವು ಆ ಕಡೆ ನೋಡುತ್ತೀರಿ, ಬೇಗ ಮಾತನಾಡಿ ಮುಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಮೊದಲೇ ಈ ಸಭೆಯಲ್ಲಿ ಪ್ರಶ್ನೆ ಹಾಕಿದ್ದೆ. 24 ಚೀಫ್ ಇಂಜಿನಿಯರ್ ಪೋಸ್ಟ್‌ಗಳು ಖಾಲಿ ಇದೆ, ಇದನ್ನು ಏಕೆ ಭರ್ತಿ ಮಾಡಿಲ್ಲವೆಂದು ಪ್ರಶ್ನೆ ಹಾಕಿದ್ದೆ. ನನಗೆ ಗೊತ್ತಿತ್ತು, ಅದು ಆವತ್ತು ಆಗಿವುದಿಲ್ಲ ಎಂದು ನಾನು ಅವರ ಆಫೀಸ್‌ಗೆ ಹೋಗಿ ಕೇಳಿದ್ದೆ. ಸುಪ್ರಿಂಕೋರ್ಟ್ ಆದೇಶವಿದೆ, ಏಕೆ ಚೀಫ್ ಇಂಜಿನಿಯರ್ ಪೋಸ್ಟ್ ತುಂಬುತ್ತಿಲ್ಲವೆಂದು ಕೇಳಿದ್ದೆ. ಅದಕ್ಕೆ ಹೌದು ಸಾರ್, ಅದನ್ನು ಕನ್ಸಿಡರ್ ಮಾಡಬೇಕಾಗಿದೆ ಎಂದರು. ಇದನ್ನು ಇವರು ಹೇಳಲಿಲ್ಲ. ಯಾರು ಹೇಳಿದರು ಎಂದು ನಾನು ಹೇಳುತ್ತೇನೆ. While promoting we will consider ಎಂದು ಹೇಳಿದರು. ಆದರೆ ನಾನು ಆವತ್ತೇ ಹೇಳಿದೆ, ಈ ಬ್ಯಾಚ್‌ರಿಟೈರ್ ಆಗುವವರೆಗೆ ಪ್ರಮೋಷನ್‌ಗಳು ಆಗುವುದಿಲ್ಲವೆಂದು ಹೇಳಿದ್ದೆ. ಆ ಬ್ಯಾಚ್ ರಿಟೈರೆ ಆದರು ಪಾಪ. ಈಗ ಅವರೇನೂ ಲೇಟ್ ಮಾಡಿಲ್ಲ. ಪ್ರಮೋಷನ್ ಕೊಟ್ಟರು. ಅದರ ಹಿಂದೆಯೇ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೂ ಕೊಟ್ಟರು.

ಶ್ರೀ ಬಿ. ಶಿವರಾಂ :– ಆ ಬ್ಯಾಚ್ ರಿಟೈರ್ ಆಗುವವರೆಗೂ ಪ್ರಮೋಷನ್ ಕೊಡಲಿಲ್ಲವೆಂದರೆ ಉದ್ದೇಶವೇನಿತ್ತು?

ಶ್ರೀ ಜೆ.ಸಿ. ಮಾಧುಸ್ವಾಮಿ :– ಅದೇನೋ ನನಗೆ ಗೊತ್ತಿಲ್ಲ. ಬಹುಶಃ ಅವರು ಕೋರ್ಟ್‌ಗೆ ಹೋಗಿದ್ದರು ಎಂದು ಸಿಟ್ಟಿತ್ತೇನೋ. ಅವರೇ ಪಿಡಬ್ಲ್ಯೂಡಿ ಸಚಿವರಾಗಿದ್ದರು. ಪಾಪ, ಅವರಿಗೆ ಇದು ಗೊತ್ತಿಲ್ಲ. ಕೆಲವು ವಿಷಯ ಅವರಿಗೆ ಗೊತ್ತಾಗುವುದಿಲ್ಲ. ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ ಸಾರ್. ಕೆಲವು ಒಂದೊಂದು ಸಲ ಅವರಿಗೆ ಗೊತ್ತಾಗುವುದಿಲ್ಲ. ಪಾಪ, ಆವರೂ ಎಷ್ಟು ಅಂತ ನೋಡುವುದಕ್ಕಾಗುತ್ತದೆ ಹೇಳಿ. ಇಡೀ 440 ವೋಲ್ಟ್ ಹೊರೆ ನಿಮ್ಮ ಮೇಲೆ ಬಿದ್ದುಬಿಟ್ಟರೆ ಹೊರುವುದಕ್ಕಾಗುತ್ತದೆಯೇ ಆಗಲ್ಲ. ಹಿಂದೆ ಪ್ರಮೋಷನ್ ಹೇಗಾಗಿದೆ ಎಂಬುದನ್ನು ತಾವು ನೋಡಬೇಕು ಸಾರ್. ಸಾರ್ ರಾತ್ರಿ 11 ಗಂಟೆ 12 ಗಂಟೆಗೆ ಪ್ರಮೋಷನ್‌ಗಳು ಆಗುತ್ತದೆ. ರಾತ್ರಿ 12 ಗಂಟೆಯಲ್ಲಿ ಆರ್ಡರ್ ಇಶ್ಯೂ ಆಗುತ್ತದೆ. ಬೆಳಿಗ್ಗೆ 10 ಗಂಟೆಗೇ ಹೋಗಿ ರಿಪೋರ್ಟ್ ಮಾಡಿಕೊಳ್ಳಬೇಕೆಂದು ಆದೇಶವಾಗಿರುತ್ತದೆ. ಏಕೆಂದರೆ ಯಾರಾದರೂ ಕೋರ್ಟ್‌ಗೆ ಹೋಗಿಬಿಟ್ಟರೆ., ನಿಮಗೆ ಎಕ್ಸಿಕ್ಯುಟಿವ್ ಇಂಜಿನಿಯರ್‌ನಿಂದ ಸೂಪರಿಂಟೆಂಡೆಂಟ್ ಆಗಿರುವುದು ಸ್ವಾತಂತ್ರ್ಯ ಬಂದ ಹೊತ್ತನಲ್ಲಿಯೇ. ಸೂಪರಿಂಟೆಂಡೆಂಟ್ ಇಂಜಿನಿಯರ್‌ರಿಂದ ಚೀಫ್ ಇಂಜಿನಿಯರ್ ಆಗುವುದೂ ಸ್ವಾತಂತ್ರ್ಯ ಬಂದ ಹೊತ್ತಿನಲ್ಲಿಯೇ. ಏಕೆಂದರೆ ಲಗ್ನ ಕಟ್ಟಿರುವುದು ಆ ಕಾಲ. ಹಿಂದೆ ಜವಹರ್‌ಲಾಲ್ ನೆಹರು ಮೌಂಟ್ ಬ್ಯಾಟನ್ ಕೇಳಿ ಆ ಟೈಮ್ಸ್‌ಗೇ ಲಗ್ನ ಕಟ್ಟಿಸಿಬಿಟ್ಟಿದ್ದಾರೆ. ಅಷ್ಟು ಹೊತ್ತಿನಲ್ಲಿಯೇ

ಒಳ್ಳೆಯ ಕೆಲಸಗಳೂ ಈ ವಿಧಾನಸೌಧದಲ್ಲಿ ಆಗುವುದು. ಬೆಳಿಗ್ಗೆ ಹೊತ್ತು ಅಗುವುದಿಲ್ಲ. ಏಕೆಂದರೆ ಪಕ್ಕದಲ್ಲಿಯೇ ಕೆಂಪು ಬಣ್ಣದ ಕೋರ್ಟ್ ಇಟ್ಟುಕೊಂಡು ಬೆಳಿಗ್ಗೆ ಹೊತ್ತು ಆರ್ಡರ್ ಹೊತ್ತು ಆರ್ಡರ್ ಇಶ್ಯೂ ಮಾಡುವುದಕ್ಕಾಗುತ್ತದೆಯೇ ಇದು ನಡೆಯುತ್ತಿರುವ ರೀತಿ. ಇಲ್ಲಿ decentralization ಎಂದುಬಿಟ್ಟು, ಅದೇನೋ ನಮಗೆ ಆ ಸ್ಪೆಲಿಂಗೆ ಕೂಡ ಗೊತ್ತಿಲ್ಲ, ನಾವೆಲ್ಲ victimise ಆಗಿಬಿಟ್ಟೆವು, ಅದರಲ್ಲಿ ಬಹಳ ಮಾತು ನಡೆಯುತ್ತದೆ. ಕೆಲವು ಇಲಾಖೆಗಳು, ಏನು ಸೆಂಟ್ರಲೈಸ್, ಏಕಾಯಿತೋ, ಏನಾಯಿತೋ, ಏನು ಆಗುತ್ತಿದ್ದೇವೆ, ಏನು ಆಗುತ್ತಿದೆ ಎನ್ನುವುದು ಗೊತ್ತಿಲ್ಲ. ನಾನು ಇಲ್ಲಿ ಕೆ.ಪಿ.ಟಿ.ಸಿ.ಎಲ್.ಗೆ ಬೆಸ್ಕಾಂಗೆ ಡಿಮ್ಯಾಂಡ್ ಮಾಡುತ್ತಿದ್ದೇನೆ. ಹೇಗಾದರೂ ಮಾಡಿ ಹಳ್ಳಿಯಲ್ಲಿ ತಾವು ಪಟ್ಟಣದವರಿಗೆ ಕೊಟ್ಟಂತೆ ದಿನದ 24 ಗಂಟೆಗಳ ಕಾಲ ಕರೆಂಟ್ ಕೊಡಿಸುವುದಕ್ಕೆ ಅಗುತ್ತದೆಯೆ ಅಥವಾ ಇಲ್ಲವೆ? ಇದು ಒಂದು ವಿಚಾರ. ಎರಡನೆಯದಾಗಿ, ಇವತ್ತು ಪ್ರಪಂಚ ಬಹಳ ಫಾಸ್ಟ್ ಆಗಿ ಮೂವ್ ಆಗುತ್ತಿದೆ. ಸೋಲಾರ್ ಎನರ್ಜಿ, ವಿಂಡ್ ಎನರ್ಜಿ, ಕೇಂದ್ರ ಸರ್ಕಾರ ಕೊಡುತ್ತಿರುವ ನಾನ್-ಕನ್‌ವೆನ್‌ಶನಲ್ ಎನರ್ಜಿ ಬೋರ್ಡ್ ಕೊಡುತ್ತಿರುವ ಹಣ ಕೂಡ ಇಲ್ಲಿ ಬಳಕೆಯಾಗುತ್ತಿಲ್ಲ. 30 ರೂಪಾಯಿ ನಮಗೆ ಸಬ್ಸಿಡೈಸ್ಡ್ ಮಾಡಿಬಿಡುತ್ತಾನೆ, ನಮ್ಮ ಮನೆಯಲ್ಲಿ ನಾನು ಸೋಲಾರ್ ಸಿಸ್ಟಂ ಅನ್ನು ಹಾಕಿಕೊಂಡಿದ್ದೇನೆ ಎಂದರೆ ಕೆ.ಪಿ.ಟಿ.ಸಿ.ಎಲ್.ನವರು ಮಾಡುವುದು ಇಷ್ಟೆ. ಈ ಮೊದಲು ಇಂಟರೆಸ್ಟ್ ಫ್ರೀ ಲೋನ್ ಇತ್ತು 80% ಸಬ್ಸಿಡಿ ಇತ್ತು, ರೇವಣ್ಣನವರೆ, ಈ ಮೊದಲು ನಾನು ಕೆ.ಎಂ.ಎಫ್. ಅಧ್ಯಕ್ಷನಾಗಿದ್ದಾಗ ಬೆಂಗಳೂರು ಡೈರಿಯಲ್ಲಿ ಸೋಲಾರ್ ಸಿಸ್ಟಂ ಹಾಕಲಾಗಿತ್ತು. ನಿಮಗೆ ಎಲ್ಲಾ ಗೊತ್ತಿದ್ದರೂ ಆ ಕಡೆಗೆ ತಾವೇಕೆ ಆಲೋಚನೆಯನ್ನು ಮಾಡುತ್ತಿಲ್ಲವೆಂದು ನಾನು ಕೇಳಬಯಸುತ್ತೇನೆ.

ಪ್ರಮುಖವಾಗಿ solar houseಗಳನ್ನು ನೋಡುವುದಕ್ಕೆ ಹೋಗಬೇಕು. ಮಾನ್ಯ ಸಿದ್ಧರಾಮಯ್ಯನವರೆ, ಮಲೇಶಿಯಾದಲ್ಲಿ ಅಲ್ಲಿ enitre roof design ಮಾಡಿದ್ದಾರೆ. ಹಾಗೆ ಮಾಡಿದರೆ ನಿಮಗೆ power ಅಗತ್ಯವೇ ಬರುವುದಿಲ್ಲ. ಇದನ್ನೆಲ್ಲಾ ಮಾಡುವುದಕ್ಕೆ ನಿಮಗೆ ಎಷ್ಟು ವರ್ಷ ಬೇಕು? ಕನಿಷ್ಟ ನಮ್ಮ ಮನೆಯಲ್ಲಿ ಆಗಲಾದರೂ current ಉಪಯೋಗಿಸುವುದನ್ನು ಕಡಿಮೆ ಮಾಡಬಹುದು. ಒಂದು ಸ್ವಲ್ಪ subsidized ಮಾಡಿ. ನಿಮ್ಮ power ಉಳಿಸಿ. ಹಳ್ಳಿಯಲ್ಲಿರುವವರು solar ಮಾಡಲಿ, ನೀವು ಕೊಡಿ ದುಡ್ಡು. ನೀವು ಇಲ್ಲಿ apartment ಕಟ್ಟುವವರಿಗೆ ಇಷ್ಟು unit ಅನ್ನು ನೀವು solarನಲ್ಲಿ generate ಮಾಡಿಕೊಳ್ಳಲೇಬೇಕು ಎಂದು insist ಮಾಡಿ. ಬೆಂಗಳೂರು cityಯಲ್ಲಿ ಇರುವವರಿಗೆ ಸ್ವಂತ generation ಮಾಡಿಕೊಳ್ಳಿ ಎಂದು ಹೇಳಿ.

ಬೇರೆ ಕಡೆಯಲ್ಲಿರುವವರಿಗೆ ಹೇಳಲಿ. But you have confined. ಎಲ್ಲಾ ನೀರು ಮತ್ತು current ಅನ್ನು ಎಲ್ಲಾ ತಂದು ನೀವು factoryಗಳಿಗೆ, T.V. ನೋಡುವುದಕ್ಕೆ current ಕೊಟ್ಟುಬಿಟ್ಟರೆ, ಅಲ್ಲಿ ನಾವು ಹೇಗೆ ಬದುಕುವುದು? ನಿಮ್ಮ ತಂದೆಯವರು ಬರೆದ ಪುಸ್ತಕ ಏನಾಯಿತು? ಏಕೆ ಓದಲಿಲ್ಲ? ನೀವು ಎಲ್ಲಾ ಓದಿದ್ದೀರಿ. ಇಲಾಖೆಯಲ್ಲಿ ಇಡುವುದು ಎಲ್ಲಾ ಗೊತ್ತು. ರೇವಣ್ಣ, ನೀವು ಆ ಪುಸ್ತಕವನ್ನು ಓದುವುದನ್ನು ಏಕೆ ಮರೆತುಬಿಟ್ಟಿರಿ. "ಕತ್ತಲಲ್ಲಿ ಕರ್ನಾಟಕ ಎನ್ನುವ ಪುಸ್ತಕವನ್ನು ಓದುವುದನ್ನು ಮರೆತುಬಿಟ್ಟರು. ಇನ್ನೊಂದು ಪುಸ್ತಕ ಮರೆತುಬಿಟ್ಟರು. "ಭೂಗಳ್ಳರ ವಿರುದ್ಧ ಹೋರಾಟ SEZ ಮಾಡಲಿಕ್ಕೆ ಹೊರಟರು. ಯಾರು ಕೂಡ ರೈತರ ಜಮೀನನ್ನು ಒಂದು ಇಂಚು ತೆಗೆದುಕೊಳ್ಳಕೂಡದು. ಭೂಗಳ್ಳರು, ನನ್ನ ಜೀನವದ ಆಕಾಂಕ್ಷೆ ಈ ಭೂಗಳ್ಳರನ್ನು ನೆಲಸಮ ಮಾಡುವುದು ಎಂದು ಹೇಳಿದರು. ಕೋಲಾರ ಜಿಲ್ಲೆ ಮುಳುಗಿಸುವುದಕ್ಕೆ ಹೊರಟುಬಿಟ್ಟಿರಿ. ಒಂದು ಮಾತು ನಿನ್ನೆ ಆಡಿದ್ದಿರಿ. ನಾನು ಏನು ಆಡಿದ್ದೇನೆ ಅದು ಪ್ರಮಾಣ, ಅದರ ಆಧಾರದ ಮೇಲೆ ಜನ ಓಟು ಕೊಟ್ಟಿದ್ದಾರೆ. 59 ಜನರನ್ನು ಗೆಲ್ಲಿಸಿದ್ದು, ನಿಮಗೆ ಅಧಿಕಾರ ಮಾಡುವುದಕ್ಕೆ ಕೊಟ್ಟಿಲ್ಲ. ನಾವೇ ಗೆದ್ದಿರುವುದು ರಾಜ್ಯವನ್ನು ಆಳುವುದಕ್ಕೆ ಎಂದು ಭ್ರಮೆಯಲ್ಲಿ ಬಕುಕಿಕೊಂಡು ಬಿಟ್ಟಿರಿ. ನಿಮ್ಮನ್ನು ಆಳುವುದಕ್ಕೆ ಯಾರು ಗೆಲ್ಲಿಸಿದ್ದಾರೆ? You are just 59. ಯಾರ್‍ಯಾರದೋ ಜೊತೆಯಲ್ಲಿ ಒಡಂಬಿಕೆ ಮಾಡಿಕೊಂಡು, ಯಾರ್‍ಯಾರದೋ ಜೊತೆಯಲ್ಲಿ ಮಲಗಿಕೊಂಡು ನಾನು ಸಂಸಾರಸ್ಥ. ಗೃಹಸ್ಥ ಎಂದು ಹೇಳಿದರೆ ನಾವು ಏನು ಹೇಳುವುದು? ದೇಶದ ಸುದ್ದಿ ಬಿಡಿ, ಇಲ್ಲಿಯವರನ್ನು ಮಾತನಾಡೋಣ. ಕರ್ನಾಟಕದಲ್ಲಿ ಲೋಕೋಪಯೋಗಿ ಇಲಾಖೆ ಮೇಲೆ ಮಾನ್ಯ ರೇವಣ್ಣನವರು ಇಟ್ಟಿರುವ ಡಿಮಾಂಡ್ಸ್ ಬಗ್ಗೆ ನಾವು ಮಾತನಾಡುತ್ತಿರುವುದು. ಈಗ ಕೊಟ್ಟಿರುವುದನ್ನು ಸದ್ಭಳಕೆ ಮಾಡಿಕೊಳ್ಳಿ ಮುಂದೆ ಚುನಾವಣೆಗಳು ಬಂದರೆ ನಾವು ಹೇಳುತ್ತೇವೆ. ನೋಡಪ್ಪ, ನಮ್ಮ ತಾಲ್ಲೂಕು ಹಾಳಾಗುವುದಕ್ಕೆ ಇಂತಿಂತಹವರು ಕಾರಣ, ಮುಂದೆ ಒಳಗೆ ಬರದ ಹಾಗೆ ನೋಡಿಕೊಳ್ಳಿ ಎಂದು ಹೇಳುವುದಕ್ಕಾಗುತ್ತದೆ. ಇವನ್ನು ಅಲ್ಲಿಗೆ ತೆಗೆದುಕೊಂಡು ಹೋಗುತ್ತೇವೆ. ನಮ್ಮನ್ನೇನು ಮುಟ್ಠಾಳರು ಎಂದು ಮಾಡಿಕೊಂಡಿರಾ? ನಾವು ಇದನ್ನೆ ಮಾಡುತ್ತೇವೆ. ನಾವು ಅದನ್ನೇ ಮಾಡಿಕೊಂಡು ರಾಜಕೀಯದಲ್ಲಿ ಬದುಕಿರುವವರು. ಕ್ಷೇತ್ರ ನನ್ನದಲ್ಲ. ನೀವು ತಿಳಿದುಕೊಂಡಿರಬಹುದು, ಹೊಳೆನರಸೀಪುರ ನಿಮ್ಮದು ಎಂದು. ಇರಬಹುದು, ನೀವು ವ್ಯವಸ್ಥೆ ಮಾಡಿಕೊಂಡಿದ್ದೀರಿ, ಇನ್ನೊಂದು ಐದಾರು ಏಳೆಂಟು election ಏನಾದರೂ ಸೋಲದ ಹಾಗೆ ವ್ಯವಸ್ಥೆ ಮಾಡಿಕೊಂಡಿದ್ದೀರಿ, ಸಂತೋಷ, ಗೆಲ್ಲಿರಿ. ನಾಲ್ಕೈದು ಜನರ ಜೊತೆ ನೀವೊಬ್ಬರು ಶಾಶ್ವತವಾಗಿ ಇಲ್ಲಿರುವಂತಹ ಸ್ಥಿತಿ ಬಂದಿದೆ. ಮಾಡಿಕೊಳ್ಳಿ ನಮಗೆ ಆ ಶಕ್ತಿ

ಇಲ್ಲ. ಪ್ರಕಾಶ್ ಸಾಹೇಬರಿಗೂ ಇಲ್ಲ. ಯಡಿಯೂರಪ್ಪನವರು ಸೋತು ಸಾಕಾಗಿದ್ದಾರೆ. ನಮಗೆ ಆ ಶಕ್ತಿ ಇಲ್ಲ. ಪಾಪ, ಜನಗಳ ಮುಂದೆ ಏನಾದರೂ ಹೇಳುವ ಹಾಗೆ ಮಾಡಿ ಸಾರ್. ಒಳ್ಳೆಯ ಸರ್ಕಾರ ಇತ್ತು. ಕೈ ತುಂಬ ದುಡ್ಡು ಇತ್ತು. ಕ್ಷೇತ್ರಕ್ಕೆ ಎಲ್ಲಾ ಕೆಲಸ ಮಾಡಿದೆವು, ರಾಜ್ಯವೆಲ್ಲಾ ಒಂದೇ ದೃಷ್ಟಿಯಲ್ಲಿ ನಡೆಯಿತು, ಎಲ್ಲ ಕಡೆ ಸಮಗ್ರವಾಗಿ ಅಭಿವೃದ್ಧಿಯಾಯಿತು ಎಂದು ಹೇಳುವ ಹಾಗೆ ಮಾಡಿ. Growthಗೆ ವ್ಯತ್ಯಾಸ ಏನು ಎನ್ನುವುದನ್ನು ನಾನು ನಿನ್ನೆ ಇದನ್ನೇ ಮಾತನಾಡಿದ್ದು. Growth can be at any point, at any range and at any level. But development has to be from the bottom. ಅಭಿವೃದ್ಧಿಗೆ ಹಾಗೂ ಬೆಳವಣಿಗೆಗೆ ಅದೇ ವ್ಯತ್ಯಾಸ. ನಿಮ್ಮ ರಾಜ್ಯ ಅಭಿವೃದ್ಧಿಯಾಗುತ್ತಿಲ್ಲ, ನಾಶವಾಗುತ್ತಿದೆ. Growth ಆಗಿದೆ. Tax ಚೆನ್ನಾಗಿ ಬರುತ್ತಿದೆ. Revenue ಚೆನ್ನಾಗಿ ವಸೂಲಾಗುತ್ತಿದೆ. ಕಂದಾಯ ಚೆನ್ನಾಗಿ ಕಟ್ಟುತ್ತಿದ್ದಾರೆ. ಒಳ್ಳೊಳ್ಳೆಯ ಅಧಿಕಾರಿಗಳೂ ಇದ್ದಾರೆ. ಕದ್ದು ಹೋಗುತ್ತಿರುವ ಮಾಲುಗಳನ್ನು ಹಿಡಿದುಕೊಡುತ್ತಿದ್ದಾರೆ. ಆದರೆ ಬಳಕೆ ಎಲ್ಲಿ ಆಗುತ್ತಿದೆ? Where are you investing that amount? Investment ಆಗಬೇಕು. ಬರೀ expenditure ಆದರೆ ಆಗುವುದಿಲ್ಲ. You are not doing anything at the capital investment level at all. ನಾಳೆ ಈ ರಾಜ್ಯದಲ್ಲಿ ನೀವು ಯಾರಿಗೆ invest ಮಾಡಬೇಕು? ನಮಗೆ, ಹಳ್ಳಿಯಲ್ಲಿರುವ ರೈತರಿಗೆ. ನನ್ನ economic level elevate ಆದಾಗ, ನಾನು ನನ್ನ ಕಾಲಮೇಲೆ ನಿಂತುಕೊಳ್ಳುತ್ತೇವೆ ಹೋಗಯ್ಯ ಯಾರು ನನಗೆ ಹೇಳುತ್ತೀರಿ ಎಂದಾಗ ಅಭಿವೃದ್ಧಿ ಆಗಿದ್ದೀರಿ ಎಂದು ಹೇಳುವುದು. ಅದನ್ನು growth ಎನ್ನುವುದು Volvo busನಲ್ಲಿ ಓಡಾಡಿಬಿಟ್ಟರೆ, airport ಮಾಡಿಕೊಂಡು ಬಿಟ್ಟರೆ, ಎಷ್ಟು ಜನ ನಿಮ್ಮ air portನಲ್ಲಿ ಓಡಾಡಬಹುದು ಎಷ್ಟು ಜನರನ್ನೂ ಓಡಾಡಿಸುತ್ತೀರಿ? ಇನ್ನು ಇದ್ದವರ ಗತಿ ಏನು? What is his purchasing power? ಇವತ್ತು ಹಳ್ಳಿಯಲ್ಲಿ ಒಬ್ಬ ಮನುಷ್ಯ ಮಾನ ಮರ್ಯಾದೆಯಾಗಿ ಜೀವನ ಮಾಡುವುದಕ್ಕೆ ಆಗುತ್ತದೆಯಾ? ಅಕ್ಕಿ ಒಂದು ಕೊಟ್ಟುಬಿಟ್ಟಿರಿ. ಬೇಳೆ ಎಲ್ಲಿಂದ ತಂದು ಕೊಡುತ್ತೀರಿ? ಬೆಲ್ಲ ಎಲ್ಲಿಂದ ತಂದುಕೊಡುತ್ತೀರಿ? ಇವತ್ತು ಬೇಳೆಗೆ rate ಎಷ್ಟು? ಒಂದು ಕೆಜಿ ಬೇಳೆಗೆ 65 ರಿಂದ 70 ರೂಪಾಯಿ, ಅದು ನಿಮಗೆ ಗೊತ್ತಿರಬೇಕು. ಅವನು ಸಾಂಬಾರಿಗೆ ಬೇಳೆಯನ್ನು ಹೇಗೆ ಕೊಂಡುಕೊಳ್ಳುತ್ತಾನೆ? ಅವನು ನೀವು ಕೊಟ್ಟಿರುವ ಅಕ್ಕಿ ಜೊತೆ ತಿನ್ನುವುದಕ್ಕೆ ಏನು ಕೊಂಡುಕೊಳ್ಳುತ್ತಾನೆ? oil ಹೇಗೆ ಕೊಳ್ಳುತ್ತಾನೆ? ಇದೆಲ್ಲಾ ಆಗುವವರೆಗೆ ನೀವು ರಾಜ್ಯವನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಹೋಗಿಬಿಟ್ಟಿದ್ದೇವೆ, ಜನ ಮೆಚ್ಚಿದ್ದಾರೆ, ಜನ ಮೆಚ್ಚಿದ್ದಾರೆ ಎಂದು ಆ ಭ್ರಮೆಯಲ್ಲಿ

ಬದುಕುವುದನ್ನು ದಯುಮಾಡಿ ಬಿಟ್ಟುಬಿಡಿ. ಜನ ಯಾರನ್ನು ಮೆಚ್ಚಿಲ್ಲ. ಮೂಗರಾಗಿಬಿಟ್ಟಿದ್ದಾರೆ. ಸುಮ್ಮನೆ ಇದ್ದಾರೆ. ನೀವು 4% ಎಂದರೂ ಸುಮ್ಮನೆ ಇರುತ್ತಾರೆ, ನೀವು 6% ಎಂದರೂ ಸುಮ್ಮನೆ ಇರುತ್ತಾರೆ. ನೀವು waive ಮಾಡಿದ್ದೇವೆ ಎಂದರೂ ಸುಮ್ಮನೆ ಇರುತ್ತಾರೆ, waive ಮಾಡಿಲ್ಲ ಎಂದರೂ ಸುಮ್ಮನೆ ಇರುತ್ತಾರೆ. ಸಾಲ ಕೊಡದೇ ಇದ್ದರೂ ಸುಮ್ಮನೆ ಇರುತ್ತಾರೆ. ಯಾರು ರೊಚ್ಚಿಗೆ ಎದ್ದಿಲ್ಲವಲ್ಲ. ಇಡೀ ಕಾರೀಫ್ ಲೋನ್ ಒಬ್ಬರಿಗೂ ಕೊಟ್ಟಿಲ್ಲ. ನಾನು, ಮಾನ್ಯ ವಾಟಾಳ್, ಮಾನ್ಯ ಶ್ರೀರಾಮರೆಡ್ಡಿಯವರು ಇಲ್ಲಿ ನಿಂತುಕೊಂಡಾಗ ನಾನು ದೊಡ್ಡವರ ಪರವಾಗಿಲ್ಲ. 25 ಸಾವಿರ ರೂಪಾಯಿಯೊಳಗೆ ಸಾಲ ಮಾಡಿದವರಿಗೆ ಮಾತ್ರ ನಾನು ರಿಯಾಯಿತಿ ಕೊಡುತ್ತೇನೆ ಎಂದು ಹೇಳಿದಿರಿ ಸನ್ಮಾನ್ಯ ಯಡಿಯೂರಪ್ಪನವರೇ, 25 ಸಾವಿರದೊಳಗೆ ಸಾಲ ತೆಗೆದುಕೊಂಡವರಿಗೆ ತಾವೇನು ಹಣ ತುಂಬಬೇಕೆಂದು ಇದ್ದೀರಿ, ಅವರ್‍ಯಾರಿಗೂ ಈ ವರ್ಷ ಸಾಲ ಸಿಕ್ಕಿಲ್ಲ. you have killed him. ತಾವು ಅವರನ್ನು ಪರೋಕ್ಷವಾಗಿ ಕೊಲ್ಲುತ್ತಿದ್ದೀರಿ. ಈ ವರ್ಷದ ಮಟ್ಟಿಗೆ ಕೊಂದು ಬಿಟ್ಟಿದ್ದೀರಿ. DCC Bankನವರನ್ನು, Apex Bankನವರನ್ನು ಕರೆಸಿ ಎಂದು ಹೇಳುವುದಕ್ಕೂ ನಿಮಗೆ ದಮ್ಮಿಲ್ಲ. ನಿಮ್ಮ ಹತ್ತಿರ ಕೊಡುವುದಕ್ಕೂ ಪೈಸೆ ಇಲ್ಲ. ಈ ಸ್ಥಿತಿಯಲ್ಲಿ ನೀವೇನು ಸರ್ಕಾರ ನಡೆಸುತ್ತಿದ್ದೀರಿ, do you fit to call yourself a very good Government? ಮಾನ್ಯ ಅಧ್ಯಕ್ಷರೆ, ನಾನು ಬಹಳ ನೊಂದು ಹೇಳುತ್ತಿದ್ದೇನೆ. ಈ ಸರ್ಕಾರ ಏನು ಬೆನ್ನು ತಟ್ಟಿಕೊಂಡು ಭಾಷಣ ಮಾಡುತ್ತಾರೆ. ಪೈಪೋಟಿಗೆ ಮಾಡುತ್ತಾರೆ. ರೇವಣ್ಣನವರ ಪಾರ್ಟಿಯವರು ಹೋಗುವುದಕ್ಕೆ ಮೊದಲು ಯಡಿಯೂರಪ್ಪನವರ ಪಾರ್ಟಿಯವರು ಹೋಗಬೇಕು. ಯಡಿಯೂರಪ್ಪನವರು ಹೋಗುವುದಕ್ಕೆ ಮೊದಲೇ ರೇವಣ್ಣ ಜನಗಳ ಹತ್ತಿರ ಹೋಗಬೇಕು ಎಂದು. ನಮ್ಮ ಶಬ್ದ ಪ್ರಮಾಣ. ಸೀತೆ ಪತಿವ್ರತೆ, ಸೀತೆ ಪತಿವ್ರತೆ ಹೇಳಿ, ಹೇಳಿ, ಯಾರೂ ಕೂಡ ನಮ್ಮ ಹೆಂಗಸರು ಪತಿವ್ರತೆ ಅಲ್ಲವೆ? ಎಂದು ಪ್ರಶ್ನೆ ಮಾಡಿ ಯಾರೂ ಕೇಳಲಿಲ್ಲವಲ್ಲ. ನಮ್ಮನ್ನು ಯಾರಾದರೂ ಕೇಳಿ ಪತಿವ್ರತೆ ಹೆಸರು ಹೇಳು ಎಂದರೆ ಏನು ಹೇಳುತ್ತೇವೆ. ಸೀತೆ ಪತಿವ್ರತೆ ಎಂದು ಹೇಳುತ್ತೇವೆ. ನಿಮ್ಮನೆಯವರು ಎಂದರೆ ನಮಗೆ ಯೋಚನೆ ಮಾಡುವುದಕ್ಕೆ ಗೊತ್ತೇ ಇಲ್ಲ. ಹಾಗೆ ಇವರಿಬ್ಬರೂ ಜನರನ್ನು ನಂಬಿಸುವುದಕ್ಕೆ ಹೊರಟಿದ್ದಾರೆ. ನಾನು ಪತಿವ್ರತೆ, ನಾನು ಪತಿವ್ರತೆ ಎಂದು ಹೇಳಿ...

ಶ್ರೀ ಕೆ. ಶ್ರೀನಿವಾಸ ಗೌಡ :– ಅಜ್ಜಿಗಳಾದ ಮೇಲೆ ಎಲ್ಲರೂ ಪತಿವ್ರತೆಗಳೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಅಜ್ಜಿಗಳಾದ ಮೇಲೆ ಪತಿವ್ರತೆಗಳಲ್ಲ. ಅವಳು ಗರತಿ ನಿಮಗೆ ಗರತಿಗೂ ಪತಿವ್ರತೆಗೂ ವ್ಯತ್ಯಾಸ ಗೊತ್ತಿಲ್ಲವಲ್ಲ. ಅಂತಹ

ಒಂದು ಬಹಳ ಕೆಟ್ಟ ಸ್ಥಿತಿಯಲ್ಲಿ ಸರ್ಕಾರ ಹೋಗುತ್ತಿದೆ. ಒಳ್ಳೆಯ ಸಂಪದ್ಭರಿತವಾಗಿರುವಂತಹ ಕಾಲದಲ್ಲಿ ಹಣವನ್ನು ಯತೇಚ್ಛವಾಗಿ ಪೋಲು ಮಾಡುತ್ತಾರೆ ಎನ್ನುವಂತಹ ನೋವು ನಮಗೆ ಆತ್ಮದಲ್ಲಿದೆ. ನಾವು ಟೀಕೆಗೋಸ್ಕರ ಟೀಕೆ ಮಾಡುತ್ತಿಲ್ಲ. ತಾವು ಎಚ್ಚೆತ್ತುಕೊಳ್ಳಬೇಕು. ಏನಾದರೂ ಮಾಡಿ ರಾಜ್ಯವನ್ನು ಅಭಿವೃದ್ಧಿಯಾಗುವ ಕಡೆ ತೆಗೆದುಕೊಂಡು ಹೋಗಬೇಕು. ರಸ್ತೆಗಳು, ತಾವೇ ಹೇಳೀಬಿಟ್ಟಿದ್ದೀರಿ, ನಿಮ್ಮ economic growthಗೆ ಮಾರ್ಗಗಳು ಮುಖ್ಯ ಎಂದು ಹೇಳಿದ್ದೀರಿ. ಆ ರಸ್ತೆಗಳನ್ನು ಮಾಡಬೇಕಾದರೆ ನೀವು collegue ಗೆ ಹೇಳಬೇಕು. Party, ಜಾತಿ ಎಲ್ಲಾ ಬಿಟ್ಟುಬಿಡಪ್ಪ, ಇಡೀ ಕರ್ನಾಟಕ ನಿಮ್ಮ ಜಾತಿ ಎಂದು ತಿಳಿದುಕೊಳ್ಳಪ್ಪ ಎಂದು ರೇವಣ್ಣನವರಿಗೆ ಒಂದು advice ಮಾಡಿ ಯಡಿಯೂರಪ್ಪನವರೆ. ಕೇಳಲ್ಲ ನೀವೇ ಅವರಿಗೆ ಹೆದರಿಕೊಂಡು ಇದ್ದೀರಿ. ಆದರೆ ಹೇಳುವುದು ಹೇಳಿ, ದಿನಾಂಕ you are the Finance Minister ಆಮೇಲೆ ಏನಾಗುತ್ತದೆ ನೋಡೋಣ. ಇಲ್ರಿ, ರೇವಣ್ಣ ಹೀಗೆಲ್ಲಾ ಮಾಡಬಾರದು ಎಂದು ಒಂದು advice ಮಾಡಿ. ಬೇರೆಯವರಿಗೂ ಒಂದೊಂದು ಮಾತು ಕಳುಹಿಸಿ ಎಂದು ಹೇಳಿ. ನಾನು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಿದ್ದು ಸವದಿಯವರು ಮಾತನಾಡಿ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಮಾತನಾಡುವಾಗ ಮಾನ್ಯ ಯಡಿಯೂರಪ್ಪನವರು ಕೋಲಾರ ಜಿಲ್ಲೆಯಲ್ಲಿ 100% drip Irrigation ಸಂಬಂಧಪಟ್ಟ ಮಾಹಿತಿ ಬಗ್ಗೆ ನಾನು ಅಷ್ಟೆ ಹೇಳುವುದು.

ಅಧ್ಯಕ್ಷರು : ನಿನ್ನೆ ಸಾಕಷ್ಟು ಮಾತನಾಡಿದ್ದೀರಿ.

ಶ್ರೀ ಕೆ. ಶ್ರೀನಿವಾಸ ಗೌಡ : ನಿನ್ನೆ ಇದರ ಬಗ್ಗೆ ಬಂದು ತಾವು ಹೇಳಿ ನಾವು ಹಣ ಕೊಡುತ್ತೇವೆಂದು ಹೇಳಿದ್ದಾರೆ. ನಿನ್ನೆ ಅವರು ಹೇಳಿದ್ದಾರೆ.

ಅಧ್ಯಕ್ಷರು : ಮುಂದಿನ ಬೆಂಚಿನಲ್ಲಿ ಯಾರ್ಯಾರು ಇದ್ದೀರಿ, ಅವರದ್ದೇ ಆಗಿಹೋಯಿತು.

ಶ್ರೀ ಕೆ. ಶ್ರೀನಿವಾಸಗೌಡ : ನಿನ್ನೆ ಅವರು ಹೇಳಿದ್ದಾರೆ. ಇಷ್ಟೆ ಹೇಳುವುದು, ನಾನು ಬೇರೆ ಏನೂ ಮಾತನಾಡುವುದಿಲ್ಲ.

ಅಧ್ಯಕ್ಷರು : ಹೇಳಿ, ಒಂದು ನಿಮಿಷದಲ್ಲಿ ಮುಗಿಸಿ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೆ. ನಿನ್ನೆ ಮಾತನಾಡುವಾಗ drip irrigationಗೆ ಕೋಲಾರ ಜಿಲ್ಲೆಯಲ್ಲಿ ಇನ್ನು ಹಣ ಬಿಡುಗಡೆಯಾಗಿಲ್ಲವೆಂದು ಹೇಳಿದ್ದೆನು. ಮೊನ್ಯ ಯಡಿಯೂರಪ್ಪನವರು ನಾನು ಪೈಸೆ ಸಮೇತ release

ಮಾಡಿದ್ದೇನೆ ಎಂದು ಹೇಳಿದರು. 2006-07ರ ಮಾರ್ಚ್ ಅಂತ್ಯಕ್ಕೆ ಒಂದು ರೂಪಾಯಿ ಬಾಕಿ ಇದ್ದರೆ ಹೇಳಿ ನಾನು ನಿಮಗೆ ಉತ್ತರ ಕೊಡುತ್ತೇನೆಂದು ಹೇಳಿದರು. ನಮ್ಮ ಕೋಲಾರ ಜಿಲ್ಲೆಗೆ 2.276 ಅರ್ಜಿಗಳು ಬಂದಿವೆ. ಅದರಲ್ಲಿ ಸಹಾಯಧನವನ್ನು 1,206 ಅರ್ಜಿಗಳಿಗೆ ಸಹಾಯಧನ ಕೊಟ್ಟಿರುವುದು ಎಷ್ಟೆಂದರೆ 4,94,10,000 ರೂಪಾಯಿ. ಇನ್ನು 1,070 ಅರ್ಜಿಗಳು ಉಳಿದಿವೆ. ನಮಗೆ 2006-07ಕ್ಕೆ ಇನ್ನು ಬೇಕಾಗಿರುವ ಅನುದಾನ 4,65,58,000 ರೂಪಾಯಿಗಳು. 2007-2008ನೇ ಸಾಲಿಗೆ ಇನ್ನು 274 ಅರ್ಜಿಗಳು ಬಂದಿವೆ. ಇದಕ್ಕೆ ಬೇಕಾಗಿರುವ ಹಣ 1,26,000,00. Action planನಲ್ಲಿ ಇದಕ್ಕೆ 246.88 ನಮ್ಮ ಜಿಲ್ಲೆಯದು ಒಂದು ಮಾತ್ರ ಕಳುಹಿಸಿದಾರೆ. ನೀವು ನಿನ್ನೆ ಚೆನ್ನಾಗಿ ಮಾತನಾಡಿದಿರಿ. ಹೋದ ವರ್ಷದ್ದು ಇಷ್ಟು ಹಣ ಕೊಡಬೇಕು. ಇನ್ನು ಹಣ ಕೊಟ್ಟಿಲ್ಲ. ಆ ಹಣವನ್ನು ಬಿಡುಗಡೆ ಮಾಡುವುದನ್ನು ಹೇಳಿಬಿಡಲಿ.

ಅಧ್ಯಕ್ಷರು : ಆಯಿತು, ಎಲ್ಲಾ ನಿಮ್ಮದೇ ಆಗಿಹೋಯಿತು. ಇಲ್ಲಿ ಯಾರೂ ಬೇರೆಯವರು ಮಾತನಾಡುವ ಹಾಗೆ ಇಲ್ಲ. ಕೊಡುತ್ತಾರೆ ಕುಳಿತುಕೊಳ್ಳಿ.

ಶ್ರೀ ಕೆ. ಶ್ರೀನಿವಾಸ ಗೌಡ : ನಿನ್ನೆ ಮಾನ್ಯ ಯಡಿಯೂರಪ್ಪನವರು ಹೇಳಿದರು. ನೀವು ನಾಳೆ ಒಂದು ಮಾತು ಹೇಳಿ ನಾನು ಹೇಳುತ್ತೇವೆಂದು ಹೇಳಿದ್ದರು.

ಅಧ್ಯಕ್ಷರು : ಇದು ಏನು? ಈಗ ನಾನು ಮಾನ್ಯ ಸದಸ್ಯರನ್ನು ಮಾತನಾಡಲು ಕರೆದಿದ್ದೇನೆ. ಅವರು ಮಾತನಾಡುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಮಾತು ಕೊಟ್ಟಿದ್ದರು. ಅವರು ಉತ್ತರ ಹೇಳಲಿ.

ಅಧ್ಯಕ್ಷರು : ನಾನು ಅವರನ್ನು ಎಬ್ಬಿಸಿ ನಿಲ್ಲಿಸಿ, ಮಾತನಾಡಿ ಎಂದು ಹೇಳುವುದಕ್ಕೆ ಆಗುತ್ತದಾ?

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಅವರು ಮಾತು ಕೊಟ್ಟಿದ್ದರು.

ಅಧ್ಯಕ್ಷರು : ಮಾತು ಕೊಡುತ್ತಾರೆ. ಅವರು ಉತ್ತರ ಕೊಡುವಾಗ ಹೇಳುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಯಡಿಯೂರಪ್ಪನವರೆ, ನಾನು ಕೇಳಿದ ಪ್ರಶ್ನೆಗೆ ನೀವು react ಮಾಡುತ್ತೀರಾ ಇಲ್ಲವಾ?

ಅಧ್ಯಕ್ಷರು : ಮಾನ್ಯ ಸಿದ್ದು ಸವದಿಯವರೆ, ಮಾತನಾಡಿ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಯಡಿಯೂರಪ್ಪನವರಿಗೆ ಇವತ್ತು ಕಿವಿಯೇ ಕೇಳಿಸಲಿಲ್ಲ, ಪಾಪ.

ಅಧ್ಯಕ್ಷರು : ಅವರು ಉತ್ತರ ಕೊಡುವಾಗ ನಿಮಗೆ ಹೇಳುತ್ತಾರೆ.

ಶ್ರೀ ಕೆ. ಶ್ರೀನಿವಾಸ ಗೌಡ : ಅವರು ನಿನ್ನೆ ಹೇಳುವಾಗ ಬಹಳ ಜೋರಾಗಿ ಒಂದು ರೂಪಾಯಿ ಬಾಕಿಯಿಲ್ಲವೆಂದು ಹೇಳಿದರು. ಇವತ್ತು ಬಾಕಿ ಇರುವುದನ್ನು ಹೇಳಿದರೆ, ಉತ್ತರ ಕೊಡುವುದಕ್ಕೆ ಆಗಲಿಲ್ಲ. ಬರೀ ರೈಲು ಬಿಡುವುದರಲ್ಲಿ ಮಾನ್ಯ ಯಡಿಯೂರಪ್ಪನವರು ಬಹಳ ಮುಖ್ಯವಾಗಿ ಇದ್ದಾರೆ.

ಅಧ್ಯಕ್ಷರು : ಮಾನ್ಯ ಸಿದ್ದು ಸವದಿಯವರೆ, ಮಾತನಾಡಿ.

ಶ್ರೀ ಸಿದ್ದು ಸವದಿ (ಜಮಖಂಡಿ) : ಮಾನ್ಯ ಅಧ್ಯಕ್ಷರೆ, ನಮ್ಮ ಸಮ್ಮಿಶ್ರ ಸರ್ಕಾರ ಈ ರಾಜ್ಯದಲ್ಲಿ, ಹಿಂದೆ ಯಾವ ಸರ್ಕಾರವೂ ಮಾಡದಂಥ ಅಭಿವೃದ್ಧಿ ಕೆಲಸವನ್ನು ಮಾಡಿದಂಥ ಉದಾಹರಣೆಯನ್ನು ನಾವು ನೂರಾರು ಕೊಡಬಹುದು. ಆ ರೀತಿಯಾಗಿ ಈ ಸರ್ಕಾರದ ಆಡಳಿತದಿಂದ ನಮ್ಮ ರಾಜ್ಯದ ಜನತೆ ಬಹಳ ನೆಮ್ಮದಿಯಾಗಿ ಇದ್ದಾರೆ. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ನಾನು ಒಂದೇ ಒಂದು ಉದಾಹರಣೆಯನ್ನು ಹೇಳಬಹುದು. ಇದಕ್ಕೆ ಜವಳಿ ಇಲಾಖೆಯನ್ನು ತೆಗೆದುಕೊಂಡರೆ, ಇಂದಿನ ಸರ್ಕಾರವು ಮಾಡದಂಥ ಬಡ್ಡಿ ಮನ್ನಾ, ಸಾಲಾ ಮನ್ನಾ ಹಾಗೂ ವಿದ್ಯುತ್ ಸಬ್ಸಿಡಿ, ಇಂಥಾ ಸವಲತ್ತುಗಳನ್ನು ನೇಕಾರರಿಗೆ ಒದಗಿಸಿಕೊಟ್ಟಿದ್ದರಿಂದ, ಈ ರಾಜ್ಯದ ನೇಕಾರರು ನೆಮ್ಮದಿಯ ನಿಟ್ಟುಸಿರು ಬಿಡುವಂಥಾ ಸಂಗತಿಯನ್ನು ನಾವು ಇವತ್ತು ಕಾಣುತ್ತಿದ್ದೇವೆ. ಆ ರೀತಿಯಾಗಿರುವಂಥ ನೇಕಾರರಿಗೆ ಸವಲತ್ತುಗಳನ್ನು ಕೊಟ್ಟುರುವಂಥಾದ್ದು, ಕಡು ಬಡವ ನೇಕಾರನಿಗೂ ಸಹ ಮುಟ್ಟಬೇಕಾದ ವಿಚಾರದಲ್ಲಿ, ನೇಕಾರರ ಸಮೂಹದಲ್ಲಿ ಕಡು ಬಡತನದಲ್ಲಿ ಜೀವನ ನಡೆಸುವ ನೇಕಾರನೆಂದರೆ ಕೈ ಮಗ್ಗ ನೇಕಾರ ಆಗಿದ್ದಾನೆ. KHDCಯಲ್ಲಿ ಕೆಲಸ ಮಾಡುವಂಥ ನೇಕಾರನಾಗಿದ್ದಾರೆ. ಆದರೆ ಸರ್ಕಾರದ ಸಾಲ ಮನ್ನಾ ಆಗಲಿ, ಬಡ್ಡಿ ಮನ್ನಾ ಆಗಲಿ, ವಿದ್ಯುತ್ ರಿಯಾಯಿತಿಯಾಗಲಿ, ಯಾವ ಸವಲತ್ತುಗಳು ಈ ಕಡು ಬಡ ನೇಕಾರರಿಗೆ ಒಂದು ನಯಾ ಪೈಸೆಯ ಸೌಲಭ್ಯ ಸಿಕ್ಕಿಲ್ಲ. ಅದಕ್ಕಾಗಿ ನಾನು ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಯಾರಿಗಾಗಿ ಈ ಯೋಜನೆಯನ್ನು ತರಲಾಗಿದೆಯೋ, ಅಂಥ ಕಡು ಬಡತನದಲ್ಲಿರುವಂಥ ಕೈ ಮಗ್ಗ ನೇಕಾರರಿಗೂ ಸಹಿತ ಈ ಸೌಲಭ್ಯಗಳು ಸಿಗುವಂತೆ ಆಗಬೇಕೆಂಬ ವಿನಂತಿಯನ್ನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇನ್ನು ಕೃಷಿ ಇಲಾಖೆ ಬಗ್ಗೆ ಬಹಳಷ್ಟು ವಿಚಾರಗಳನ್ನು ನಿನ್ನೆ ದಿವಸ ಹಿರಿಯ ಸದಸ್ಯರುಗಳು ಮಾತನಾಡಿದರು. ಅದರಲ್ಲೂ ವಿಶೇಷವಾಗಿ

ಬರಗಾಲದ ಬವಣೆಯಿಂದ ನಮ್ಮ ರಾಜ್ಯ ತತ್ತರಿಸುವುದನ್ನು ನಿಭಾಯಿಸಬೇಕು. ನಮ್ಮ ರಾಜ್ಯದಲ್ಲಿ ಸಿಗುವಂಥ ನೀರನ್ನು ಸದ್ಬಳಕೆ ಮಾಡುವ ಬಗ್ಗೆ ವೈಜ್ಞಾನಿಕವಾಗಿ ಉಪಯೋಗ ಮಾಡುವುದರ ಮೂಲಕ ಇಡೀ ರಾಜ್ಯಕ್ಕೆ ಕುಡಿಯುವ ನೀರನ್ನು ಕೊಡಬಹುದು, ನೀರಾವರಿಯನ್ನು ಮಾಡಬಹುದೆಂಬ ವಿಚಾರವನ್ನು ನಮ್ಮ ಮಾಜಿ ಸಚಿವರಾದ ಶ್ರೀನಿವಾಸ ಗೌಡರು ಬಹಳ ಸುಂದರವಾಗಿ ಮಾತನಾಡಿದ್ದಾರೆ. ನಾನು ಆಗಲೇ ಒಂದೆರಡು ಮಾತುಗಳನ್ನು ಹೇಳಿದ್ದೇವೆ. ಗುಜರಾತ್ ರಾಜ್ಯದಂಥ ಒಂದೆರಡು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅದೇ ಪ್ರಕಾರ ನಮ್ಮ ರಾಜ್ಯದಲ್ಲಿ ಕೃಷ್ಣ ನದಿ ಪ್ರತಿ ವರ್ಷ ಮಳೆಗಾಲದಲ್ಲಿ ಸುಮಾರು ಎರಡು ತಿಂಗಳುಗಳಿಂದ ತುಂಬಿ ಹರಿಯುತ್ತಾ ಇದೆ. ಈ ನದಿ ತುಂಬಿ ಹರಿದು ಯಥೇಚ್ಛವಾಗಿ ನೀರು ಸಮುದ್ರವನ್ನು ಸೇರುತ್ತಾ ಇದೆ. ಆ ನದಿಯು ನೀರಿಗೆ ರಾಜ್ಯ ರಾಜ್ಯಗಳು ಹೊಡೆದಾಡುವ ಸ್ಥಿತಿಯನ್ನು ನೋಡಿದರೆ, ಕೃಷ್ಣಾನದಿ ದಂಡೆಯಲ್ಲಿರುವಂಥಾ ರೈತರು ನಗಬೇಕೋ, ಅಳಬೇಕೋ, ಒಂದು ಅರ್ಥವಾಗುವುದಿಲ್ಲ. ನಮ್ಮ ಆಲಮಟ್ಟಿ ಡ್ಯಾಮ್‌ನ ಇವತ್ತಿನ ಕೆಪಾಸಿಟಿ 173 ಟಿ.ಎಂ.ಸಿ. ಆದರೆ ಮಳೆಗಾಲದಲ್ಲಿ ನದಿಯಲ್ಲಿ ನೀರು ಹರಿದು ಹೋಗುವುದನ್ನು ನೋಡಿದರೆ, ಒಂದು ಲಕ್ಷ ಕ್ಯುಸೆಕ್ಸ್‌ನಿಂದ ಐದು ಲಕ್ಷ ಕ್ಯುಸೆಕ್ಸ್‌ನವರೆಗೆ ನೀರು ಆಲಮಟ್ಟಿ ಡ್ಯಾಮ್‌ನಿಂದ ಹರಿದು ಹೋಗುವ ಪ್ರಸಂಗವಿದೆ. ನಾವು ಕಡಿಮೆ ಪ್ರಮಾಣದ ನೀರನ್ನು ಹಿಡಿದುಕೊಂಡರೂ, ಒಂದು ಲಕ್ಷ ಕ್ಯೂಸೆಕ್ಸ್ ನೀರನ್ನು ಹಿಡಿದುಕೊಂಡರೂ ದಿವಸಕ್ಕೆ ಹತ್ತಾರು ಟಿ.ಎಂ.ಸಿ. ನೀರು ಹರಿದು ಹೋಗುತ್ತಾ ಇದೆ. ನಮ್ಮ ಆಲಮಟ್ಟಿಗೆ ಬೇಕಾದ ನೀರು 10.15 ದಿವಸಗಳಲ್ಲಿ ಡ್ಯಾಮ್ ತುಂಬಿ ಹೋಗುತ್ತಾ ಇದೆ. ಉಳಿದ ನೀರು ಯಥೇಚ್ಛವಾಗಿ ಹರಿದು ಸಮುದ್ರವನ್ನು ಸೇರುತ್ತಾ ಇರುವಂಥದ್ದನ್ನು ನಾವು ತಡೆದರೆ. ಅಥವಾ ವೈಜ್ಞಾನಕವಾಗಿ ಲೆಕ್ಕ ಮಾಡಿ, ಯಾವ ರೀತಿಯಾಗಿ ಅದನ್ನು ಸದ್ಬಳಕೆ ಮಾಡಬೇಕೆನ್ನುವಂಥದ್ದರ ಬಗ್ಗೆ ನಮ್ಮ ರಾಜ್ಯದಲ್ಲಿ ಯೋಜನೆ ಮಾಡುವಂಥ ವ್ಯಕ್ತಿಗಳನ್ನು ಕೇಳಿಕೊಂಡು, ಈ ನೀರನ್ನು ಸದ್ಬಳಕೆ ಮಾಡಿಕೊಂಡರೆ ಇಡೀ ರಾಜ್ಯಕ್ಕೆ ಕೃಷ್ಣಾನದಿಯಿಂದ ನೀರನ್ನು ಕೊಡಬಹುದು. ನಮ್ಮ ಕರ್ನಾಟಕ ರಾಜ್ಯಕ್ಕೆ ಕೃಷ್ಣಾನದಿ ನೀರು ಒಂದೇ ಸಾಕು. ನಮ್ಮ ರಾಜ್ಯದಲ್ಲಿ ನೀರಾವರಿಯನ್ನು ಮಾಡುವುದಕ್ಕೆ, ಕುಡಿಯುವ ನೀರನ್ನು ಕೊಡುವುದಕ್ಕೆ ಅಂಥ ಯೋಜನೆಗಳನ್ನು ತರುವಂಥ ಕೆಲಸವನ್ನು ಆದ್ಯತೆಯ ಮೇಲೆ ತರುವಂಥದ್ದನ್ನು ಮಾಡಬೇಕು. ನಮ್ಮ ರೈತರಿಗೆ ಇವತ್ತು ನಮ್ಮ ಸರ್ಕಾರ ಸಾಲ ಮನ್ನಾ ಮಾಡಿ, ಬಡ್ಡಿ ಮನ್ನಾ ಮಾಡಿದೆ, ಸುಸ್ತಿ ಸಾಲ, ಮಧ್ಯಮಾವಧಿ ಸಾಲ, ದೀರ್ಘಾವಧಿ ಸಾಲ ಎಲ್ಲಾ ಸಾಲಗಳ ಬಡ್ಡಿಯನ್ನು ಮನ್ನಾ ಮಾಡಿ, ರೈತರು ನೆಮ್ಮದಿಯ ನಿಟ್ಟುಸಿರು ಬಿಡುವ ವಾತಾವರಣ ನಿರ್ಮಾಣವಾಗಿದೆ. ಹಿಂದೆ ಯಾವ ಸರ್ಕಾರವೂ ಮಾಡಲಿಲ್ಲ. ಆ ರೀತಿ ರೈತರ ಬಗ್ಗೆ ಕಳಕಳಿ ಇರುವಂಥ

ನಮ್ಮ ಸರ್ಕಾರ, ಯಥೇಚ್ಛ ಸವಲತ್ತುಗಳನ್ನು ನಮ್ಮ ರೈತರು ಕಷ್ಟದಲ್ಲಿದ್ದಾರೆ. ಅವನು ಹೆಂಡತಿ ಮಕ್ಕಳನ್ನು ಕರೆದುಕೊಂಡು ಭೂಮಿಯಲ್ಲಿ ದುಡಿದರೂ ಸಹಿತ, ಸಾಲದಿಂದ ಋಣಮುಕ್ತನಾಗಿಲ್ಲವೆಂಬ ದೃಷ್ಟಿಯಿಂದ ಈ ಸಾಲ ಮನ್ನಾ, ಬಡ್ಡಿ ಮನ್ನಾ ಸೌಲಭ್ಯವನ್ನು ಕೊಡಲಾಗಿದೆ. ಇದೇ ರೀತಿ ರಾಜ್ಯದಲ್ಲಿ ಅನೇಕ ಸವಲತ್ತುಗಳನ್ನು ರಾಜ್ಯದಲ್ಲಿ ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ, ಇದನ್ನು ಯಾವ ಸರ್ಕಾರವೂ ಮಾಡಿರಲಿಲ್ಲ. ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆರವರ ಸರ್ಕಾರ ಇದ್ದಾಗ, ನೂರು ರೂಪಾಯಿಗಳನ್ನು ಮಾಡಿದ್ದರೆಂದು ಕೇಳಿದ್ದೇವೆ. ಅದರ ನಂತರದ ಸರ್ಕಾರಗಳು ಅಸಹಾಯಕರ ಸಹಾಯಕ್ಕೆ ಬರಲಿಲ್ಲ. ನಮ್ಮ ಸರ್ಕಾರ ಬಂದ 18 ತಿಂಗಳೊಳಗೆ ನೂರು ರೂಪಾಯಿಗಳಿದ್ದದ್ದನ್ನು 400 ರೂಪಾಯಿಗಳಿಗೆ ಮಾಡುವ ಮುಖಾಂತರ ಆ ಬಡ ಜನರ, ಅಸಹಾಯಕ ಜನರಿಗೆ ಸ್ವಾಭಿಮಾನದಿಂದ ಬದುಕುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಸರ್ಕಾರ ಯಾವುದಾದರೂ ಇದ್ದರೆ, ಅದು ನಮ್ಮ ಸಮ್ಮಿಶ್ರ ಸರ್ಕಾರವಾಗಿದೆ. ಇದರಿಂದ ಇನ್ನೊಂದು ಕಳಕಳಿಯ ಮನವಿ ಏನೆಂದರೆ, ಇದರಿಂದ ಮತ್ತೊಂದು ದುರಂತವಾಗುವುದಕ್ಕೆ, ಈ ರಾಜ್ಯದ, ಈ ದೇಶದ, ಅಭಿವೃದ್ಧಿಗೆ ದುರಂತವಾಗಲಿದೆ. ಈ ರೀತಿ ನಾವು ಸವಲತ್ತುಗಳನ್ನು ಕೊಡುವುದರ ಮೂಲಕ, ಇಲ್ಲಿ ಹುಲಿ ಮರಿಗಳಿಗೆ ಬೇಟೆಯಾಡುವುದನ್ನು ನಾವು ಕಲಿಸುವುದಿಲ್ಲ. ಅದು ಬೇಟೆಯಾಡಿದ್ದನ್ನು ತಿನ್ನುವುದು ಕಲಿಸುವುದರಿಂದ, ನಮ್ಮ ಸಾಮರ್ಥ್ಯ, ನಮ್ಮ ಶಕ್ತಿ ವ್ಯರ್ಥವಾಗುತ್ತಾ ಹೋಗುತ್ತಿರುವಂಥದ್ದನ್ನು ನಾವು ಕಾಣುತ್ತಿದ್ದೇವೆ. ಅದಕ್ಕಾಗಿ ನಮ್ಮ ರೈತರಿಗೆ ಅವನ ಭೂಮಿಗೆ ನೀರು ಕೊಡಿ, ಅವನಿಗೆ ವಿದ್ಯುತ್ ಸಪ್ಲೈ ಮಾಡಿ, ಅವನು ಬೆಳೆದಂಥ ಬೆಳೆಗೆ ಯೋಗ್ಯವಾದ ಬೆಲೆಯನ್ನು ಕೊಟ್ಟರೆ ಸಾಕು. ಅವನಿಗೆ ಇನ್ನು ಏನು ಕೈಯೆತ್ತಿ ಕೊಡುವುದು ಬೇಡ. ಅವನಲ್ಲಿ ದುಡಿಯುವ ಸಾಮರ್ಥ್ಯವನ್ನು ಬೆಳೆಸಿ, ಅವರು ಸ್ವಾಭಿಮಾನದಿಂದ ಬದುಕುವುದಕ್ಕೆ, ಅವನ ಸಾಮರ್ಥ್ಯಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಸಾಕು. ಅವನಿಗೆ ಸಹಾಯ, ಸವಲತ್ತುಗಳನ್ನು ಕೊಡುವುದರ ಮುಖಾಂತರ, ಈ ರಾಜ್ಯದ, ಈ ದೇಶದಲ್ಲಿ ಯಥೇಚ್ಛವಾಗಿ ಇರುವಂಥ ಮಾನವ ಶಕ್ತಿಯನ್ನು ನಾವು ನಿಸ್ಸಹಾಯಕರನ್ನಾಗಿ ಮಾಡುತ್ತೇವೆನೋ, ಎಂಬ ಒಂದು ಅಳುಕು ಎಲ್ಲೋ ಒಂದು ಕಡೆ ನಮ್ಮನ್ನು ಕಾಡುತ್ತಾ ಇದೆ. ನಾವು ಇವತ್ತಿನ ದಿವಸ ನೋಡುತ್ತಿದ್ದೇವೆ. ಇವತ್ತು ನಾವು ರೇಷನ್ ಮುಖಾಂತರ ಆಹಾರ ಧಾನ್ಯವನ್ನು ಕೊಡುತ್ತಿದ್ದೇವೆ. ಕೆಲವೊಂದು ಕುಟುಂಬಗಳನ್ನು ನಗರಗಳಲ್ಲಿ, ಹಳ್ಳಿಗಳಲ್ಲಿ, ನೋಡಬಹುದು. ಅವರಲ್ಲಿ ಸಾಮರ್ಥ್ಯವಿದ್ದರೂ ಒಬ್ಬರೂ ಸಹಿತ ಕೆಲಸವನ್ನು ಮಾಡುವುದಿಲ್ಲ. ಯಾವುದೇ ಅಭಿವೃದ್ಧಿ ಕೆಲಸಗಳಾಗಲಿ, ಒಕ್ಕಲುತನದ ಕೆಲಸವಾಗಲಿ, ಇನ್ನಿತರ ಕೆಲಸಗಳನ್ನು ಅವರು ಒಂದು ರೂಪಾಯಿಗಳಿಸುವಂಥ

ಕೆಲಸಗಳನ್ನು ಅವರು ಮಾಡುವುದಿಲ್ಲ. ಅವರಿಗೆ ಸರ್ಕಾರ ಒಂದು ನೂರು ರೂಪಾಯಿಗಳನ್ನು ಕೊಟ್ಟರೆ, ಒಂದು ತಿಂಗಳು ಕುಳಿತುಕೊಂಡು ತಿನ್ನುವುದಕ್ಕೆ ಅಕ್ಕಿಯನ್ನು ಕೊಡುತ್ತಿದೆ, ಗೋಧಿಯನ್ನು ಕೊಡುತ್ತಿದೆ, ಎಲ್ಲವನ್ನು ಕೊಡುವಾಗ ನಾವು ಏಕೆ ದುಡಿಯಬೇಕೆಂಬ ದೃಷ್ಟಿಯಲ್ಲಿ, ಅವರ ಸಾಮರ್ಥ್ಯವನ್ನು ವ್ಯರ್ಥ ಮಾಡಿ, ಅಸಹಾಯಕರಾಗಿ ಅವರು ಬದುಕುವಂಥ ಸ್ಥಿತಿಯನ್ನು ನಾವು ಕಾಣುತ್ತಾ ಇದ್ದೇನೆ. ಅದು ಹೋಗಬೇಕಾದರೆ, ಅವರಿಗೆ ಎಲ್ಲಾ ಸೌಲಭ್ಯವನ್ನು ಒದಗಿಸಿ ಕೊಡುವುದರ ಮುಖಾಂತರ, ಅವರೇ ಖುದ್ದಾಗಿ ಕೆಲಸ ಮಾಡುವಂಥ ವ್ಯವಸ್ಥೆಯಾದರೆ, ಅದು ಚೈನಾ ದೇಶವಿರಬಹುದು, ಅಮೇರಿಕಾ ದೇಶವಿರಬಹುದು, ನಾವು ಅವರಿಗಿಂತಲೂ ಪ್ರಗತಿ ಹೊಂದುವುದಕ್ಕೆ ಸಾಧ್ಯವಾಗುತ್ತದೆ. ಅದು ಬಿಟ್ಟು ಯಾವುದೋ ಒಂದು ದುರಾಸೆಗಾಗಿ, ಓಟಿನ ಕುರ್ಚಿಗಾಗಿ, ಮತದ ಆಸೆಗಾಗಿ, ನಾನು ಹೆಚ್ಚು ಕೊಡಬೇಕು, ನೀನು ಹೆಚ್ಚು ಕೊಡಬೇಕು, ನಾನು ಸೌಲಭ್ಯವನ್ನು ಹೆಚ್ಚಿಗೆ ಕೊಡಬೇಕೆಂಬ ಸ್ಪರ್ಧಾತ್ಮಕ ದೃಷ್ಟಿಯಿಂದ ನಾವು ಸವಲತ್ತುಗಳನ್ನು ಒದಗಿಸುತ್ತಾ ಹೋದರೆ, ನಾವು ಇಷ್ಟೊಂದು ಶಕ್ತಿಯನ್ನು, ಸಂಪತ್ತನ್ನು ಹೊಂದಿರುವಂಥ ನಾಡನ್ನು ಸಹಿತ, ನಾವು ಅಸಹಾಯಕ ನಾಡನ್ನಾಗಿ ಮಾಡುವುದಕ್ಕೆ ಹೊರಟ್ಟಿದ್ದೇವೆನ್ನುವಂಥದ್ದು ನನಗೆ ಅನಿಸುತ್ತಿದೆ. ಅದು ಹೋಗಬೇಕು, ಎಲ್ಲಾ ರೈತರಿಗೆ, ಬಡವರು ಯಾರು ಇದ್ದಾರೆ. ಅವರು ದುಡಿಯುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ರೈತರಿಗೆ ನೀರು ಕೊಡಬೇಕು, ವಿದ್ಯುತ್ ಕೊಡಬೇಕು, ಅವರು ಬೆಳೆದಂಥ ಬೆಳೆಗೆ ಯೋಗ್ಯವಾದ ಬೆಲೆಯನ್ನು ಕೊಟ್ಟರೆ, ಯಾವ ಸಬ್ಸಿಡಿಯ ಅವಶ್ಯಕತೆಯೂ ಇಲ್ಲ, ಬಡ್ಡಿ ಮನ್ನಾ, ಸಾಲ ಮನ್ನಾ, ಅವಶ್ಯಕತೆ ಇರುವುದಿಲ್ಲವೆನ್ನುವ ಮಾತನ್ನು ಈ ಸಭೆಯ ಮುಖಾಂತರ ಹೇಳಬಯಸುತ್ತೇನೆ. ನಿನ್ನೆ ಹೇಳಿದ ಪ್ರಕಾರ ಆ ನೀರನ್ನು ವೈಜ್ಞಾನಿಕವಾಗಿ Drip Irrigation, Sprinkler Irrigation ಮುಖಾಂತರ ಇಡೀ ನಾಡಿನಾದ್ಯಂತ ನೀರಾವರಿಯನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನಮ್ಮ ಸರ್ಕಾರ ಬಂದ ತಕ್ಷಣ ಒಳ್ಳೆಯ ರಸ್ತೆಗಳನ್ನು ಸಾಕಷ್ಟು ಅಭಿವೃದ್ಧಿ ರಸ್ತೆಗಳನ್ನು ಈ ರಾಜ್ಯದಲ್ಲಿ ನಿರ್ಮಾಣ ಮಾಡಿರುವ ಸಂಗತಿಯನ್ನು ನಾವು ಕಂಡಿದ್ದೇವೆ. ನಮ್ಮಲ್ಲಿ ರಸ್ತೆ ಅಭಿವೃದ್ಧಿ ಆದರೆ ಮಾತ್ರ ನಮ್ಮಲ್ಲಿ ಎಲ್ಲಾ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ. ಆ ರೀತಿ ರಸ್ತೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಒಟ್ಟಾರೆಯಾಗಿ ನಮ್ಮ ಸರ್ಕಾರದ ಬಗ್ಗೆ ಹಿರಿಯ ಸದಸ್ಯರುಗಳ ಏನೇನೊ ಅಪಾದನೆಗಳನ್ನು ಇಲ್ಲಿ ಮಾತನಾಡುವಾಗ ಮಾಡಿದರು. ನಾನು ಇಲ್ಲಿಗೆ ಹೊಸದಾಗಿ ಆರಿಸಿ ಬಂದಿರುವುದರಿಂದ, ಹಿಂದಿನ ಸಮ್ಮಿಶ್ರ ಸರ್ಕಾರದಲ್ಲಿ 20 ತಿಂಗಳುಗಳು ನಾವು ಎಷ್ಟೊಂದು ತೊಂದರೆಗಳನ್ನು ಅನುಭವಿಸಿದೆವು. ನಾವು ಏಕಾದರೂ ಎಂ.ಎಲ್.ಎ.ಗಾಗಿ ಆರಿಸಿ ಬಂದೆವೋ, ಜನರಿಗೆ ಏನು ಉತ್ತರವನ್ನು ಹೇಳಬೇಕೆನ್ನುವ ಸ್ಥಿತಿಯಲ್ಲಿ,

ನಾವು ಬಹಳಷ್ಟು ತೊಂದರೆಗಳನ್ನು ಈ 20 ತಿಂಗಳಲ್ಲಿ ಅನುಭವಿಸಿದೆವು.

ಆಗ ಇವರ್‍ಯಾರೂ ಧ್ವನಿಯೆತ್ತಲಿಲ್ಲ. ಇಡೀ ಬಾಗಲಕೋಟೆ ಜಿಲ್ಲೆಯಲ್ಲಿ ಬಿ.ಜೆ.ಪಿ. M.L.A.ಗಳು ಆರಿಸಿ ಬಂದಿದ್ದೇವೆ. ಗುಳೇದಗುಡ್ಡದಿಂದ ಹೆಚ್.ವೈ. ಮೇಟಿಯವರು ಜೆ.ಡಿ.(ಎಸ್)ನ ಒಬ್ಬರೇ ಒಬ್ಬರು ಸದಸ್ಯರು ಮಾತ್ರ ಇದ್ದಾರೆ. ಅವರನ್ನು ಬಿಟ್ಟು ಇಡೀ ಜಿಲ್ಲೆಯಲ್ಲಿ ಬಿ.ಜೆ.ಪಿ. ಸದಸ್ಯರೇ ಇರುವುದರಿಂದ, ಅವರ ಕ್ಷೇತ್ರಕ್ಕೆ 6 ಕೋಟಿ ರೂಪಾಯಿಗಳನ್ನು ರೋಡುಗಳಿಗೆ ಕೊಟ್ಟರೆ, ನಮ್ಮ ಇಡೀ ಜಮಖಂಡಿ ತಾಲ್ಲೂಕಿಗೆ 50 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. 6 ಕೋಟಿ ರೂಪಾಯಿಗಳು ಅವರಿಗೆ, 50 ಲಕ್ಷ ರೂಪಾಯಿಗಳನ್ನು ನಮಗೆ ಕೊಟ್ಟರು. ಆಗ ನಿಮಗೆ ತಾರತಮ್ಯ ಗೊತ್ತಾಗಲಿಲ್ಲ ಈ ತಾರತಮ್ಯ ನೀತಿಯನ್ನು ಹುಟ್ಟುಹಾಕಿದ್ದೇ ಕಾಂಗ್ರೆಸ್ ಪಕ್ಷ ಎಂದು ನಾನು ಈ ಸದನದಲ್ಲಿ ಆಪಾದನೆ ಮಾಡುತ್ತೇನೆ. ನೀವು ಮಾಡಿದ ಪಾಪವನ್ನು ನೀವು ಉಣ್ಣುತ್ತಿದ್ದೀರಿ. ಆದರೆ, ನಮ್ಮ ಸರ್ಕಾರವನ್ನು ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಅಂಥ ತಾರತಮ್ಯ ನೀತಿ ಇನ್ನು ಮುಂದೆ ಆಗಬಾರದು. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ಎಲ್ಲ ಕ್ಷೇತ್ರಗಳನ್ನು ಸಮನಾಗಿ ಅಭಿವೃದ್ಧಿ ಪಡಿಸುವಂಥ ವ್ಯವಸ್ಥೆ ಆಗಬೇಕು ಎನ್ನುವ ವಿನಂತಿಯನ್ನು ಈ ಸಭೆಯ ಮುಖಾಂತರ ನಾನು ಮಾಡಿಕೊಳ್ಳುತ್ತೇನೆ. ಈ ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಎಲ್ಲ ಕ್ಷೇತ್ರಗಳಲ್ಲಿ ದುಡ್ಡಿನ ಹೊಳೆ ಹರಿಯುವಂಥ ಸಂಗತಿಯನ್ನು ನಾವು ನೋಡುತ್ತಿದ್ದೇವೆ. ಇದನ್ನು ನಾನು ಹೇಳುತ್ತಿಲ್ಲ. ಜನರು ಗಲ್ಲಿಗಲ್ಲಿಗಳಲ್ಲಿ, ಓಣಿಓಣಿಗಳಲ್ಲಿ, ಊರುಊರುಗಳಲ್ಲಿ ಮಾತನಾಡುತ್ತಿದ್ದಾರೆ. ಈ ಸಮ್ಮಿಶ್ರ ಸರ್ಕಾರ ಬಂದಾಗ ಇಷ್ಟೊಂದು ಅಭಿವೃದ್ಧಿ ಕೆಲಸಗಳು ಹೇಗೆ ನಡೆದವು? ಈ ರಾಜ್ಯವನ್ನು ಆಳಿದಂಥ ಹಿಂದಿನ ಸರ್ಕಾರಗಳು ಏಕೆ ಮಾಡಿಲಿಲ್ಲ ಎಂದು ಸಾಮಾನ್ಯ ಜನ ನಮ್ಮನ್ನು ಕೇಳುತ್ತಿದ್ದಾರೆ. ಇದಕ್ಕೆ ನಾವು ಸಾಕಷ್ಟು ಉದಾಹರಣೆಗಳನ್ನು ಕೊಡಬಹುದು. ಒಕ್ಕಲುತನದ ಉಪಕರಣಗಳನ್ನು ತೆಗೆದುಕೊಂಡರೆ, ಹಿಂದೆ ಒಂದು ತಾಲ್ಲೂಕಿಗೆ 1–2 ಟ್ರಾಕ್ಟರ್ ಬರುತ್ತಿದ್ದವು, 1–2 ನೇಗಿಲು, ಗಾಡಿಗಳು ಬರುತ್ತಿದ್ದರು. ಆದರೆ ನಮ್ಮ ಸರ್ಕಾರ ಬಂದ ನಂತರ ಸಣ್ಣ ರೈತರಿಂದ ಹಿಡಿದು ದೊಡ್ಡ ರೈತರವರೆಗೆ ಒಂದು ತಾಲ್ಲೂಕಿಗೆ 20–25 ಟ್ರಾಕ್ಟರ್‌ಗಳನ್ನು ಕೊಡುತ್ತಿದ್ದೇವೆ. ನೂರಾರು ಕಲ್ಟಿವೇಟರ್, ನೂರಾರು ರೊಟಾವೇಟರ್, ನೂರಾರು ನೇಗಿಲುಗಳನ್ನು ಕೊಡುತ್ತಿದ್ದೇವೆ. ಎತ್ತು, ಗಾಡಿಗಳನ್ನು ಕೊಡುತ್ತಿದ್ದೇವೆ. ಈ ರೀತಿಯಾಗಿ ಪ್ರತಿಯೊಂದು ಇಲಾಖೆಯಲ್ಲೂ ಅಗಿದೆ. ಬಿಜೆ.ಪಿ.ಯನ್ನು ಅಲ್ಪಸಂಖ್ಯಾತರ ವಿರೋಧಿಗಳು ಎಂದು ಇವರು ಕರೆಯುತ್ತಿದ್ದರು. ಇವರ ಆಡಳಿತದಲ್ಲಿ ಅಲ್ಪ ಸಂಖ್ಯಾತ ಇಲಾಖೆಗೆ ಖರ್ಚು ಮಾಡಿದ ಹಣವೆಷ್ಟು? ಕೇವನ 20–25 ಕೋಟಿ ರೂಪಾಯಿಗಳು. ಆದರೆ ನಮ್ಮ ಸಮ್ಮಿಶ್ರ ಸರ್ಕಾರ ಬಂದಾಗ ಒಮ್ಮಿಂದೊಮ್ಮೆಗೇ 140 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಅದೇ ರೀತಿ ಎಸ್.ಸಿ., ಎಸ್.ಟಿ.ಯವರನ್ನು ಗುತ್ತಿಗೆಗೆ ತೆಗೆದುಕೊಂಡಂತೆ ಮಾತನಾಡುವ ಹಿಂದಿನ ಸರ್ಕಾರಗಳು ಅವರಿಗಾಗಿ

ಎಷ್ಟು ಖರ್ಚು ಮಾಡುತ್ತಿದ್ದರು? ಒಂದು ಸಾವಿರ ಕೋಟಿ ರೂಪಾಯಿಯವರೆಗೂ ಖರ್ಚು ಮಾಡುತ್ತಿರಲಿಲ್ಲ. ಆದರೆ ನಮ್ಮ ಸಮ್ಮಿಶ್ರ ಸರ್ಕಾರ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಎಸ್.ಸಿ., ಎಸ್.ಟಿ.ಯವರಿಗೊಂದು ಸಮಾಜ ಕಲ್ಯಾಣ ಇಲಾಖೆಗೆ ತೆಗೆದಿಟ್ಟುರುವುದನ್ನು ನಾವು ಕಾಣುತ್ತಿದ್ದೇವೆ. ಅದೇ ರೀತಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಹಿಂದೆ ತಾಲ್ಲೂಕಿಗೆ ಒಂದೆರಡು ಕೊಳವೆ ಬಾವಿಗಳು ಬರುತ್ತಿದ್ದವು. ನಾನು M.L.A.ಯಾದಾಗ ಮೊದಲು ನನ್ನ ತಾಲ್ಲೂಕಿಗೆ ಎಸ್.ಸಿ., ಎಸ್.ಟಿ.ಯವರಿಗೆ 5, ಹಿಂದುಳಿದವರಿಗೆ 3 ಎಂದು ಇತ್ತು. ಆದರೆ ನಮ್ಮ ಸರ್ಕಾರ ಗಂಗಾ ಕಲ್ಯಾಣ ಯೋಜನೆಯಲ್ಲಿ ನೂರುಗಟ್ಟಲೆ ಸಂಖ್ಯೆಯಲ್ಲಿ ದಲಿತರ ಮತ್ತು ಹಿಂದುಳಿದ ಜನಾಂಗದವರ ಅಭಿವೃದ್ಧಿಗಾಗಿ ಅವರ ಜಮೀನಿನಲ್ಲಿ ಕೊಳವೆ ಬಾವಿಗಳನ್ನು ಕೊರೆಸುವುದರ ಮುಖಾಂತರ ಅವರ ಬಾಳಿನಲ್ಲಿ ಬೆಳಕಾಗಿರತಕ್ಕಂಥ ಸಂಗತಿಯನ್ನು ನಾವು ಕಾಣುತ್ತಿದ್ದೇವೆ. ಈ ರೀತಿ ನಾವು ಲೆಕ್ಕ ಮಾಡುತ್ತಾ ಹೋದರೆ, ಪ್ರತಿಯೊಂದು ಕ್ಷೇತ್ರದಲ್ಲೂ ಸಹ ಯುದ್ಧೋಪಾದಿಯಲ್ಲಿ ಅಭಿವೃದ್ಧಿ ಕೆಲಸಗಳು ಆಗುವುದನ್ನು ಕಂಡು ಜನ ಕಕ್ಕಾಬಿಕ್ಕಿಯಾಗಿದ್ದಾರೆ. ಇವರಿಗೆ ದುಡ್ಡು ಎಲ್ಲಿಂದ ಬಂತು? ಈ ಸರ್ಕಾರದವರು ಜಾದೂ ಮಾಡಿದರೇ ಎಂದು ಜನರು ಮಾತನಾಡುತ್ತಿದ್ದಾರೆ. ಹಿಂದಿನ ಸರ್ಕಾರಗಳೂ ಸಹ ಆಳಿದರಲ್ಲ, ಆಗ ಏಕೆ ಇವುಗಳು ಆಗಲಿಲ್ಲ ಎಂದು ಮಾತನಾಡುತ್ತಿದ್ದಾರೆ. ನಾವು ಪ್ರತಿಯೊಂದು ಹಳ್ಳಿಗಳಲ್ಲಿಯೂ ಹತ್ತತ್ತು ರೋಡುಗಳನ್ನು ಮಾಡಿದ್ದೇವೆ, ಗಂಗಾ ಕಲ್ಯಾಣ ಯೋಜನೆಯನ್ನು ಮಾಡಿದ್ದೇವೆ, ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳೀಗೆ ಸೈಕಲ್ಲುಗಳನ್ನು ಕೊಟ್ಟಿದ್ದೇವೆ, ಭಾಗ್ಯಜ್ಯೋತಿ ಯೋಜನೆಯಲ್ಲಿ ಮನೆಗಳಿಗೆ ಲೈಟು ಕೊಟ್ಟಿದ್ದೇವೆ, ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಬಡತನದ ಕುಟುಂಬದಲ್ಲಿ ಹುಟ್ಟಿರುವ ಹೆಣ್ಣುಮಗುವಿಗೆ ಹತ್ತು ಸಾವಿರ ರೂಪಾಯಿಗಳ ಡಿಪಾಸಿಟ್ ಇಡುವಂಥ ಕಾರ್ಯಕ್ರಮವಾಗಿದೆ. ಈ ರೀತಿಯಾಗಿ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯೇ ಆಗುತ್ತದೆ. ಇಷ್ಟೊಂದು ಅಭಿವೃದ್ಧಿ ಕೆಲಸಗಳನ್ನು ಮಾಡಿದರೂ ಸಹ ಏಕೋ, ಏನೋ ವಿರೋಧ ಪಕ್ಷದವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಈ ರಾಜ್ಯ ಅಭಿವೃದ್ಧಿಯಾಗಬೇಕಾದರೆ ಮೂಲ ಶಿಕ್ಷಣ ಬೇಕು. ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ನಮ್ಮ ಕ್ಷೇತ್ರಗಳಿಗೆ ಒಂದು ಹೈಸ್ಕೂಲನ್ನು ಅಥವಾ ಒಂದು ಕಾಲೇಜನ್ನು ಕೊಡುವಂಥ ವ್ಯವಸ್ಥೆಯಾಗಲಿಲ್ಲ. ಆದರೆ ಈಗ ನಮ್ಮ ಸರ್ಕಾರ ಹೈಸ್ಕೂಲು, ಕಾಲೇಜುಗಳನ್ನು ಕೊಡುತ್ತಿರುವಾಗ, ತಾರತಮ್ಯ ಮಾಡುತ್ತಿದ್ದಾರೆ ಎಂದು ಇವರು ಹೇಳುತ್ತಿರುವ ಸಂಗತಿಯನ್ನು ನೋಡಿದರೆ ನಮಗೆ ಒಂದು ನಮೂನೆಯಾಗುತ್ತದೆ. ಏಕೆಂದರೆ, ಇವರ ಆಡಳಿತದಲ್ಲಿ ನಮಗೆ ಕೊಡುವುದು ಇರಲಿ. ಅವರ ಪಕ್ಷದ ಸದಸ್ಯರಿಗೂ ಸಹ ಹೈಸ್ಕೂಲು, ಜೂನಿಯರ್ ಕಾಲೇಜುಗಳನ್ನು ಕೊಡಲಿಲ್ಲ. ಇವರು ಹೇಗೆ ರಾಜ್ಯದ ಪ್ರಗತಿಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ? ಮೊದಲನೆಯದಾಗಿ, ರಾಜ್ಯದಲ್ಲಿ ಶಿಕ್ಷಣದ ಪ್ರಗತಿಯಾಗಬೇಕು. ನಮ್ಮ ಸಮ್ಮಿಶ್ರ ಸರ್ಕಾರ ಆಡಳಿತಕ್ಕೆ ಬಂದ ಮೊದಲನೆಯ ವರ್ಷದಲ್ಲಿಯೇ 500 ಹೈಸ್ಕೂಲುಗಳನ್ನು

ಈ ವರ್ಷ 500 ಹೈಸ್ಕೂಲುಗಳನ್ನು ಕೊಡುವ ಯೋಜನೆ ಮಾಡಿದ್ದು, ಈ ರಾಜ್ಯದ ಅಭಿವೃದ್ಧಿಯ ದಷ್ಟಿಯಿಂದ ನಮ್ಮ ಸರ್ಕಾರ ಯೋಗ್ಯವಾಗಿದೆ ಎನ್ನುವ ಮಾತನ್ನು ಜನ ಮಾತನಾಡುವಂತಾಗಿದೆ. ಅದಲ್ಲದೇ, ಜೂನಿಯರ್ ಕಾಲೇಜುಗಳು, ಪದವಿ ಕಾಲೇಜುಗಳು, ಪದವಿ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಡಿಪ್ಲೋಮಾ ಕಾಲೇಜುಗಳನ್ನು ಕೊಡುವುದನ್ನು ನೋಡಿದರೆ, ಒಟ್ಟಾರೆ ಈ ಸಮ್ಮಿಶ್ರ ಸರ್ಕಾರ ಈ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಜನ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಭವಿಷ್ಯದಲ್ಲಿ ಈ ಸರ್ಕಾರದಲ್ಲಿ ಇನ್ನೂ ಇರಬೇಕು. ಈ ರಾಜ್ಯದ ಅಭಿವೃದ್ಧಿಯಾಗಬೇಕು. ಇಂಥ ಸರ್ಕಾರದಿಂದ ಮಾತ್ರ ಜನರ ಕಷ್ಟನಷ್ಟಗಳನ್ನು ಹೋಗಲಾಡಿಸಲು ಸಾಧ್ಯವಿದೆಯೇ ವಿನಃ 50 ವರ್ಷಗಳವರೆಗೆ ಈ ನಾಡನ್ನಾಳಿದ ಹಿಂದಿನ ಸರ್ಕಾರಗಳು ದುಡ್ಡು ಖರ್ಚು ಮಾಡಿರುತ್ತಿದ್ದಾರೂ ಅದು ನಿಜವಾಗಿಯೂ ಫಲಾನುಭವಿಗಳಿಗೆ ಮುಟ್ಟುತ್ತಿರಲಿಲ್ಲ ಎಂದು ಜನರು ಬೀದಿಯಲ್ಲಿ ಮಾತನಾಡುವಂತಾಗಿದೆ. ಇಷ್ಟೊಂದು ಅಭಿವೃದ್ಧಿ ಕಾರ್ಯಗಳಾದರೂ ಸಹ ವಿರೋಧ ಪಕ್ಷದವರು ಮಾತನಾಡುತ್ತಾರೆ. ಜನರಿಗೆ ತೋರಿಸಲಿಕ್ಕಾದರೂ ನಾವು ವಿರೋಧ ಮಾಡಬೇಕು ಎನ್ನುವ ದೃಷ್ಟಿಯಲ್ಲಿ ಅವರು ಮಾತನಾಡುತ್ತಾರೆಯೇ ವಿನಃ ಅವರ ಆತ್ಮದಲ್ಲಿ, ನಾವು ಇದ್ದಾಗ ಇಷ್ಟು ದುಡ್ಡು ಬರಲಿಲ್ಲವಲ್ಲ ಎನ್ನುವ ಬೇದ ಮಾತ್ರ ದಿನನಿತ್ಯ ಕಾಣುತ್ತದೆ. ಅಂಥ ಸಂಗತಿಯನ್ನು ನಾವು ಕಾಣುತ್ತಿದ್ದೇವೆ. ಇಲ್ಲಿ ಮಾತನಾಡುವಂಥ ಎಲ್ಲರೂ ಸಹ, ನಮ್ಮ ಸರ್ಕಾರದಲ್ಲಿ ಏನೂ ಮಾಡಲಿಲ್ಲ, ನಿಮ್ಮ ಸರ್ಕಾರ ಬಂದಾಗ ರಾಜ್ಯದಲ್ಲಿ ಕೆಲಸ ಆಗುತ್ತಿದೆ ಎನ್ನುವ ಅಳುಕನ್ನು ಹೇಳುತ್ತಿದ್ದಾರೆ. ಕೇವಲ ವಿರೋಧಕ್ಕಾಗಿ ವಿರೋಧ ಮಾಡುತ್ತಿದ್ದಾರೆಯೇ ವಿನಃ ಅವರ ಆತ್ಮದಿಂದ ವಿರೋಧ ಮಾಡುವಂಥ ಸಂಗತಿ ಅವರಲ್ಲಿಯೂ ಇಲ್ಲ. ಅದಕ್ಕಾಗಿ ಈ ಸರ್ಕಾರ ರಾಜ್ಯದಲ್ಲಿ ಇನ್ನೂ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು. ಈ ರಾಜ್ಯವನ್ನು ಸುಭಿಕ್ಷವಾಗಿ ಮಾಡಬೇಕು, ಒಕ್ಕಲುತನವನ್ನು ಅಭಿವೃದ್ಧಿ ಮಾಡಬೇಕು. ನೇಕಾರರಿಗೆ ಒಂದು ಒಳ್ಳೆಯ ಯೋಜನೆಯನ್ನು ಮಾಡಬೇಕು, ಅಭಿವೃದ್ಧಿ ಕೆಲಸಗಳಿಗಾಗಿ ಇನ್ನೂ ಯಾರಿಗೆ ಹಣ ಮುಟ್ಟಿಲ್ಲವೋ ಅವರಿಗೆ ಮುಟ್ಟಿಸುವಂಥ ವ್ಯವಸ್ಥೆಯಾಗಬೇಕು ಎನ್ನುವುದನ್ನು ಹೇಳುತ್ತಾ, ಈ ಸಭೆಯಲ್ಲಿ ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶ ಕೊಟ್ಟಿರತಕ್ಕಂಥ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಸಭೆಯನ್ನು ಎರಡೂವರೆ ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸಭೆಯ ಮಧ್ಯಾಹ್ನ 1 ಗಂಟೆ 36 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)